ಸೋಮವಾರ, ಆಗಸ್ಟ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 224 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪದಕದ ಸಂಭ್ರಮ... ಒಲಿಂಪಿಕ್ಸ್ ವಾಲಿಬಾಲ್ ಚಿನ್ನ ಗೆದ್ದ ಇಟಲಿ ತಂಡದ ಪಾವೊಲಾ ಒಗೆಚಿ ಎಗೊನು ಅವರು ಬೆಳ್ಳಿ ಗೆದ್ದ ಅಮೆರಿಕ ತಂಡದ ಚಿಯಾಕಾ ಒಗ್ಬೊಗು ಜತೆ ಖುಷಿ ಹಂಚಿಕೊಂಡಿದ್ದು ಹೀಗೆ...

ಆಳ-ಅಗಲ: ಡಿಜಿಟಲ್ ಶಿಕ್ಷಣ ಕ್ರಾಂತಿ

‘ಸೆಬಿ ವಿಶ್ವಾಸಾರ್ಹತೆ ಮೇಲೆ ದಾಳಿ’ 12

ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಕೊಲೆ ಕೃತ್ಯ

ಭತ್ತದ ಪೈರು ನಾಟ ಮಾಡಿದ ಎಚ್‌ಡಿಕೆ 10

‘ಉಸಿರುಗಟ್ಟಿಸಿ ಕೊಲೆ, ಬಳಿಕ ಅತ್ಯಾಚಾರ’ 11

ತುಂಗಭದ್ರಾ ಅಣೆಕಟ್ಟೆಯಲ್ಲಿ ಅವಘಡ ● 4–5 ದಿನಗಳಲ್ಲಿ ಗೇಟ್ ಅಳವಡಿಕೆಗೆ ಪ್ರಯತ್ನ

19ನೇ ಕ್ರಸ್ಟ್‌ಗೇಟ್ ನೀರುಪಾಲು

ಪ್ರಜಾವಾಣಿ ವಾರ್ತೆ

ಹೊಸಪೇಟೆ/ಕೊಪ್ಪಳ: ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ಶನಿವಾರ ರಾತ್ರಿ ಕೊಚ್ಚಿ ಹೋಗಿದೆ. ಇದರಿಂದ ರೈತರ ಎರಡು ಬೆಳೆಯ ಕನಸು ನುಚ್ಚು ನೂರಾಗಿದೆ. ನಾಲ್ಕೈದು ದಿನಗಳೊಳಗೆ ಗೇಟ್ ಮತ್ತೆ ಅಳವಡಿಸಿ ಒಂದು ಬೆಳೆಗಾದರೂ ನೀರು ಒದಗಿಸುವ ಕಾರ್ಯ ಸಮರೋಪಾದಿಯಲ್ಲಿ ಸಾಗಿದೆ.

ಎಲ್ಲ ಗೇಟ್ ತೆರೆದು ನದಿಗೆ ನೀರು ಹರಿಸಲಾಗುತ್ತಿದೆ.

‘ಗೇಟ್ ಬಲಭಾಗದ ಕೊಂಡಿ ಮತ್ತು ಗೇಟ್ ನಡುವೆ ಇರುವ ಬೆಸುಗೆ ತುಂಡಾಗಿದ್ದರಿಂದ ಗೇಟ್ ಸಂಪೂರ್ಣವಾಗಿ ಒಮ್ಮುಖವಾಗಿ ಹೊರಳಿಕೊಂಡಿತ್ತು. ನೀರಿನ ರಭಸಕ್ಕೆ ಎಡಭಾಗದ ಕೊಂಡಿ ಸಹ ಕಳಚಿ ಇಡೀ ಗೇಟ್ ಕೊಚ್ಚಿಕೊಂಡು ಹೋಗಿ ಈ ಅನಾಹುತ ಸಂಭವಿಸಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ವೇಳೆ ಗೇಟ್‌ಗಳ ನಿರ್ವಹಣೆ ಕುರಿತಂತೆ ಹಲವಾರು ಸಂದೇಹಗಳೂ ವ್ಯಕ್ತವಾಗಿವೆ.

70 ವರ್ಷಗಳ ಅಣೆಕಟ್ಟೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಗೇಟ್ ಸಂಪೂರ್ಣ ಕೊಚ್ಚಿಹೋಗಿದೆ. ನೀರಿನ ರಭಸಕ್ಕೆ 48 ಟನ್ ತೂಕದ ಗೇಟ್ ಸುಮಾರು 100 ಮೀಟರ್‌ನಷ್ಟು ದೂರಕ್ಕೆ ಹೋಗಿದ್ದು, ಅದು ನಿಷ್ಪ್ರಯೋಜಕವಾಗಿದೆ. ‘ಎಲ್ಲಾ ಗೇಟ್‌ಗಳ ನಿರ್ವಹಣೆ ಸಮರ್ಪಕವಾಗಿಯೇ ನಡೆದಿದೆ. ಚೈನ್ ಲಿಂಕ್‌ನ ಬೆಸುಗೆ ಕಳಚಿಕೊಂಡಿದ್ದೇ ಈ ಅನಾಹುತಕ್ಕೆ ಕಾರಣ’ ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.



ತುಂಗಭದ್ರಾ ಅಣೆಕಟ್ಟೆಯ 19ನೇ ಗೇಟ್ ಕೊಚ್ಚಿ ಹೋದ ಕೆಲವೇ ಗಂಟೆಗಳಲ್ಲಿ ಭಾನುವಾರ ನಸುಕಿನಲ್ಲಿ ಕಂಡ ನೋಟ –ಪ್ರಜಾವಾಣಿ ಚಿತ್ರ/ ಲವ ಕೆ.

6ನೇ ಪುಟ ನೋಡಿ

ಪ್ರವಾಹದ ಆತಂಕ ಇಲ್ಲ

ತುಂಗಭದ್ರಾ ಅಣೆಕಟ್ಟೆಯಿಂದ ಹತ್ತು ದಿನಗಳ ಹಿಂದೆ 1.80 ಲಕ್ಷ ಕ್ಯುಸೆಕ್‌ನಷ್ಟು ನೀರನ್ನು ಹೊರಬಿಡಲಾಗಿತ್ತು. ಆಗಲೂ ಯಾವುದೇ ರೀತಿಯ ಪ್ರವಾಹ ಉಂಟಾಗಿರಲಿಲ್ಲ. ಈಗಲೂ ಅಷ್ಟೇ, ನದಿಗೆ ನೀರು ಹರಿಸುವುದರಿಂದ ಪ್ರವಾಹದ ಅಪಾಯ ಇಲ್ಲ ಎಂದು ತುಂಗಭದ್ರಾ ಮಂಡಳಿ ಸ್ಪಷ್ಟಪಡಿಸಿದೆ.

ಪ್ರವಾಸಿಗರಿಗೆ ನಿರ್ಬಂಧ: ಸುರಕ್ಷತೆಯ ದೃಷ್ಟಿಯಿಂದ ತುಂಗಭದ್ರಾ ಅಣೆಕಟ್ಟೆಯ ಎರಡು ಕಿ.ಮೀ ಸುತ್ತಮುತ್ತ ಜನರ ಓಡಾಟಕ್ಕೆ ನಿರ್ಬಂಧ ಹೇರಲಾಗಿದೆ. ಗೇಟ್ ಅಳವಡಿಕೆ ಕಾರ್ಯ ಕೊನೆಗೊಳ್ಳುವವರೆಗೆ ಅಣೆಕಟ್ಟೆಯತ್ತ ಬಾರದಂತೆ ಪ್ರವಾಸಿಗರಿಗೆ ಸೂಚಿಸಲಾಗಿದೆ.

599 ಎಕರೆ ಭೂಮಿ ಮರುವಶಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಈಶ್ವರ ಬಿ. ಖಂಡ್ರೆ

ಬೆಂಗಳೂರು: ನಗರದ ಪೀಣ್ಯ ಜಾಲಹಳ್ಳಿ ಪ್ಲಾಂಟೇಷನ್ ಸರ್ವೆ ನಂ. 1 ಮತ್ತು 2ರಲ್ಲಿ ₹10 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ 599 ಎಕರೆ ಅಧಿಸೂಚಿತ ಅರಣ್ಯ ಪ್ರದೇಶವನ್ನು ಮರಳಿ ಪಡೆಯಲು ಕ್ರಮ ವಹಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಈ ಕುರಿತು ಟಿಪ್ಪಣಿ ಕಳುಹಿಸಿರುವ ಸಚಿವರು, ‘ಅರಣ್ಯ ನಿಯಮಾವಳಿ 1878ರ ಸೆಕ್ಷನ್ 9ರಡಿಯಲ್ಲಿ ಅರಣ್ಯ ಎಂದು ಘೋಷಣೆಯಾಗಿ, ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ (1896 ಜೂನ್ 11) ಗೆಜೆಟ್ ಅಧಿಸೂಚನೆ ಆಗಿರುವ ಸಾವಿರಾರು ಕೋಟಿ ಬೆಲೆಯ ಭೂಮಿಯನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಂಟಿ ಸಂಸ್ಥೆಯು ಅಕ್ರಮವಾಗಿ ಸರ್ಕಾರಿ ಇಲಾಖೆಗಳು, ವಿವಿಧ ಸಂಸ್ಥೆಗಳು ಮತ್ತು ಖಾಸಗಿಯವರಿಗೆ ಮಾರಾಟ ಮಾಡುತ್ತಿದೆ. ಒಟ್ಟು 599 ಎಕರೆ ಅರಣ್ಯ ಭೂಮಿಯ ಪೈಕಿ ಎಚ್‌ಎಂಟಿಗೆ ನೀಡಲಾಗಿದೆ ಎನ್ನಲಾದ 469 ಎಕರೆ 32 ಗುಂಟೆಯಲ್ಲಿ ಖಾಲಿ ಇರುವ 281 ಎಕರೆಯನ್ನು ತಕ್ಷಣ ವಶಕ್ಕೆ ಪಡೆಯಬೇಕು. ಉಳಿದ ಭೂಮಿ ವಶಕ್ಕೆ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಸೂಚಿಸಿದ್ದಾರೆ.

10ನೇ ಪುಟ ನೋಡಿ

‘ಅರಣ್ಯ ಭೂಮಿ ದಾನ ನೀಡಲು ಅವಕಾಶ ಇಲ್ಲ’

‘ಅರಣ್ಯ ನಿಯಂತ್ರಣ ಕಾಯ್ದೆ 1900ರ ಸೆಕ್ಷನ್ 30ರ ಉಪ ಸೆಕ್ಷನ್ (1)ರ ಅನ್ವಯ ಯಾವುದೇ ಅರಣ್ಯ ಭೂಮಿಯನ್ನು ದಾನವಾಗಿ ನೀಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಅರಣ್ಯ ಭೂಮಿ ಮಂಜೂರಾತಿಗೂ ಮೊದಲು ಅರಣ್ಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಲು ಡಿನೋಟಿಫೈ ಮಾಡಿ ಗೆಜೆಟ್ ಅಧಿಸೂಚನೆ ಹೊರಡಿಸಬೇಕು.

10ನೇ ಪುಟ ನೋಡಿ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ

ಗವಿಮಠ, ಕೊಪ್ಪಳ

ಒಳಪುಟದಲ್ಲಿ

ಅಂಗನವಾಡಿ: ಆಹಾರದಲ್ಲಿ ಸತ್ತ ಇಲಿ! 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಜೆಪಿಯ ‘ಅತೃಪ್ತ’ ನಾಯಕರ ಸಭೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮುಡಾ’ ಹಗರಣ ವಿರೋಧಿಸಿ ಬಿಜೆಪಿ ನಾಯಕರು ಬೆಂಗಳೂರಿನಿಂದ ಮೈಸೂರಿನವರೆಗೆ ನಡೆಸಿದ ಪಾದಯಾತ್ರೆ ಪೂರ್ಣಗೊಂಡ ಬೆನ್ನಲ್ಲೇ ತಾಲ್ಲೂಕಿನ ಕಿಣಯೇ ಗ್ರಾಮದ ಬಳಿಯ ರೆಸಾರ್ಟ್‌ನಲ್ಲಿ ಬಿಜೆಪಿಯ ಹಲವು ‘ಅತೃಪ್ತ ನಾಯಕರು’ ಭಾನುವಾರ ಸಭೆ ನಡೆಸಿದರು.

ಶಾಸಕರಾದ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಪ್ರತಾಪ ಸಿಂಹ, ಜಿ.ಎಂ.ಸಿದ್ಧೇಶ್ವರ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಜೆಡಿಎಸ್ ಮುಖಂಡ ಎನ್.ಆರ್ ಸಂತೋಷ ಸೇರಿ ಹಲವು ಮುಖಂಡರು ಪಾಲ್ಗೊಂಡಿದ್ದರು.

> **ಅತೃಪ್ತ ನಾಯಕರು ಸಭೆ ನಡೆಸಿದ ಬಗ್ಗೆ ಮಾಹಿತಿ ಇಲ್ಲ. ಒಂದು ವೇಳೆ ಹಾಗೆ ಆಗಿದ್ದರೆ ವರಿಷ್ಠರು ಅವರ ಜತೆ ಮಾತನಾಡಿ ಸಮಸ್ಯೆ ಪರಿಹರಿಸಲಿದ್ದಾರೆ**
>
> **ಪ್ರಲ್ಹಾದ ಜೋಶಿ,** ಕೇಂದ್ರ ನಾಗರಿಕ ಸರಬರಾಜು ಮತ್ತು ಆಹಾರ ಸಚಿವ

10ನೇ ಪುಟ ನೋಡಿ

ಅತೃಪ್ತರ ಸಭೆ ಅಲ್ಲ: ಲಿಂಬಾವಳಿ

‘ನಮ್ಮ ಸಭೆಯನ್ನು ಭಿನ್ನಮತೀಯ ಚಟುವಟಿಕೆ, ಅತೃಪ್ತರ ಸಭೆ ಎಂದು ಬಿಂಬಿಸಲಾಗುತ್ತಿದೆ. ಆದರೆ, ಅತೃಪ್ತರ ಸಭೆಯಲ್ಲ’ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಧಾನಸಭೆ ಚುನಾವಣೆಯಲ್ಲಿ ನಮಗೆ ಹೀನಾಯ ಸೋಲಾಯಿತು. ನಂತರ ನಡೆದ ಲೋಕಸಭೆ ಚುನಾವಣೆಯಲ್ಲೂ ನಮ್ಮ ನಿರೀಕ್ಷೆ ತಲುಪಲಾಗಲಿಲ್ಲ. ರಾಜ್ಯದಲ್ಲಿ ಮುಂಬರುವ ಚುನಾವಣೆ ಗಮನದಲ್ಲಿ ಇರಿಸಿಕೊಂಡು ಈ ಸಭೆ ಮಾಡಿದ್ದೇವೆ. ನಮ್ಮಲ್ಲಿರುವ ದೋಷ ಸರಿಪಡಿಸಿಕೊಂಡು, ಪಕ್ಷ ಬಲಪಡಿಸುವ ವಿಚಾರವಾಗಿ 12 ಮಂದಿ ನಾಯಕರು ಸೇರಿಕೊಂಡು ಚರ್ಚಿಸಿದ್ದೇವೆ. ಇದು ಬಿಜೆಪಿ ಬಲವರ್ಧನೆಗಾಗಿಯೇ ಮಾಡಿದ ಸಭೆ’ ಎಂದು ಸಮರ್ಥಿಸಿಕೊಂಡರು.

10ನೇ ಪುಟ ನೋಡಿ

ವಿದಾಯ ಪ್ಯಾರಿಸ್

ಪ್ಯಾರಿಸ್‌ನ ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಒಲಿಂಪಿಕ್ ಕೂಟದ ಮುಕ್ತಾಯ ಸಮಾರಂಭದಲ್ಲಿ ಬೇರೆ ಬೇರೆ ದೇಶಗಳ ಧ್ವಜಧಾರಿಗಳ ಪಥ ಸಂಚಲನ ಗಮನ ಸೆಳೆಯಿತು –ಎಎಫ್‌ಪಿ ಚಿತ್ರ

ಇನ್ನಷ್ಟು ಸುದ್ದಿಗಳು 13

ಆನ್‌ಲೈನ್ ಆಫರ್

2 ಟಿಕೆಟ್ ಖರೀದಿಸಿ ಮತ್ತು 1 ಟಿಕೆಟ್ ಅನ್ನು ಉಚಿತವಾಗಿ ಪಡೆಯಿರಿ

ಈಗಲೇ ಬುಕ್ ಮಾಡಿ ಮತ್ತು 15-19ನೇ ಆಗಸ್ಟ್‌ನ ವಾರಾಂತ್ಯದಲ್ಲಿ ಯಾವುದೇ ಸಮಯದಲ್ಲಿ ಬನ್ನಿ

ವಾಕ್ ಇನ್ ಆಫರ್ (ಬೆಳಿಗ್ಗೆ 11 ಗಂಟೆಯ ಮೊದಲು)

3 ಟಿಕೆಟ್ ಖರೀದಿಸಿ ಮತ್ತು 1 ಟಿಕೆಟ್ ಅನ್ನು ಉಚಿತವಾಗಿ ಪಡೆಯಿರಿ

31 ಆಗಸ್ಟ್ ತನಕ ಮಾನ್ಯವಾಗಿರುತ್ತದೆ

ಬುಕ್ ಮಾಡಲು ಸ್ಕ್ಯಾನ್ ಮಾಡಿ

ಒಮ್ಮೆ ಪಾವತಿಸಿ, ರೈಡ್ ಗಳಿಗೆ ಮಿತಿಯಿಲ್ಲದ ಆಕ್ಸೆಸ್ ಪಡೆಯಿರಿ

60+ ಡ್ರೈ ಮತ್ತು ವೆಟ್ ರೈಡ್‌ಗಳು

ಉಷ್ಣತೆ ನಿಯಂತ್ರಿತ ಪೂಲ್‌ಗಳು

INDIA'S LARGEST AMUSEMENT PARK CHAIN | BOOK NOW AT WWW.WONDERLA.COM OR CALL: 96331 96332 / 080-37230333

ಹಲವು ರೈಲುಗಳ ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಮಂಗಳೂರು: ಹಾಸನದ ಸಕಲೇಶಪುರ ಮತ್ತು ಬಾಳ್ಳುಪೇಟೆ ನಿಲ್ದಾಣಗಳ ನಡುವೆ ಗುಡ್ಡ ಕುಸಿದು ಹಳಿಯ ಮೇಲೆ ಮಣ್ಣು ಬಿದ್ದಿರುವ ಕಾರಣ ಹಲವು ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಸೋಮವಾರ (ಆ.12) ಮತ್ತು ಮಂಗಳವಾರ (ಆ.13) ಬೆಂಗಳೂರಿನಿಂದ ಹೊರಡಬೇಕಿದ್ದ 16595 ಸಂಖ್ಯೆಯ ಬೆಂಗಳೂರು- ಕಾರವಾರ ಎಕ್ಸ್‌ಪ್ರೆಸ್, 13ರಂದು ಕಾರವಾರದಿಂದ ಹೊರಡಬೇಕಿದ್ದ ಕಾರವಾರ– ಬೆಂಗಳೂರು ಎಕ್ಸ್‌ಪ್ರೆಸ್ (16596). ಸೋಮವಾರ ಮತ್ತು ಮಂಗಳವಾರ ಹೊರಡಬೇಕಿದ್ದ ಬೆಂಗಳೂರು– ಮುರುಡೇಶ್ವರ ಎಕ್ಸ್‌ಪ್ರೆಸ್ (16585) ಮತ್ತು ಮುರುಡೇಶ್ವರ– ಬೆಂಗಳೂರು ಎಕ್ಸ್‌ಪ್ರೆಸ್ (16586) ರದ್ದು ಮಾಡಲಾಗಿದೆ.

ಸೋಮವಾರ ಮತ್ತು ಮಂಗಳವಾರ ವಿಜಯಪುರದಲ್ಲಿ ಹೊರಡಬೇಕಿದ್ದ ವಿಜಯಪುರ– ಮಂಗಳೂರು ಸೆಂಟ್ರಲ್ ವಿಶೇಷ ರೈಲು (07377), ಮಂಗಳವಾರ ಮತ್ತು ಬುಧವಾರ ಮಂಗಳೂರಿನಿಂದ ಹೊರಡಬೇಕಿದ್ದ ಮಂಗಳೂರು ಸೆಂಟ್ರಲ್– ವಿಜಯಪುರ ಎಕ್ಸ್‌ಪ್ರೆಸ್ (07378), 13ರಂದು ಹೊರಡಲಿರುವ ಕಾರವಾರ– ಯಶವಂತಪುರ ಎಕ್ಸ್‌ಪ್ರೆಸ್ (16516), ಯಶವಂತಪುರ– ಕಾರವಾರ ಎಕ್ಸ್‌ಪ್ರೆಸ್ (16575), 12 ಮತ್ತು 13ರಂದು ಹೊರಡಬೇಕಿದ್ದ ಕಣ್ಣೂರು– ಬೆಂಗಳೂರು ಎಕ್ಸ್‌ಪ್ರೆಸ್ (16512) ಹಾಗೂ ಬೆಂಗಳೂರಿನಿಂದ ಹೊರಡಬೇಕಿದ್ದ ಬೆಂಗಳೂರು– ಕಣ್ಣೂರು ಎಕ್ಸ್‌ಪ್ರೆಸ್ (16511) ರೈಲನ್ನು ಸ್ಥಗಿತಗೊಳಿಸಲಾಗಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಭಾಷಾ ಬೆಸುಗೆಗೆ ವೇದಿಕೆ ಒದಗಿಸಿದ ಗೋಷ್ಠಿಗಳು • ರಂಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು

ಬುಕ್ ಬ್ರಹ್ಮ ಸಾಹಿತ್ಯೋತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಸ್ಪರ ಕೊಡು–ಕೊಳ್ಳುವಿಕೆಯ ಮೂಲಕ ಭಾಷೆ ಮತ್ತು ಸಾಹಿತ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸುವುದು ಹಾಗೂ ದಕ್ಷಿಣ ಭಾರತದ ಭಾಷೆಗಳ ಸಂಬಂಧವನ್ನು ಸಂಭ್ರಮಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಮೂರು ದಿನಗಳ 'ಬುಕ್ ಬ್ರಹ್ಮ ಸಾಹಿತ್ಯೋತ್ಸವ' ಭಾನುವಾರ ಸಂಪನ್ನವಾಯಿತು.

ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ನಡೆದ ಈ ಉತ್ಸವಕ್ಕೆ ಸಾವಿರಾರು ಮಂದಿ ಸಾಹಿತ್ಯಾಸಕ್ತರು ಸಾಕ್ಷಿಯಾದದ್ದು ವಿಶೇಷ. ಸಾಹಿತ್ಯ, ಸಿನಿಮಾ, ಭಾಷೆ, ಸಾಮಾಜಿಕ ಮಾಧ್ಯಮ ಸೇರಿ ಹಲವು ವಿಷಯಗಳ ಬಗ್ಗೆ ಒಳನೋಟಗಳಿಂದ ಕೂಡಿದ ಚರ್ಚೆ–ಸಂವಾದಗಳಿಗೆ ಉತ್ಸವ ವೇದಿಕೆ ಕಲ್ಪಿಸಿತು. 'ಮಂಟಪ', 'ಮಥನ' ಹಾಗೂ 'ಅಂಗಳ' ಎಂಬ ಮೂರು ಮುಖ್ಯ ವೇದಿಕೆಗಳಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳ ಬಗ್ಗೆ ಒಂದೆಡೆ ಚಿಂತನ ಮಂಥನ ನಡೆದರೆ, ಇನ್ನೊಂದೆಡೆ ಇತ್ತೀಚಿನ ಕೃತಿಗಳ ಹೂರಣಗಳ ಬಗ್ಗೆ ಅವಲೋಕನ ನಡೆಯಿತು.

ಹಿಂದೂಸ್ತಾನಿ ಸಂಗೀತ, ಯಕ್ಷಗಾನ ತಾಳ–ಮದ್ದಳೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ರಂಜಿಸಿದವು. ನಗರದ ವಿವಿಧೆಡೆಯಿಂದ ಬಂದ ಸಾಹಿತ್ಯಾಸಕ್ತರು, ಬೆಳಿಗ್ಗೆಯಿಂದ ಸಂಜೆಯವರೆಗೆ ಉತ್ಸಾಹದಿಂದ ಗಹನವಾದ ಚರ್ಚೆಗಳನ್ನು ಆಲಿಸಿದರು. ದೇಶದ ವಿವಿಧೆಡೆಗಳಿಂದ ಬಂದಿದ್ದ ಸುಮಾರು 300 ವಿದ್ವಾಂಸರು, ಲೇಖಕರು ಹಂಚಿಕೊಂಡ ಹೊಳಹುಗಳ ಬೆಳಕಿನೊಂದಿಗೆ ಈ ಉತ್ಸವ ಕಳೆಗಟ್ಟಿತು.

ತಮ್ಮಿಷ್ಟದ ಸಾಹಿತಿಗಳ ಮಾತುಗಳನ್ನು ಆಲಿಸಿದ ಅಭಿಮಾನಿ ಬಳಗ, ಪುಸ್ತಕಗಳಿಗೆ ಅವರ ಹಸ್ತಾಕ್ಷರಗಳನ್ನು ಪಡೆದುಕೊಂಡಿತು.

ಉತ್ಸವದಲ್ಲಿ ಕನ್ನಡ ಭಾಷೆಯ ಜತೆಗೆ ತಮಿಳು, ಮಲಯಾಳ, ತೆಲುಗು ಮತ್ತು ಇಂಗ್ಲಿಷ್ ಭಾಷೆಯ ಪುಸ್ತಕಗಳ ಆಯ್ಕೆ ಸಾಹಿತ್ಯ ಪ್ರೇಮಿಗಳಿಗೆ ಇದ್ದವು. ಪುಸ್ತಕಗಳ ಬಿಡುಗಡೆಗಾಗಿಯೇ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು. ಈ ವೇದಿಕೆಯಲ್ಲಿ ಯುವ ಬರಹಗಾರರೊಂದಿಗೆ ಚರ್ಚೆ, ಸಂವಾದಗಳೂ ನಡೆದವು. ಕಲಾ ಪ್ರದರ್ಶನವೂ ನೋಡುಗರ ಮೆಚ್ಚುಗೆಗೆ ವ್ಯಕ್ತವಾಯಿತು.

ಚಿಣ್ಣರ ಕಲರವ: ಮಕ್ಕಳಿಗೆ ಪ್ರತ್ಯೇಕವಾಗಿ 'ಚಿಣ್ಣರ ಲೋಕ' ರೂಪಿಸಲಾಗಿತ್ತು. ಮಕ್ಕಳ ಜತೆಗೆ ಸಂಭಾಷಣೆ ನಡೆಸಿದ ಲೇಖಕರು, ಕಥೆಗಳನ್ನು ಹೇಳಿ ರಂಜಿಸಿದರು. ಚಿತ್ರಕಲೆ, ಕಥೆ ಹೇಳುವುದೂ ಸೇರಿ ವಿವಿಧ ಸ್ಪರ್ಧೆಗಳ ಜತೆಗೆ ಮನೋರಂಜನೆಯ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಆಯೋಜಿಸಲಾಗಿತ್ತು.

ಮೂರು ದಿನಗಳ ಈ ಸಾಹಿತ್ಯ ಉತ್ಸವದ ಮೆರುಗನ್ನು ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಿಸಿದವು. ಉತ್ಸವದ ಕೊನೆಯ ದಿನವಾದ ಭಾನುವಾರ ಬೆಳಿಗ್ಗೆ ವೆಂಕಟೇಶ್ ಕುಮಾರ್ ಅವರಿಂದ ಹಿಂದೂಸ್ತಾನಿ ಗಾಯನ, ಬಹುಭಾಷಾ ನಟ ಪ್ರಕಾಶ್ ರಾಜ್ ಅವರಿಂದ 'ಭಾಷೆ ಬೇರೆಯಾದರೂ, ಭಾವವೊಂದೇ' ಎಂಬ ಕಾವ್ಯ ಪ್ರಸ್ತುತಿ ನಡೆಯಿತು. ಬಳಿಕ ಮೇಘನಾ ಚಂದ್ರಮೌಳಿ ಅವರಿಂದ 'ಕಾವ್ಯಾಭಿವ್ಯಕ್ತಿ' ನೃತ್ಯ ಪ್ರದರ್ಶನ ಹಾಗೂ ಕೆರೆಮನೆ ಯಕ್ಷಗಾನ ಮಂಡಳಿ ಮೇಳದ 'ಪಂಚವಟಿ' ಯಕ್ಷಗಾನ ಪ್ರದರ್ಶನ ರಂಜಿಸಿತು.

ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ಪಂಡಿತ್ ಎಂ. ವೆಂಕಟೇಶ್ ಕುಮಾರ್ ಮತ್ತು ತಂಡವು ಹಿಂಸೂಸ್ಥಾನಿ ಸಂಗೀತ ಕಛೇರಿಯನ್ನು ನಡೆಸಿಕೊಟ್ಟಿತು

'ಬಹುಭಾಷಿಕತೆಯ ಸಮೀಕ್ಷೆ ನಡೆಯಲಿ'

'ಎಲ್ಲರಿಗೂ ಅವರ ಭಾಷೆಯನ್ನೇ ಮಾತನಾಡಲು ಸ್ವಾತಂತ್ರ್ಯ ನೀಡಿದ್ದರಿಂದ ಕರ್ನಾಟಕದಲ್ಲಿ ಭಾಷಾ ವೈವಿಧ್ಯ ಕಾಣಬಹುದು. ಆದ್ದರಿಂದ ಇಲ್ಲಿನ ಬಹುಭಾಷಿಕತೆಯ ಬಗ್ಗೆ ಸಮೀಕ್ಷೆ ನಡೆಯಬೇಕು.'

ಇವು ಭಾಷಾ ತಜ್ಞರ ಅಭಿಮತ. ಭಾನುವಾರ ಇಲ್ಲಿ ನಡೆದ ಬುಕ್ ಬ್ರಹ್ಮ ಸಾಹಿತ್ಯೋತ್ಸವದ 'ಕರ್ನಾಟಕದ ಭಾಷೆಗಳು: ಬಹುತ್ವದ ಆಯಾಮ' ಗೋಷ್ಠಿಯಲ್ಲಿ ಭಾಷಾ ವೈವಿಧ್ಯದ ಬಗ್ಗೆ ಚರ್ಚಿಸಲಾಯಿತು.

ಭಾಷಾ ವಿಜ್ಞಾನ ಪ್ರಾಧ್ಯಾಪಕ ಎಸ್.ಎನ್. ಶ್ರೀಧರ್, 'ದೇಶದ ಎಲ್ಲ ವೈವಿಧ್ಯಗಳನ್ನು ಕರ್ನಾಟಕದಲ್ಲಿ ಕಾಣಬಹುದಾಗಿದೆ. ಇಲ್ಲಿ ಹಲವು ಭಾಷೆಗಳಿದ್ದು, ಕರಾವಳಿಯಲ್ಲಿಯೇ ನೂರಾರು ಭಾಷೆಗಳಿವೆ. ಹೀಗಾಗಿ, ಇಲ್ಲಿನ ಭಾಷೆಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಬೇಕು. ಬಹುಭಾಷಿಕತೆಯ ಸಮೀಕ್ಷೆಯೂ ಅಗತ್ಯ. ಒಂದೆಡೆ ಪ್ರಬುದ್ಧವಾದ ಸಾಹಿತ್ಯಿಕ ಭಾಷಾ ಪ್ರಯೋಗ ಇದ್ದರೆ, ಇನ್ನೊಂದೆಡೆ ಆಡುಮಾತಿನ ಪ್ರಯೋಗವೂ ಇದೆ. ಇದೇ ಸರಿಯಾದ ಕನ್ನಡ ಎಂದು ಹೇಳುವ ಅಕಾಡೆಮಿ ಇಲ್ಲಿಲ್ಲ. ಅಷ್ಟಕ್ಕೂ ನಮ್ಮವರಿಗೆ ನಿರ್ದಿಷ್ಟ ಕನ್ನಡ ರುಚಿಸುವುದಿಲ್ಲ' ಎಂದು ಹೇಳಿದರು.

'ಭಾಷಾ ವೈವಿಧ್ಯ, ಪದ ಪ್ರಯೋಗ, ಧ್ವನಿ ವತ್ಯಾಸ ಎಲ್ಲವನ್ನೂ ಒಳಗೊಂಡ ಸಮಗ್ರ ವ್ಯಾಕರಣವನ್ನು ಹೊರತರಬೇಕು. ಅದಕ್ಕೆ ಸರ್ಕಾರ ಮನಸ್ಸು ಮಾಡಬೇಕು' ಎಂದರು. ಭಾಷಾ ತಜ್ಞೆ ಆರ್. ಅಮೃತವಲ್ಲಿ, 'ಪ್ರತಿಯೊಬ್ಬರ ಭಾಷೆಯಲ್ಲಿಯೂ ಸಣ್ಣ ವ್ಯತ್ಯಾಸ ಇರುತ್ತದೆ. ಎಲ್ಲರ ಮನಸ್ಸಿನಲ್ಲಿಯೂ ಭಾಷೆ ಮತ್ತೆ ಮತ್ತೆ ಸೃಷ್ಟಿಯಾಗುತ್ತಾ ಇರುತ್ತದೆ' ಎಂದು ಉದಾಹರಣೆ ಸಹಿತ ವಿವರಿಸಿದರು.

ಗೋಷ್ಠಿ ನಿರ್ವಹಿಸಿದ ಭಾಷಾ ತಜ್ಞ ಬಸವರಾಜ್ ಕೊಡಗುಂಟಿ, 'ರಾಜ್ಯದಲ್ಲಿ ಪ್ರದೇಶವಾರು ಭಾಷಾ ಬಳಕೆಯಲ್ಲಿ ವ್ಯತ್ಯಾಸ ಕಾಣಬಹುದು. ಇಲ್ಲಿ ಕನಿಷ್ಠ 350 ತಾಯ್ನುಡಿಗಳು ಬಳಕೆಯಲ್ಲಿವೆ. ರಾಜ್ಯದ ಒಟ್ಟು ಜನರಲ್ಲಿ ಶೇ 65ರಷ್ಟು ಮಂದಿ ಕನ್ನಡ ಮಾತನಾಡುತ್ತಾರೆ. ಉಳಿದವರು ಬೇರೆ ಬೇರೆ ಭಾಷೆ ಬಳಸುತ್ತಾರೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ನಾವು ಕಟ್ಟಿಕೊಂಡ ಗೋಡೆ ಸೌಹಾರ್ದಕ್ಕೆ ಅಡ್ಡಿ: ಪ್ರಕಾಶ್ ರಾಜ್

ಬೆಂಗಳೂರು: 'ಅಸಮಾನತೆ, ಜಾತಿ ವ್ಯವಸ್ಥೆಯಂತಹ ನಾವೇ ಕಟ್ಟಿಕೊಂಡ ಅದೃಶ್ಯ ಗೋಡೆಗಳು ಸೌಹಾರ್ದಯುತ ಬದುಕಿಗೆ ಅಡ್ಡಿಯಾಗಿವೆ. ಆದ್ದರಿಂದ, ಇಂತಹ ಗೋಡೆಗಳನ್ನು ಕೆಡವಿ, ಸಂಬಂಧ ಬೆಸೆಯುವ ಸೇತುವೆಗಳನ್ನು ನಿರ್ಮಿಸಬೇಕು' ಎಂದು ನಟ ಪ್ರಕಾಶ್ ರಾಜ್ ತಿಳಿಸಿದರು.

ಭಾನುವಾರ ಇಲ್ಲಿ ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ 'ಭಾಷೆ ಬೇರೆಯಾದರೂ, ಭಾವವೊಂದೇ' ಕಾವ್ಯಾಭಿನಯ ಪ್ರಸ್ತುತಪಡಿಸಿದರು.

ಈ ವೇಳೆ ಮಾತನಾಡಿದ ಅವರು, 'ಇಲ್ಲಿನ ಬಡವರು ವಿದೇಶದ ಅತಿಥಿಗೆ ಕಾಣಿಸಬಾರದು ಎಂಬ ಕಾರಣಕ್ಕೆ ದೇಶದ ಪ್ರಹಾಪ್ರಭು ರಸ್ತೆಯ ಇಕ್ಕೆಲಗಳಲ್ಲಿ ಗೋಡೆ ನಿರ್ಮಿಸಿದ್ದ ಘಟನೆ ನಮ್ಮ ಕಣ್ಣಮುಂದೆಯೇ ಇದೆ. ಇನ್ನೊಂದೆಡೆ, ಕಣ್ಣಿಗೆ ಕಾಣದ ಅದೆಷ್ಟೋ ಗೋಡೆಗಳು ಇಲ್ಲಿವೆ. ಯುದ್ಧ, ಅಸಮಾನತೆಯಂತಹ ಗೋಡೆಗಳ ನಿರ್ಮಾಣವು ನಮಗೆ ನಾವೇ ಮಾಡಿಕೊಂಡ ಗಾಯಗಳಾಗಿವೆ. ಗೋಡೆ ಪ್ರತ್ಯೇಕಿಸುವ ಪ್ರತೀಕವಾದರೆ, ಸೇತುವೆ ಸಂಬಂಧ ಬೆಸೆಯುವ ಪ್ರತೀಕ. ಹಾಗಾಗಿ, ಕಟ್ಟುವುದಾದರೆ ಸೇತುವೆಯನ್ನೇ ಕಟ್ಟೋಣ' ಎಂದು ಹೇಳಿದರು.

'ಭಾಷೆ ಹಲವಾದರೂ ಭಾವ ಒಂದೇ ಆಗಿರುತ್ತದೆ. ಲಿಪಿ, ಪದಗಳು ಬೇರೆ ಬೇರೆಯಾದರೂ ಭಾಷೆ ಹಿಡಿದಿಟ್ಟುಕೊಳ್ಳುವುದು ಮನುಷ್ಯನ ಭಾವನೆಯನ್ನು. ಅಸಮಾನತೆಯ, ಅನ್ಯಾಯದ ಈ ಜಗತ್ತನ್ನು ಬದಲಾಯಿಸಲು ನಾವೆಲ್ಲ ಒಂದಾಗಿದ್ದರೆ ಸಾಕು' ಎಂದು ತಿಳಿಸಿದರು.

ಏಟ್ರಿಯಾ ವಿ.ವಿಯಲ್ಲಿ 'ಹವಾಮಾನ ಬದಲಾವಣೆ' ವಿಚಾರಸಂಕಿರಣ

ಯಲಹಂಕ: 'ನೈಸರ್ಗಿಕ ವಿಕೋಪಗಳಿಗೆ ಪ್ರಕೃತಿಯ ಮೇಲೆ ಮನುಷ್ಯ ನಡೆಸಿರುವ ದಬ್ಬಾಳಿಕೆಯೇ ಕಾರಣ' ಎಂದು ಇಸ್ರೊ ಬಾಹ್ಯಾಕಾಶ ಸಂಸ್ಥೆಯ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

ಹೆಬ್ಬಾಳದ ಏಟ್ರಿಯಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಹವಾಮಾನ ಬದಲಾವಣೆ' ಕುರಿತ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿಯಲ್ಲಿ ಉಂಟಾಗುವ ಹವಾಮಾನ ಬದಲಾವಣೆಗೆ ಮನುಷ್ಯನೇ ಕಾರಣವಾಗಿರುವುದರಿಂದ ಇದನ್ನು ಸರಿಪಡಿಸುವ ಹೊಣೆಯೂ ಮನುಷ್ಯರದ್ದೇ ಆಗಿದೆ ಎಂದು ಪ್ರತಿಪಾದಿಸಿದರು.

ಪ್ರಕೃತಿಯಲ್ಲಿ ಸಮತೋಲನ ಕಾಪಾಡಿಕೊಂಡು ಮುಂದೆ ಸಂಭವಿಸಬಹುದಾದ ನೈಸರ್ಗಿಕ ವಿಕೋಪಗಳನ್ನು ತಡೆಗಟ್ಟಬೇಕು. ಇದರಲ್ಲಿ ಯುವಜನಾಂಗದ ಪಾತ್ರ ಮಹತ್ವದ್ದು ಎಂದು ತಿಳಿಸಿದರು.

ಭಾರತೀಯ ವಿಜ್ಞಾನ ಕೇಂದ್ರದ ವಿಜ್ಞಾನಿ ಜೆ.ಶ್ರೀನಿವಾಸನ್, ಪ್ರಾಧ್ಯಾಪಕ ರವಿ ನಂಜುಂಡಯ್ಯ, ಏಟ್ರಿಯಾ ವಿಶ್ವವಿದ್ಯಾಲಯದ ಕುಲಾಧಿಪತಿ ಸುಂದರ್‌ರಾಜು, ಕುಲಪತಿ ನಾಯರ್, ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ರಾಜೇಶ್, ಉಪ ಪ್ರಾಂಶುಪಾಲರಾದ ಡಾ.ನಳಿನಾಕ್ಷಿ ಎನ್. ಉಪಸ್ಥಿತರಿದ್ದರು.

ಸರ್ಕಾರದ ನಿರ್ಲಕ್ಷ್ಯವೇ ಕಾರಣ: ಅಶೋಕ

ಬೆಂಗಳೂರು: ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದಾಗಿ ತುಂಗಭದ್ರಾ ಅಣೆಕಟ್ಟಿನ 19ನೇ ಗೇಟ್ ಚೈನ್‌ಲಿಂಕ್ ಮುರಿದು ಬಿದ್ದಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

'ಎಕ್ಸ್' ಮೂಲಕ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, 'ನೀರಾವರಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಮ್ಮ ಇಲಾಖೆಗಳ ನಿರ್ವಹಣೆಗಿಂತ ಕಾಂಗ್ರೆಸ್ ಹೈಕಮಾಂಡ್ ಏಜೆಂಟ್ ಕೆಲಸವೇ ಹೆಚ್ಚಾಗಿದೆ. ಪ್ರಜೆಗಳ ಹಿತಕ್ಕಿಂತ, ಪಕ್ಷದ ಹಿತವೇ ಆದ್ಯತೆ ಆಗಿದೆ' ಎಂದು ಟೀಕಿಸಿದ್ದಾರೆ.

ಗೇಟ್ ಮುರಿದುಬಿದ್ದಿರುವ ಬಗ್ಗೆ ತನಿಖೆ ನಡೆಸಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಒತ್ತಾಯಿಸಿದ್ದಾರೆ.

ಪತ್ರಕರ್ತೆ ನಾಗಮಣಿ ಎಸ್‌.ರಾವ್ ದತ್ತಿನಿಧಿ ಪ್ರಶಸ್ತಿ ಪ್ರದಾನ

'ಗಂಡುಪಾಳ್ಯದಲ್ಲಿ ಕೆಲಸ ಮಾಡಿದ ಸೀತಾದೇವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗ ಎಲ್ಲ ಮಾಧ್ಯಮ ಸಂಸ್ಥೆಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಿಂದೆ 40–50 ಗಂಡುಮಕ್ಕಳ ನಡುವೆ ಒಬ್ಬೊಬ್ಬರೇ ಹೆಣ್ಣುಮಕ್ಕಳು ಕೆಲಸ ಮಾಡಬೇಕಿತ್ತು. ಅಂಥ ಗಂಡುಪಾಳ್ಯದಲ್ಲಿ ಕೆಲಸ ಮಾಡಿ ಜಯಿಸಿದವರಲ್ಲಿ ಎಚ್.ಎಲ್. ಸೀತಾದೇವಿ ಒಬ್ಬರು ಎಂದು ಪತ್ರಕರ್ತೆ ಸಿ.ಜಿ. ಮಂಜುಳಾ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ಭಾನುವಾರ ಹಮ್ಮಿಕೊಂಡಿದ್ದ ನಾಗಮಣಿ ಎಸ್.ರಾವ್ ದತ್ತಿನಿಧಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾಧ್ಯಮಗಳಲ್ಲಿ ಮುರಿದು ಕಟ್ಟುವ ಕೆಲಸಗಳಲ್ಲಿನ ಸ್ತ್ರೀ ಸಂವೇದನೆಯನ್ನು ಅವರು ವಿಶ್ಲೇಷಿಸಿದರು.

ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, 'ಮಹಿಳೆಯರು ವೃತ್ತಿಯಿಂದ ನಿವೃತ್ತರಾದಾಗ ಇನ್ನು ನಮ್ಮಿಷ್ಟದ ಕೆಲಸ ಮಾಡಬಹುದು ಎಂದು ನಿಟ್ಟುಸಿರು ಬಿಡುವ ಸ್ಥಿತಿ ಇದೆ' ಎಂದು ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಪ್ರಶಸ್ತಿ ಪ್ರದಾನ ಮಾಡಿದರು.

ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ಪತ್ರಕರ್ತೆ ಮಾಲತಿ ಭಟ್, ಲೇಖಕಿ ನಾಗಮಣಿ ಎಸ್. ರಾವ್, ಅಬಲಾಶ್ರಮ ಆಡಳಿತ ಮಂಡಳಿಯ ರಂಗನಾಥ್ ಎನ್., ಲೇಖಕಿಯರ ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ ಭಾಗವಹಿಸಿದ್ದರು.

'ನಾಗಮಣಿ ಎಸ್‌ ರಾವ್ ದತ್ತಿನಿಧಿ ಪ್ರಶಸ್ತಿ'ಯನ್ನು ಎಚ್‌.ಎಲ್‌. ಸೀತಾದೇವಿ ಅವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಂ ಪ್ರದಾನ ಮಾಡಿದರು. ಲೇಖಕಿಯರಾದ ಸಿ.ಜಿ. ಮಂಜುಳಾ, ಭಾರತಿ ಹೆಗಡೆ, ಎಚ್‌.ಎಲ್‌. ಪುಷ್ಪ, ನಾಗಮಣಿ ಎಸ್‌.ರಾವ್‌, ಮಾಲತಿ ಭಟ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಹರ್ ಘರ್ ತಿರಂಗ' ಹೆರಿಟೇಜ್ ವಾಕ್: ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಲ್ ಮೋಟರ್ಸ್ ಸರ್ವಿಸ್ ಕಟ್ಟಡ, ವಸಂತನಗರ, ಬೆಳಿಗ್ಗೆ 9

ವಿಶ್ವನಾಥ್ ಹೆಗಡೆ ಅವರ 'ಗ್ಲಿಂಪ್ಸ್' ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸಾಮಾಜಿಕ ನಾಟಕೋತ್ಸವ: ಉದ್ಘಾಟನೆ: ಗಂಗಾಧರ್, ಅಧ್ಯಕ್ಷತೆ: ವರಲಕ್ಷ್ಮಿ, ಅತಿಥಿಗಳು: ರಾಜಲಕ್ಷ್ಮಿ, ಶ್ರೀನಾಥ್, 'ಕುದುರೆ ಮೊಟ್ಟೆ' ನಾಟಕ ಪ್ರದರ್ಶನ: ನಿರ್ದೇಶನ: ಕವಿತಾ ಶೆಟ್ಟಿ, ತಂಡ: ಯಶಸ್ವಿನಿ ಕಲಾ ತಂಡ, 'ಅಕ್ಷರ ಆಂದೋಲನ' ನಾಟಕ ಪ್ರದರ್ಶನ: ನಿರ್ದೇಶನ: ಶಾಂತಕುಮಾರ್, ತಂಡ: ಬಿ. ಕಾಂತಕುಮಾರ್ ಮತ್ತು ತಂಡ, ಆಯೋಜನೆ: ಅನ್ನಪೂರ್ಣೇಶ್ವರಿ ಕಲಾ ಸಂಘ, ಸ್ಥಳ: ಲಾಸ್ಯರಂಜಿನಿ ಕಲಾಕ್ಷೇತ್ರ, ಕಮ್ಮನಹಳ್ಳಿ, ಮಧ್ಯಾಹ್ನ 3

'ಶಕುನಿ ಶಪಥ' ನಾಟಕ ಪ್ರದರ್ಶನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಆಯೋಜನೆ: ಗಾನಸಂಗಮ ಕಲಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4.45

ವಿ. ತಾರಕರಾಮ ಸ್ಮಾರಕ 'ಕಾನೂನು ಮತ್ತು ಧರ್ಮ'ದ ಕುರಿತು ಉಪನ್ಯಾಸ: ಎಸ್. ಅಬ್ದುಲ್ ನಜೀರ್, ಕೃಷ್ಣ ದೀಕ್ಷಿತ್, ಡಿ.ಎಲ್.ಎನ್. ರಾವ್, ಆಯೋಜನೆ: ತಾರಕರಾಮ ಅಸೋಸಿಯೇಟ್ಸ್, ರೇವತಿ ತಾರಕರಾಮ ಮತ್ತು ಕುಟುಂಬ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5

ಗ್ರಂಥಪಾಲಕರ ದಿನಾಚರಣೆ 'ಅರಿವು ಕೇಂದ್ರ' ಗ್ರಂಥಾಲಯ ಮೇಲ್ವಿಚಾರಕರ ರಾಜ್ಯಮಟ್ಟದ ಸಮಾವೇಶ–2024: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಪ್ರಿಯಾಂಕ್ ಖರ್ಗೆ, ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಸಂಜೆ 5

ನಾಗೇಶ್ವರ ಶರ್ಮಾ ಮತ್ತು ಸುದಿಪ್ತಾ ಜನ ಅವರ 'ಪ್ಲಾಂಟ್ಸ್ ಬಿಯಾಂಡ್ ದಿ ಸಿಟಿ' ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 6

ತಿಂಗಳ ಸಮಾವೇಶ: ಅತಿಥಿಗಳು: ಸರ್ವಮಂಗಳ ಸೋಮಶೇಖರ್, ಸಿ. ಸೋಮಶೇಖರ್, ಸನ್ಮಾನ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, ಸದಾಶಿವನಗರ ಕ್ಲಬ್, ಸದಾಶಿವನಗರ, ಸಂಜೆ 6.30

'ನವರಾತ್ರಿ ಕೊನೆದಿನ' ನಾಟಕ ಪ್ರದರ್ಶನ: ಆಯೋಜನೆ: ರಂಗಪಯಣ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಮಾನವ-ಆನೆ ಸಂಘರ್ಷ ನಿರ್ವಹಣೆಯ ಕುರಿತು ಅಂತರಾಷ್ಟ್ರೀಯ ಸಮ್ಮೇಳನ-2024: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಶೋಭಾ ಕರಂದ್ಲಾಜೆ, ಡಿ.ಕೆ. ಶಿವಕುಮಾರ್, ಈಶ್ವರ್ ಬಿ. ಖಂಡ್ರೆ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಡಾ.ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 10

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to bring to your kind notice, that my clients **M/s HAJEE DAWOOD TRUST** Represented by its Managing Trustee ASFHAN HUSSAIN, they lost Registered Sale Deed dated **25/07/1985,** registered as document No. **1273/1985-86.** The above Sale Deed is registered before the office of The Sub- Registrar Bangalore South Taluk.

SCHEDULE PROPERTY

All that piece and parcel of the immovable commercial property bearing **Unit No: G6,** Ground Floor, 33/5 S R T ROAD, SHIVAJINAGAR, BANGALORE, **present BBMP PID Katha No.78-61-33/5,** having a Built up area measuring **1,150 Sq. Feet,** along with **360.25 Sq.feet.** undivided share of land in the building **"IMPERIAL COURT APARTMENTS"** consisting of Ground Floor and Seven Upper Floors for mixed commercial and residential with Aprox. 30,000 Sq. Feet, built area on Site Nos: 32, 32/1, 33, and 33/1 Situated at **Cunningham Road, Bangalore,** with all rights, appurtenances whatsoever hereunder or underneath or above the surface and bounded on the: **East by :** Commercial Space Unit No. G5; **West by :** Car Driveway; **North by:** Car Driveway facing Cunningham Road; **South by:** Car Parking No 14 in the Sanction Plan.

R. Santhosh Kumar, Associates **Advocates,**
Flat No.406, Motati Meadows, Nagavarapalya Main Road, Benniganahalli, Old Madras Road, C.V.Raman Nagar Post, Bangalore-560 093.
Mobile No. 080-41718108 / 8939910987.

ROUNAQH

PERSONAL

Change of Name

CHANGE OF NAME

I, **SUSHEELA. N** spouse of Late K.V. NARAYANA Residing at #39/112, 1st 'D' Cross, REMCO Layout, Hampinagar Post, Vijayanagar 2nd Stage, Bengaluru-560040, have to declare that my name is **SUSHEELA PHADNIS** & DOB- 15.11.1949 vide affidavit dated 07.08.2024 before Court of Chief Metropolition Magistrate. Bengaluru.

CHANGE OF NAME

I, **SRINIVAS @ SRINIVAS MUNIRAJU**, Residing at No. 320/8, 12th A Main Road, 6th Block, Rajajinagar, Bengaluru-560010. Declare that the above names pertain to me and henceforth I shall be known as **SRINIVAS MUNIRAJU** vide affidavit dated 05-08-2024, before notary D.G. Shanthappa, Bengaluru.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಕ್ಲಾಸಿಫೈಡ್ಸ್

ADMISSION CORNER

SAMBHRAM INSTITUTIONS

ADMISSIONS 2024

FEW SEATS AVAILABLE

OUR PROGRAMS

- BE - Computer Science Engg.
- BE - Artificial intelligence & ML
- BE - Artificial intelligence & DS
- BE - Cyber Security
- BE - Information Science Engineering
- BE - Electronics & Communication Engg.
- BE - Mechanical Engineering
- BE - Civil Engineering

RANKED AMONG TOP ENGINEERING COLLEGE IN BENGALURU

BBA | BBA Aviation
BCA | B.Com | M.Com
MCA | MBA

Approved by AICTE
Affiliated to VTU /BCU

CET CODE : E113 | COMED K CODE - E114

M S Palya, Jalahalli East, Bengaluru -560097
Email : admissions@sambhram.org
88844 40085 | 92434 58493
www.sambhram.org

JOB OPPORTUNITIES

Teachers/ Professors

WANTED BE /Diploma /ITI in Electrical, Electronics Mechanical to take part time /Full time Diploma Day & Evening classes and M.A, B.A, B.Sc B.Ed, for English and Social for High school classes, Marketing Executive. Contact personally with resume, original documents. Nadgir Institute, Near Modi Hospital, Rajajinagar, Bangalore-560010. Ph: 23387333, 8867065525, 9731721446.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EDUCATION SUCCESS

Ph.D Awardee

Has been awarded Ph.D in Education from Bundelkhand University for Her thesis "Study on Advanced and Quality Management in Upper Secondary schools in relation to teachers psychological factors and economic stabilities of management in private schools". Submitted under the guidance of Dr. Rajesh Varma, Professor Department of Education.



RESHMA .S D/o S. Swamydass

ನೈರುತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ: 17/ಎಸ್‌ಬಿಸಿ/24 31.07.2024 ಇ–ಟೆಂಡರ್ ಮೂಲಕ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು [illegible]

ಕ್ರ.ಸಂ	ಕೆಲಸದ ವಿವರ	ಅಂದಾಜು ಮೌಲ್ಯ (ರೂ.ಗಳಲ್ಲಿ)
1	ಹಿರಿಯ ಡಿಇಎನ್/ದಕ್ಷಿಣ/ ಬೆಂಗಳೂರು ವಿಭಾಗ: ಬೆಂಗಳೂರು–ಸೇಲಂ ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ ಪೆರಿಯ ನಾಗಾ ತುನ್ನೈ ಡಿಪೋ ಮತ್ತು ಕರುವೆಲ್ಲಿ ಸೆಸ್‌ನಲ್ಲಿ ಲೀಡಿಂಗ್ ಮತ್ತು ಲೋಡಿಂಗ್ ಸೇರಿದಂತೆ ಮೆಷಿನ್ ಕ್ರಶ್ಡ್ ಟ್ರ್ಯಾಕ್ ಬ್ಯಾಲೆಸ್ಟ್‌ನ ತಯಾರಿಕೆ ಪೂರೈಸುವುದು: 11/900–23/0 ಮತ್ತು 72 ರಿಂದ 16 ಕಿ ಮೀ ಉದ್ದಕ್ಕೆ ಸಿಟಿಆರ್(ಪಿ) /100–77/0 ಎಲ್ ಡಿ ಮಾರ್ಕ್ ರೇಲ್ಸ್ ಬದಲಿಗೆ	ರೂ. 2,22,72,084
2	ಸಬ್‌ವರ್ಕ್–I:ಬೆಂಗಳೂರು ಸೇಲಂ ವಿಭಾಗ: ಎಡಿಇಎನ್/ಧರ್ಮಪುರಿ ವಿಭಾಗದಲ್ಲಿ ಕಿ ಮೀ 145/650–165/600 ಎಸ್‌ಎಲ್‌ನಿಂದ 18.85ಕಿ ಮೀ ಉದ್ದಕ್ಕೆ ಐಸೋಲೇಟೆಡ್ ಸ್ಥಳಗಳಲ್ಲಿ ತಕ್ಕುದಾದ ವಿಡ್ತ್ ಒದಗಿಸುವ ಮೂಲಕ ದಡವನ್ನು ಬಲಪಡಿಸುವುದು. ಸಬ್‌ವರ್ಕ್–II:ಬೆಂಗಳೂರು–ಸೇಲಂ ವಿಭಾಗ: ಧರ್ಮಪುರಿ, ರಾಯಕ್ಕೊಟ್ಟೈ, ಪೆರಿಯ ನಾಗ ತುನ್ನೈ, ಕೆಲಮಂಗಲಂ ಮತ್ತು ಬಾಣಸವಾಡಿ ಯಾರ್ಡ್‌ಗಳಲ್ಲಿನ ಕ್ರಾಸಿಂಗ್‌ಗಳಲ್ಲಿ ಬ್ಯಾಲಸ್ಟ್ ಮರುಪಾವತಿಯ ಪಾಯಿಂಟ್ಸ್ ಸೆಸ್ ಕೆಲಸ. ಎಡಿಇಎನ್/ಧರ್ಮಪುರಿ ವಿಭಾಗದಲ್ಲಿ ಒಟ್ಟು 11 ಸಂಖ್ಯೆಗಳು. ನಿರ್ವಹಣಾ ಅವಧಿಯು ಆರು ತಿಂಗಳು ಅಥವಾ ಒಂದು ಮುಂಗಾರು ಅವಧಿ. ಯಾವುದು ನಂತರವೊ ಅದು.	ರೂ. 3,74,99,976
3	ಬೆಂಗಳೂರು– ಸೇಲಂ ವಿಭಾಗ: ಎಡಿಇಎನ್/ಧರ್ಮಪುರಿ ವಿಭಾಗದಲ್ಲಿ 145/650–165/500 ಎಸ್‌ಎಲ್‌ನಿಂದ 18.85 ಕಿ ಮೀ ಉದ್ದದ ಪ್ರತ್ಯೇಕ ಸ್ಥಳಗಳಲ್ಲಿ ಪ್ರಮಾಣಿತ ವಿಡ್ತ್ ಒದಗಿಸುವ ಮೂಲಕ ದಡವನ್ನು ಬಲಪಡಿಸುವ ಕೆಲಸಕ್ಕೆ ಸಂಬಂಧಿಸಿದಂತೆ 1500ಮೀಟರ್ ಉದ್ದದ ಆರ್‌ಸಿಸಿ ಸೈಡ್ ಡ್ರೈನ್ ನಿರ್ಮಾಣ ಕಾಮಗಾರಿ. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 1,77,64,723
4	ಸಬ್‌ವರ್ಕ್–I ಬೆಂಗಳೂರು–ಸೇಲಂ ವಿಭಾಗ: ಹೊಸೂರ್– 50 ಕೆಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಟ್ಯಾಂಕ್ ಒದಗಿಸುವುದು. ಸಬ್‌ವರ್ಕ್–II: ಬೆಂಗಳೂರು–ಸೇಲಂ ವಿಭಾಗ: ಧರ್ಮಪುರಿ–50 ಕೆಎಲ್‌ಡಿ ಸಾಮರ್ಥ್ಯದ ಎಸ್‌ಟಿಪಿ ಟ್ಯಾಂಕ್ ಒದಗಿಸುವುದು. ನಿರ್ವಹಣಾ ಅವಧಿ 24 ತಿಂಗಳುಗಳು	ರೂ.3,66,88.621

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.08.2024 ರಂದು 15.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಇಂಜಿನಿಯರ್ (ಕೋ ಆರ್ಡಿನೇಷನ್) ಬೆಂಗಳೂರು

ಪಿಯುಬಿ/322/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

South Western Railway - SWR SWRRLY SWRRLY

IDEMI
सत्यमेव जयते
(A Govt. of India Society)
Ministry of Micro, Small & Medium Enterprises
Organized By IDEMI, Mumbai, Ministry of MSME, Govt of India

Government Certificate Professional Course on
Digital marketing with AI

Course duration 2 Days Date-17,18 August 2024 Time 10.30am - 5.30 pm

Address: IDEMI extension centre Banglore, Care of MSME development Institute, West of Chord Road Industrial Estate, Rajaji Nagar,Bengaluru,Karnataka- 560010

Email id : training@idemi.org Web : www.idemi.org Ph.: (022) 2405 0301/2/3/4

content : Introduction of AI, Chat GTP, Gemini, Google, AI Image & Video Creator, Instagram & Facebook (Organic & Paid Marketing), Linkdin Professional Use, Google Business Profile Creaation, Youtube & Earning, Search engine Optimiaation (SEO).

QR code for Registration

Fees 4000/-+18 % GST Regular (Include Lunch & Tea)

Student Fees -2000/- +18% GST (include lunch & tea)

50 % Discount

For Technical Details: 9834360324

Contact- 9019870803,9403566219,9270076724,9481236511

ಸಂಸದ ಬಸವರಾಜ ಬೊಮ್ಮಾಯಿ ಅವರು ಸೋಮಕ್ಷತ್ರಿಯ ಗಾಣಿಗ ಸಮುದಾಯದ ವೇಣುಗೋಪಾಲಕೃಷ್ಣ ಸಮುದಾಯ ಭವನ ಉದ್ಘಾಟಿಸಿದರು. ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್, ಶಾಸಕ ಮುನಿರತ್ನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

'ಬೆಂಗಳೂರನ್ನು ಸ್ವಚ್ಛ ನಗರವನ್ನಾಗಿ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಬ್ರ್ಯಾಂಡ್ ಬೆಂಗಳೂರು ಮಾಡುವುದಾಗಿ ಹೇಳುತ್ತಿದೆ. ಆದರೆ, ರಾತ್ರಿ ಒಂದು ಗಂಟೆಯವರೆಗೆ ಬ್ಯಾಂಡ್ ಬಾರಿಸಲು ಅವಕಾಶ ಕಲ್ಪಿಸಿದೆ. ಹೀಗಾಗಿ ಇದು ಬ್ರ್ಯಾಂಡ್ ಬೆಂಗಳೂರು ಆಗುತ್ತದೊ, ಬ್ಯಾಂಡ್ ಬೆಂಗಳೂರು ಆಗುತ್ತದೊ ಗೊತ್ತಿಲ್ಲ' ಎಂದು ಸಂಸದ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

ಸೋಮಕ್ಷತ್ರಿಯ ಗಾಣಿಗ ಸಮುದಾಯದ ಚಾಮರಾಜಪೇಟೆಯಲ್ಲಿ ನಿರ್ಮಿಸಿದ ವೇಣುಗೋಪಾಲ ಕೃಷ್ಣ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, 'ಬೆಂಗಳೂರು ನಗರವನ್ನು ಸ್ವಚ್ಛ ನಗರವನ್ನಾಗಿ ಮಾಡಿ' ಎಂದು ಸಲಹೆ ನೀಡಿದರು.

'ಗಾಣಿಗ ಸಮಾಜ ತನ್ನದೇ ಆದ ಇತಿಹಾಸ ಪರಂಪರೆ ಹೊಂದಿದೆ. ಚಿಂತನೆಯಲ್ಲಿ ಬಹಳ ಶ್ರೇಷ್ಠವಾಗಿದೆ. ವಿಜಯನಗರದ ಅರಸರ ಕಾಲದಿಂದಲೂ ತನ್ನ ಶ್ರೇಷ್ಠತೆಯನ್ನು ಉಳಿಸಿಕೊಂಡು ಬಂದಿದೆ. ಬಡತನದಿಂದ ಬಂದು ಬಡವರ ಪರವಾಗಿ ಕೆಲಸ ಮಾಡುವ ವ್ಯಕ್ತಿ ಪ್ರಧಾನಿ ನರೇಂದ್ರ ಮೋದಿ. ಅವರು ಗಾಣಿಗ ವೃತ್ತಿ ಮಾಡುತ್ತ ಬೆಳೆದವರು. ಅವರನ್ನು ನೋಡಿದಾಗ ಈ ಸಮಾಜದ ಶಕ್ತಿ ಎಷ್ಟಿದೆ ಅಂತ ಗೊತ್ತಾಗುತ್ತದೆ' ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಮುನಿರತ್ನ, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಬಿಜೆಪಿ ಯುವ ಮುಖಂಡ ಭರತ ಬೊಮ್ಮಾಯಿ, ಚನ್ನಮ್ಮ ಬಸವರಾಜ ಬೊಮ್ಮಾಯಿ, ಮಂಜುನಾಥ ಉಡುಪಿ ಭಾಗವಹಿಸಿದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ಆ್ಯಪ್ ಮಾಡಿ: **9606038256**

'ರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು'

ರಾಮಯ್ಯ ಆಸ್ಪತ್ರೆ ಸಿಗ್ನಲ್‌ನಿಂದ ಬಿಇಎಲ್ ವೃತ್ತವನ್ನು ಸಂಪರ್ಕಿಸುವ (ನ್ಯೂ ಬಿಇಎಲ್ ರಸ್ತೆ) ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ನಿಂದ ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಇದರಿಂದ, ವಾಹನ ಸವಾರರು ಮತ್ತು ಪಾದಚಾರಿಗಳು ಮೂಗು ಮುಚ್ಚಿಕೊಂಡು ಓಡಾಡಬೇಕಾಗಿದೆ. ಮೂರು ತಿಂಗಳಿಂದ ಈ ಸಮಸ್ಯೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ದುರಸ್ತಿ ಕಾರ್ಯ ಕೈಗೊಂಡಿಲ್ಲ. ಸ್ಥಳೀಯ ಮುಖಂಡರು ಮತ್ತು ಅಧಿಕಾರಿಗಳು ಕೂಡಲೇ ಚರಂಡಿ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಪ್ರಕಾಶ್ ಕೆ.ಆರ್. ನ್ಯೂ ಬಿಇಎಲ್ ರಸ್ತೆ

'ಅಗೆದಿರುವ ರಸ್ತೆ ಸರಿಪಡಿಸಿ'

ಜಲಮಂಡಳಿ ಸಿಬ್ಬಂದಿ ಪೈಪ್‌ಗಳನ್ನು ಅಳವಡಿಸುವುದಕ್ಕಾಗಿ ದುಬಾಸಿಪಾಳ್ಯದ ಮುಖ್ಯರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿದ್ದಾರೆ. ಆರು ತಿಂಗಳಿಂದ ಕೆಲಸ ಮಂದಗತಿಯಲ್ಲಿ ಸಾಗಿದೆ. ಇದರಿಂದ, ವಾಹನ ಸವಾರರಿಗೆ ಸಮಸ್ಯೆ ಆಗುತ್ತಿದೆ. ಮುಖ್ಯರಸ್ತೆಗೆ ಸಂಪರ್ಕಿಸಲು ಸುತ್ತು ಹಾಕಿಕೊಂಡು ಬರಬೇಕಿದೆ. ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶಕ್ಕೆ ಕಲ್ಪಿಸಬೇಕು.

ಕೆ.ಎಂ. ಸಿದ್ದರಾಮು, ದುಬಾಸಿಪಾಳ್ಯ

'ಮುಖ್ಯರಸ್ತೆಯಲ್ಲಿನ ಗುಂಡಿ ಮುಚ್ಚಿ'

ಅಮೃತಹಳ್ಳಿ ವಿಭಾಗಕ್ಕೆ ಹೊಂದಿಕೊಂಡಿರುವ ಕೈವಾರ ತಾತಯ್ಯ ಮುಖ್ಯರಸ್ತೆಯಲ್ಲಿ ಭೂಗತ ಕೇಬಲ್‌ನ ಗುಂಡಿ ಬಾಯ್ದೆರೆದುಕೊಂಡಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಅನಾಹುತ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಗುಂಡಿಗೆ ಮುಚ್ಚಳವನ್ನು ಅಳವಡಿಸಬೇಕು.

ಶಿವಪ್ರಸಾದ್
ಅಮೃತಹಳ್ಳಿ

'ವಚನಗಳು ವೈಚಾರಿಕತೆಯ ಪ್ರತಿಬಿಂಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನಗಳು ಕಥೆ ಪುರಾಣಗಳಲ್ಲ; ವೈಚಾರಿಕತೆಯ ಪ್ರತಿಬಿಂಬ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ತಿಳಿಸಿದರು.

ಸಂಪಂಗಿರಾಮನಗರದಲ್ಲಿ ವೀರಶೈವ ಸದ್ಧರ್ಮ ವರ್ಧಿನಿ ಸಂಘ ಆಯೋಜಿಸಿದ್ದ ವಚನ ಶ್ರಾವಣದಲ್ಲಿ ಅವರು ಉಪನ್ಯಾಸ ನೀಡಿದರು.

ವಿಚಾರಶೀಲತೆಯೇ ವಚನಗಳ ಮೂಲ ಲಕ್ಷಣವಾಗಿದೆ. ವೈಚಾರಿಕ ನೆಲೆಗಟ್ಟಿನಲ್ಲಿ ಸಮ ಸಮಾಜವನ್ನು ನಿರ್ಮಾಣ ಮಾಡಿದ ಬಸವಣ್ಣನವರು ಸ್ತ್ರೀ ಸಮಾನತೆಯನ್ನು ಆಚರಣೆಗೆ ತಂದರು. ಶೋಷಿತರನ್ನು ಅಪ್ಪಿಕೊಂಡು, ಒಪ್ಪಿಕೊಂಡು ಜೊತೆಗೆ ಕರೆದುಕೊಂಡು ನಡೆದ ಮಹಾತ್ಮರು ಎಂದು ಬಣ್ಣಿಸಿದರು.

ವಚನ ಗಾಯನ ಸ್ಪರ್ಧೆಯಲ್ಲಿ ಸರ್ವಾಣಿ ಪ್ರಥಮ, ಶ್ರುತಿ ದ್ವಿತೀಯ, ಜೀವಿತಾ ತೃತೀಯ ಬಹುಮಾನ ಪಡೆದರು. ಐವತ್ತಕ್ಕೂ ಹೆಚ್ಚು ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸರ್ಪಭೂಷಣ ಮಠದ ಮಲ್ಲಿಕಾರ್ಜುನ ದೇವರು, ಸಂಘದ ಅಧ್ಯಕ್ಷ ಶಿವಪ್ಪ, ಪದಾಧಿಕಾರಿಗಳಾದ ಗೌರಿಶಂಕರ್, ಪಂಚಾಕ್ಷರಿ, ಗುರುಪ್ರಸಾದ್, ರುದ್ರಪ್ಪ ಹಾಜರಿದ್ದರು.

ರಾಜ್ಯದಲ್ಲಿ ಒಟ್ಟು 8.06 ಲಕ್ಷ ಉದ್ಯೋಗಿಗಳಲ್ಲಿ ಸಿಂಹಪಾಲು ಕನ್ನಡಿಗರಿದ್ದಾರೆ: ಸರ್ಕಾರದ ಅಂಕಿಅಂಶ

ಶೇ 86ರಷ್ಟು ಉದ್ಯೋಗಿಗಳು ಸ್ಥಳೀಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳು ಸೇರಿದಂತೆ ಬಹುತೇಕ ಕೈಗಾರಿಕಾ ಸಂಸ್ಥೆಗಳಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳಲ್ಲಿ ಕನ್ನಡಿಗರು ಇದ್ದಾರೆ ಎನ್ನುತ್ತವೆ ಸರ್ಕಾರದ ಅಂಕಿಅಂಶಗಳು.

ಖಾಸಗಿ ಕಂಪನಿಗಳಲ್ಲಿನ ಆಡಳಿತಾತ್ಮಕ ಮತ್ತು ಆಡಳಿತಾತ್ಮಕ ವಲ್ಲದ ಹುದ್ದೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಕಾಯ್ದೆ ರೂಪಿಸಲು ಮುಂದಾಗಿದ್ದ ಕಾರಣ ಈ ಅಂಕಿಅಂಶಗಳು ಬಹಿರಂಗ ಆಗಿವೆ.

‘ರಾಜ್ಯದಲ್ಲಿರುವ ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳ ಒಟ್ಟು ಸಂಖ್ಯೆ 1,659. ಉತ್ಪಾದನಾ ವಲಯದಲ್ಲಿ 87 ಬಹುರಾಷ್ಟ್ರೀಯ ಕಂಪನಿಗಳು ಮತ್ತು 46 ಸಾರ್ವಜನಿಕ ಉದ್ಯಮಗಳಿವೆ. ಈ ಕಂಪನಿಗಳಲ್ಲಿ ಒಟ್ಟು 8.06 ಲಕ್ಷ ಉದ್ಯೋಗಿಗಳಿದ್ದು, ಆ ಪೈಕಿ, ಶೇ 86ರಷ್ಟು (6.96 ಲಕ್ಷ) ಸ್ಥಳೀಯರು. ಹಿರಿಯ ಆಡಳಿತಾತ್ಮಕ (ಗ್ರೂಪ್ ‘ಎ’) ಉದ್ಯೋಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಗ್ರೂಪ್ ‘ಬಿ’ (ಮೇಲ್ವಿಚಾರಕ), ‘ಸಿ’ (ಗುಮಾಸ್ತ) ಮತ್ತು ‘ಡಿ’ (ಕೆಳಹಂತದ ಹುದ್ದೆಗಳು) ವೃಂದಗಳಲ್ಲಿ ಕ್ರಮವಾಗಿ ಸ್ಥಳೀಯರ ಶೇಕಡಾವಾರು ಪ್ರಮಾಣ ಹೆಚ್ಚು ಇದೆ’ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮಾಹಿತಿ ನೀಡಿದೆ.

ರಾಜ್ಯ ಸರ್ಕಾರದಿಂದ ಈಗಾಗಲೇ ಜಾರಿಯಲ್ಲಿರುವ ನೀತಿಯ ಪ್ರಕಾರ, ಸರ್ಕಾರದಿಂದ ನೆರವು ಪಡೆಯುವ ಯಾವುದೇ ಖಾಸಗಿ ಕಂಪನಿ



ಗ್ರೂಪ್ ‘ಸಿ’ ಮತ್ತು ‘ಡಿ’ ವೃಂದದ ಉದ್ಯೋಗ ಗಳಲ್ಲಿ ಸ್ಥಳೀಯರನ್ನು ನೇಮಿಸಬೇಕು, ಆ ಮೂಲಕ, ಶೇ 70ರಷ್ಟು ಕನ್ನಡಿಗರಿಗೆ ಅವಕಾಶ ನೀಡಬೇಕು.

‘ಸರ್ಕಾರದಿಂದ ಭೂಮಿ, ನೀರು, ಸಬ್ಸಿಡಿ ಸೇರಿದಂತೆ ಯಾವುದೇ ನೆರವು ಪಡೆದುಕೊಳ್ಳದ ಕಂಪನಿಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರನ್ನು ನೇಮಿಸಿಕೊಳ್ಳುವಂತೆ ಕೈಗಾರಿಕೆಗಳಿಗೆ ನಾವು ಮನವಿ ಮಾಡುತ್ತೇವೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

‘ಕೌಶಲ ಹೊಂದಿದವರಿಗೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಅವಕಾಶ ಹೆಚ್ಚಿದೆ. ಫಾಕ್ಸ್‌ಕಾನ್‌ನಂಥ ಕಂಪನಿಗೆ ಯಾವ ಕೌಶಲ ಬೇಕು ಎಂದು ನಮಗೆ ತಿಳಿದಿದೆ. ನಾವು ನಮ್ಮ ಜನರನ್ನು ಕೌಶಲ ಹೊಂದಿದವರನ್ನಾಗಿ ಮಾಡಬೇಕಿದೆ’ ಎಂದೂ ಹೇಳಿದರು.

ಇತ್ತೀಚೆಗೆ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ, ಖಾಸಗಿ ಕೈಗಾರಿಕೆಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ 75ರಷ್ಟು ಮೀಸಲಾತಿ ನಿಗದಿಪಡಿಸಿದ್ದ ಮಸೂದೆ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿತ್ತು.

ಈ ಮಸೂದೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಕೂಡ ನೀಡಲಾಗಿತ್ತು. ಆದರೆ, ಈ ಮಸೂದೆಗೆ ಖಾಸಗಿ ಕಂಪನಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ, ಒತ್ತಡಕ್ಕೆ ಮಣಿದ ಸರ್ಕಾರವು ಈ ಮಸೂದೆಯನ್ನು ತಡೆಹಿಡಿದಿತ್ತು.

ನೀತಿ ಏನು ಹೇಳುತ್ತದೆ?

- ಸರ್ಕಾರಿ ನೆರವು ಪಡೆಯುವ ಕಂಪನಿಗಳು ‘ಸಿ’, ‘ಡಿ’ ವೃಂದದ ಹುದ್ದೆಗಳಿಗೆ ಸ್ಥಳೀಯರ-ನೇಮಿಸಬೇಕು
- ಶೇ 70ರಷ್ಟು ಕನ್ನಡಿಗರಿಗೆ ಆ ವೃಂದದ ಹುದ್ದೆಗಳಲ್ಲಿ ಅವಕಾಶ ನೀಡಬೇಕು

ಸುದ್ದಿ 2 ನಿಮಿಷ

ಭಾರಿ ಮಳೆ ಸಂಬಂಧಿತ ಅವಘಡ ಉತ್ತರದ ರಾಜ್ಯಗಳಲ್ಲಿ 28 ಸಾವು

ನವದೆಹಲಿ (ಪಿಟಿಐ): ಈಶಾನ್ಯ, ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದ್ದು, ಈ ಸಂಬಂಧಿತ ಅವಘಡಗಳಲ್ಲಿ 28 ಮಂದಿ ಸತ್ತಿದ್ದಾರೆ. ಭೂಕುಸಿತ, ಮನೆಕುಸಿತ ಪ್ರಕರಣಗಳು ವರದಿಯಾಗಿವೆ.

ಮಳೆಯಿಂದಾಗಿ ಜಮ್ಮು ಮತ್ತು ಕಾಶ್ಮೀರದ ಆಡಳಿತವು ವಾರ್ಷಿಕ ಅಮರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ರದ್ದುಪಡಿಸಿದೆ.

ರಾಜಸ್ಥಾನದ ಭರತ್‌ಪುರ ಜಿಲ್ಲೆಯ ಶ್ರೀನಗರ ಗ್ರಾಮದ ಏಳು ಮಂದಿ ರೀಲ್ಸ್ ಮಾಡಲು ಹೋಗಿ ನದಿಯಲ್ಲಿ ಮುಳುಗಿ ಸತ್ತಿದ್ದಾರೆ.

ಕರೌಲಿ ಜಿಲ್ಲೆಯಲ್ಲಿ 38 ಸೆಂ.ಮೀ. ಮಳೆಯಾಗಿದೆ. ಹರಿಯಾಣದಲ್ಲಿ ಅಣೆಕಟ್ಟೆಗೆ ಹಾನಿಯಾಗಿದೆ.

ಪಂಜಾಬ್‌ನ ಹೋಶಿಯಾರ್ ಪುರ್‌ನಲ್ಲಿ ವಾಹನವೊಂದು ಕೊಚ್ಚಿಹೋಗಿ ಒಂದೇ ಕುಟುಂಬದ 9 ಮಂದಿ ಮೃತಪಟ್ಟಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭೂಕುಸಿತದಿಂದಾಗಿ ಮೂವರು ಬಾಲಕಿಯರು ಸತ್ತಿದ್ದು, ಒಬ್ಬ ನಾಪತ್ತೆಯಾಗಿದ್ದಾನೆ. ರಾಜ್ಯದಲ್ಲಿ 280 ರಸ್ತೆಗಳು ಜಲಾವೃತವಾಗಿ ಸಂಚಾರ ಸ್ಥಗಿತವಾಗಿತ್ತು.

ಉತ್ತರ ಪ್ರದೇಶದ ಜಲೌನ್‌ನಲ್ಲಿ ಮನೆಯೊಂದು ಕುಸಿದು ಮಹಿಳೆ ಮತ್ತು ಆಕೆಯ ಏಳು ವರ್ಷದ ಪುತ್ರನೊಬ್ಬ ಮೃತ-ಪಟ್ಟಿದ್ದಾರೆ ಎಂದು ವರದಿಗಳು ತಿಳಿಸಿವೆ.

ರಾಜಧಾನಿ ನವದೆಹಲಿಯ ವಿವಿಧೆಡೆ ಭಾರಿ ಮಳೆಯಾಗಿದ್ದು, ಹಲವು ಪ್ರದೇಶಗಳು ಜಲಾವೃ-ತವಾಗಿದ್ದವು. ಗುರುಗ್ರಾಮದಲ್ಲಿ ಗರಿಷ್ಠ ಅಂದರೆ 70 ಮಿ.ಮೀ. ಮಳೆ ಸುರಿದಿರುವುದು ದಾಖಲಾಗಿದೆ.

13, 14ರಂದು ಚಿತ್ರರಂಗದ ಒಳಿತಿಗಾಗಿ ಪೂಜೆ

ಬೆಂಗಳೂರು: ‘ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಿಂದ ಆ.13, 14ರಂದು ವಿವಿಧ ರೀತಿಯ ಪೂಜೆ, ಹೋಮಗಳನ್ನು ನಡೆಸಲಾಗುತ್ತಿದೆ’ ಎಂದು ಸಂಘದ ಅಧ್ಯಕ್ಷ, ನಟ ದೊಡ್ಡಣ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಲಾವಿದರು ಮತ್ತು ಚಿತ್ರರಂಗದ ಒಳಿತಿಗಾಗಿ ಗಣಪತಿ ಹೋಮ, ಮೃತ್ಯುಂಜಯ ಹೋಮ, ಸರ್ಪಶಾಂತಿ ಮೊದಲಾದ ಪೂಜೆಗಳನ್ನು ನೆರವೇರಿಸ-ಲಾಗುವುದು. ಕಲಾವಿದರ ಸಂಘದ ಕಟ್ಟಡ ನಿರ್ಮಾಣಗೊಂಡ ಸಮಯದಲ್ಲಿಯೇ ಈ ಕಾರ್ಯಕ್ರಮಗಳು ನಡೆಯಬೇಕಿತ್ತು. ಆದರೆ ಕೋವಿಡ್ ಮತ್ತಿತರ ಕಾರಣಗಳಿಂದ ಸಾಧ್ಯವಾಗಿರಲಿಲ್ಲ. ಈಗ ಕಾಲ ಕೂಡಿ ಬಂದಿದೆ’ ಎಂದರು.

ನಿರ್ಮಾಪಕ ಹಾಗೂ ಸಂಘದ ಕಾರ್ಯದರ್ಶಿ ರಾಕ್‌ಲೈನ್ ವೆಂಕಟೇಶ್ ಮಾತನಾಡಿ, ‘ದರ್ಶನ್ ಪ್ರಕರಣಕ್ಕೂ ಈ ಕಾರ್ಯಕ್ರಮಕ್ಕೂ ಯಾವುದೇ ಸಂಬಂಧವಿಲ್ಲ. ಚಿತ್ರರಂಗ ಪಾತಾಳಕ್ಕೆ ಇಳಿಯುತ್ತಿದೆ. ದೇವರು ಚಿತ್ರರಂಗದ ಕೈ ಹಿಡಿಯಲಿ ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಚಿತ್ರರಂಗದ ಎಲ್ಲರನ್ನು ಆಹ್ವಾನಿಸುತ್ತೇವೆ. ಸಂಘದ ಚುನಾವಣೆ ಹಾಗೂ ಸರ್ವಸಭೆಗೆ ಸಿದ್ಧತೆ ನಡೆದಿದೆ’ ಎಂದರು.

ಯುವತಿಗೆ ಮುತ್ತಿಟ್ಟಿದ್ದ ಆರೋಪಿ ಬಂಧನ

ಪಾದಚಾರಿ ಯುವತಿ ಅಡ್ಡಗಟ್ಟಿ ಕೃತ್ಯ • ಆರೋಪಿ ಮೂಲತಃ ಜೇವರ್ಗಿ ನಿವಾಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದು ಕೊಂಡು ಹೋಗುತ್ತಿದ್ದ ಯುವತಿಯನ್ನು ತಬ್ಬಿಕೊಂಡು ಮುತ್ತಿಟ್ಟು ಪರಾರಿಯಾಗಿದ್ದ ಕಲಬುರಗಿ ಜಿಲ್ಲೆಯ ಜೇವರ್ಗಿಯ ಬಸವರಾಜ್ ಎಂಬಾತನನ್ನು ಸೋಲದೇವನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಔಷಧದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿರುವ ಆರೋಪಿ ಸದ್ಯ ಚಿಕ್ಕಬಾಣಾವಾರದ ಮಾರುತಿನಗರದಲ್ಲಿ ವಾಸವಾಗಿದ್ದಾನೆ.

ಹೊರ ರಾಜ್ಯದ ಯುವತಿಯೊಬ್ಬರು ಕಾಲೇಜೊಂದರಲ್ಲಿ ನರ್ಸಿಂಗ್ ವ್ಯಾಸಂಗ ಮಾಡುತ್ತಿದ್ದಾರೆ. ಜುಲೈ 30ರ ರಾತ್ರಿ 9ರ ಸುಮಾರಿಗೆ ವಿದ್ಯಾರ್ಥಿನಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಆರೋಪಿ, ಯುವತಿಯನ್ನು ಬಲವಂತವಾಗಿ ತಬ್ಬಿ ಕೊಂಡು ಮುತ್ತುಕೊಟ್ಟಿದ್ದ.ಗಾಬರಿ ಗೊಂಡ ವಿದ್ಯಾರ್ಥಿನಿ ರಕ್ಷಣೆಗಾಗಿ ಕೂಗುತ್ತಿದ್ದಂತೆ, ಆರೋಪಿ ಪರಾರಿ ಯಾಗಿದ್ದ. ಯುವತಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಟೊ ಚಾಲಕ ಬಂಧನ: ಕಾರು ಚಾಲಕನ ಮುಖಕ್ಕೆ ಉಗಿದು ಅಸಭ್ಯವಾಗಿ ವರ್ತಿಸಿದ್ದ ಆಟೊ ಚಾಲಕ ಬಾಬಾಸಾಬ್ ಎಂಬಾತನನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಎರಡು ದಿನಗಳ ಹಿಂದೆ ಮಾರತ್ ಹಳ್ಳಿಯ ಯಮಲೂರು ಸಿಗ್ನಲ್ ಬಳಿ ಕಾರು ಹಾಗೂ ಆಟೊ ಚಾಲಕರ ನಡುವೆ ಗಲಾಟೆ ನಡೆದಿತ್ತು. ಆಗ ಬಾಬಾಸಾಬ್, ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಾರು ಚಾಲಕನ ಮುಖಕ್ಕೆ ಉಗಿದಿದ್ದ. ಅಲ್ಲದೇ ಕಾರಿನ ಗಾಜು ಒಡೆದುಹಾಕಿದ್ದ. ಕಾರು ಚಾಲಕನ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಿ, ಆಟೊ ವಶಕ್ಕೆ ಪಡೆದಿದ್ದಾರೆ.

ಮಹಿಳೆಯ ದ್ವಿಚಕ್ರ ವಾಹನ ಕಳವು: ಹೆಬ್ಬಾಳದ ಚೋಳನಹಳ್ಳಿ ಮಿನಿ ಮಾರ್ಟ್ ಎದುರಿನ ರಸ್ತೆ ಬದಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾಗಿದೆ.

ಮಹಿಳೆಯೊಬ್ಬರು ತರಕಾರಿ ತರಲು ಹೋಗುವ ಆತುರದಲ್ಲಿ ವಾಹನದಲ್ಲಿಯೇ ಕೀ ಬಿಟ್ಟು ಹೋಗಿದ್ದಾರೆ. ಅವರು ವಾಪಸ್ ಬರುವಷ್ಟರಲ್ಲಿ ವಾಹನ ಕಳವಾಗಿತ್ತು. ವ್ಯಕ್ತಿಯೊಬ್ಬ ವಾಹನ ಕಳವು ಮಾಡುತ್ತಿರುವ ದೃಶ್ಯ ಸಮೀಪದಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಹಿಳೆಯು ದೂರು ದಾಖಲಿಸಿದ್ದು, ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ

ಬೆಂಗಳೂರು: ನಗರದ ಬಿಇಎಲ್ ರಸ್ತೆಯಲ್ಲಿರುವ ಥರ್ಡ್ ವೇವ್ ಕಾಫಿ ಶಾಪ್‌ನ ಮಹಿಳಾ ಶೌಚಾಲಯದಲ್ಲಿ ಮೊಬೈಲ್ ಇರಿಸಿ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಆರೋಪದ ಮೇರೆಗೆ ಯುವಕನೊಬ್ಬನನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ.

ಮನೋಜ್

ಕಾಫಿ ಶಾಪ್‌ನ ಸಿಬ್ಬಂದಿ ಭದ್ರಾವತಿಯ ಮನೋಜ್ (23) ಎಂಬಾತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

‘ಮನೋಜ್ ಶನಿವಾರ ಬೆಳಿಗ್ಗೆ ಮಹಿಳೆಯರ ಶೌಚಾಲಯಕ್ಕೆ ತೆರಳಿ ಅಲ್ಲಿದ್ದ ಕಸದ ಬುಟ್ಟಿಯಲ್ಲಿ ರಂಧ್ರ ಕೊರೆದು ಮೊಬೈಲ್ ಇಟ್ಟಿದ್ದನೆ. ಶಬ್ದವಾದರೆ ಗೊತ್ತಾಗಬಹುದು ಎಂಬ ಕಾರಣಕ್ಕೆ ಫೋನ್ ಅನ್ನು ಫ್ಲೈಟ್ ಮೋಡ್‌ನಲ್ಲಿರಿಸಿ, ಕ್ಯಾಮೆರಾ ಚಾಲನೆ ಮಾಡಿ ಹೊರಬಂದು ತನ್ನ ಕೆಲಸದಲ್ಲಿ ತೊಡಗಿಕೊಂಡಿದ್ದಾನೆ. ಬಳಿಕ ಶೌಚಾಲಯಕ್ಕೆ ತೆರಳಿದ ಮಹಿಳೆಯೊಬ್ಬರು ಮೊಬೈಲ್ ಇಟ್ಟಿರುವುದನ್ನು ಗಮನಿಸಿ, ಗಾಬರಿಗೊಂಡು ಕೆಫೆ ಸಿಬ್ಬಂದಿಗೆ ಮಾಹಿತಿ ನೀಡಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿದಾಗ ಕೆಫೆಯ ಸಿಬ್ಬಂದಿಯೇ ಮೊಬೈಲ್ ಇರಿಸಿರುವುದಾಗಿ ಪತ್ತೆಯಾಗಿದೆ. ತಕ್ಷಣವೇ ಆರೋಪಿಯನ್ನು ಬಂಧಿಸಿ, ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಮೊಬೈಲ್‌ನಲ್ಲಿ ಕಾಫಿ ಶಾಪ್ ಶೌಚಾಲಯದ ಒಂದು ವಿಡಿಯೊ ಮಾತ್ರ ಪತ್ತೆಯಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ(ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ಐ.ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಬಗ್ಗೆ ‘ಗ್ಯಾಂಗ್ಸ್ ಆಫ್ ಸಿನಿಪುರ್’ ಎಂಬ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ತಮಗಾದ ಕಹಿ ಅನುಭವವನ್ನು ಮಹಿಳೆ ಬರೆದುಕೊಂಡಿದ್ದು, ‘ಗ್ರಾಹಕರು ಜಾಗರೂಕರಾಗಿಬೇಕು’ ಎಂದು ಹೇಳಿದ್ದಾರೆ.

ಈ ಘಟನೆ ಕುರಿತು ಥರ್ಡ್ ವೇವ್ ಕೆಫೆ ಆಡಳಿತ ಮಂಡಳಿ ಕ್ಷಮೆ ಕೇಳಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ‘ಬೆಂಗಳೂರಿನ ಬಿಇಎಲ್ ರಸ್ತೆಯ ಶಾಖೆಯಲ್ಲಿ ನಡೆದ ಅಹಿತಕರ ಘಟನೆಗೆ ವಿಷಾದಿಸುತ್ತೇವೆ. ಉದ್ಯೋಗಿಯನ್ನು ತಕ್ಷಣವೇ ವಜಾಗೊಳಿಸಿದ್ದೇವೆ’ ಎಂದು ತಿಳಿಸಿದೆ.

ಹಣ ದುಪ್ಪಟ್ಟು: ಟೆಕಿ ದಂಪತಿಗೆ ₹2.66 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ನೀಡುವುದಾಗಿ ಆಮಿಷವೊಡ್ಡಿ ನಗರದ ಟೆಕಿ ದಂಪತಿಗೆ ₹2,66,75,791 ವಂಚನೆ ಮಾಡಿರುವ ಕುರಿತು ಪೂರ್ವ ವಿಭಾಗದ ಸೆನ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಸುಮಾರು 50 ಬ್ಯಾಂಕ್ ಖಾತೆಗಳಿಗೆ ಹಣ ವರ್ಗವಾಗಿರುವುದನ್ನು ಪತ್ತೆ ಮಾಡಿದ್ದಾರೆ. ಹಂತ ಹಂತವಾಗಿ ₹1.50 ಕೋಟಿ ಹಣ ಜಪ್ತಿ ಮಾಡಿದ್ದು, ನ್ಯಾಯಾಲಯದ ಅನುಮತಿ ಪಡೆದು ದಂಪತಿಗೆ ವಾಪಸ್ ನೀಡಿದ್ದಾರೆ.

ಘಟನೆ ವಿವರ: ‘ನಗರದ ಬಾಣಸವಾಡಿಯಲ್ಲಿ ವಾಸವಿರುವ ದಂಪತಿಗೆ ಲಂಡನ್‌ನಿಂದ ವ್ಯಕ್ತಿಯೊಬ್ಬ ಕರೆ ಮಾಡಿ, ಯುಟ್ಯೂಬ್‌ನಲ್ಲಿ ವಿಡಿಯೊ ನೋಡಿ ಚಂದಾದಾರರಾದರೆ(ಸಬ್‌ಸ್ಕ್ರೈಬ್) ಮಾಡಿದರೆ ₹50 ನೀಡುವುದಾಗಿ ಹೇಳಿದ್ದಾನೆ. ಸಬ್‌ಸ್ಕ್ರೈಬ್ ಮಾಡಿದ್ದ ದಂಪತಿಗೆ ಹಣ ನೀಡಿದ್ದಾನೆ. ನಂತರ ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿ, ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ನೀಡುವುದಾಗಿ ಆಮಿಷವೊಡ್ಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೊದಲಿಗೆ ₹2 ಲಕ್ಷದಿಂದ ₹3 ಲಕ್ಷ ಹೂಡಿಕೆ ಮಾಡಿದವರಿಗೆ ಲಾಭಾಂಶ ನೀಡಿದ್ದನು. ಇದರಿಂದ ಸಂತಸಗೊಂಡ ದಂಪತಿ ಹಂತ ಹಂತವಾಗಿ ₹2,66,75,791 ಹೂಡಿಕೆ ಮಾಡಿದ್ದರು. ಹಣ ವಾಪಸ್ ಪಡೆಯಲು ಪ್ರಯತ್ನಿಸಿದಾಗ ಅವರಿಗೆ ಸಾಧ್ಯವಾಗಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ ಮತ್ತೆ ₹50 ಲಕ್ಷ ಹೂಡಿಕೆ ಮಾಡಲು ಸೂಚಿಸಿದ್ದ. ಅನುಮಾನಗೊಂಡು ದಂಪತಿ ಪೊಲೀಸರಿಗೆ ದೂರು ನೀಡಿದರು’ ಎಂದು ಹೇಳಿದ್ದಾರೆ.

‘ಆರೋಪಿ ಲಂಡನ್‌ನಲ್ಲಿ ಕುಳಿತು ಕೃತ್ಯ ಎಸಗಿರುವ ಬಗ್ಗೆ ಮಾಹಿತಿ ಇದ್ದು, ಉತ್ತರ ಭಾರತದ ಹಲವರ ಬ್ಯಾಂಕ್ ಖಾತೆಗಳನ್ನು ವಂಚನೆ ಜಾಲಕ್ಕೆ ಬಳಕೆ ಮಾಡಿದ್ದಾನೆ. ಅನುಮಾನ ಬರಬಾರದೆಂದು ಷೇರು ಮಾರ್ಕೆಟ್ ಬ್ರೋಕರೇಜ್ ರೀತಿಯ ನಕಲಿ ವೆಬ್‌ಸೈಟ್ ತೆರೆದು ಮಾಹಿತಿ ಸಹ ನೀಡಿದ್ದ. ಸದ್ಯ ಆರೋಪಿ ಯಾರು ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ತನಿಖೆ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ಲಂಡನ್‌ನಲ್ಲಿ ಕುಳಿತ ವ್ಯಕ್ತಿಯಿಂದ ವಂಚನೆ
- ಮೋಸಹೋದ ಬಾಣಸವಾಡಿ ದಂಪತಿ
- 50 ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ

ವಿವಾಹ... ನಿರ್ದೇಶಕ ತರುಣ್ ಕಿಶೋರ್ ಸುಧೀರ್ ಮತ್ತು ನಟಿ ಸೋನಲ್ ಮಾಂತೆರೊ ಅವರ ವಿವಾಹವು ಬೆಂಗಳೂರಿನ ಪೂರ್ಣಿಮಾ ಪ್ಯಾಲೆಸ್‌ನಲ್ಲಿ ಭಾನುವಾರ ಜರುಗಿತು

ಲಾರಿ-ಟೆಂಪೊ ಡಿಕ್ಕಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾರಿ ಡಿಕ್ಕಿ ಹೊಡೆದು ಟೆಂಪೊದಲ್ಲಿದ್ದ ಮೂವರು ಮೃತಪಟ್ಟು, ಆರು ಮಂದಿ ಗಾಯಗೊಂಡಿರುವ ಘಟನೆ ನೆಲಮಂಗಲ ತಾಲ್ಲೂಕಿನ ಕುಲುವನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಬಳಿ ಭಾನುವಾರ ಸಂಭವಿಸಿದೆ.



ಯಾದಗಿರಿಯ ಕಟ್ಟಡ ಕಾರ್ಮಿಕರಾದ ನರಸಪ್ಪ (35), ಹುಸೇನಪ್ಪ(34) ಮತ್ತು ಪಾದಚಾರಿ ತುಮಕೂರು ತಾಲ್ಲೂಕಿನ ಸೀತಕಲ್ಲು ನಿವಾಸಿ ಶಿವಗಂಗಪ್ಪ (55) ಮೃತರು.

ಕಾಂಕ್ರಿಟ್ ಮಿಕ್ಸರ್ ಟ್ರಾಲಿಯೊಂದಿಗೆ ಸಾಗುತ್ತಿದ್ದ ಟೆಂಪೊಗೆ ಲಾರಿ ಡಿಕ್ಕಿ ಹೊಡೆದಿದೆ. ನಂತರ ಮುಂದೆ ಹೋಗುತ್ತಿದ್ದ ಪಾದಚಾರಿಗೂ ಡಿಕ್ಕಿ ಹೊಡೆದಿದೆ.

ಮೂವರೂ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಟೆಂಪೊದಲ್ಲಿದ್ದ ಯಾದಗಿರಿಯ ಲಕ್ಷ್ಮೀ, ಭಾನುಪ್ರಿಯಾ, ಅನಂತಪ್ಪ, ನಾಗರಾಜು, ಸಾಬಣ್ಣ, ಕಟ್ಟಪ್ಪ ಹಾಗೂ ಮೂವರು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಂಗಾರಪ್ಪ ಎಂಬುವವರ ಸ್ಥಿತಿ ಗಂಭೀರವಾಗಿದೆ.

ಮೂವರು ಗಾಯಾಳುಗಳನ್ನು ನೆಲಮಂಗಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತದ ನಂತರ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಸಂಚಾರ ಅಸ್ತವ್ಯಸ್ತ ಉಂಟಾಗಿತ್ತು. ವಾಹನ ಸವಾರರು ಪರದಾಡಿದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಮ್ಮು, ಕಾಶ್ಮೀರ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ನಗರದ ಪ್ರತಿಷ್ಠಿತ ಕಾಲೇಜೊಂದರ ವಿದ್ಯಾರ್ಥಿಯೊಬ್ಬ ಯಲಹಂಕದ ಪಿ.ಜಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎರಡನೇ ವರ್ಷದ ಬಿ.ಎಸ್ಸಿ. ವ್ಯಾಸಂಗ ಮಾಡುತ್ತಿದ್ದ ತನ್ವೀರ್(21) ಆತ್ಮಹತ್ಯೆ ಮಾಡಿಕೊಂಡವರು. ಇವರು ಕಾಶ್ಮೀರದ ಬುಡ್ಗಾಮ್ ಜಿಲ್ಲೆಯ ನಿವಾಸಿ ಎಂದು ಗುರುತಿಸಲಾಗಿದೆ.

‘ತನ್ವೀರ್ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮರಣಪತ್ರವೂ ಸಿಕ್ಕಿದೆ. ಪತ್ರದಲ್ಲಿ ನನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸ ಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ರೋಗಿ ಸಾವು: ಆಸ್ಪತ್ರೆ ಎದುರು ಪ್ರತಿಭಟನೆ

ಬೆಂಗಳೂರು: ವೈದ್ಯರ ನಿರ್ಲಕ್ಷ್ಯದಿಂದ ರೋಗಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಕುಟಂಬದ ಸದಸ್ಯರು ಕೊಡಿಗೆಹಳ್ಳಿಯ ನಾರಾಯಣ ಆಸ್ಪತ್ರೆ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ತಿಂಡ್ಲು ನಿವಾಸಿ ರಮೇಶ್ (35) ಅವರನ್ನು ನಾರಾಯಣ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಅವರು ಭಾನುವಾರ ಮೃತಪಟ್ಟಿದ್ದಾರೆ.

‘ವೈದ್ಯರು ಸರಿಯಾದ ಚಿಕಿತ್ಸೆ ನೀಡಿಲ್ಲ. ಅವರ ನಿರ್ಲಕ್ಷ್ಯದಿಂದಲೇ ರಮೇಶ್ ಮೃತಪಟ್ಟಿದ್ದಾರೆ’ ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. ವಿಷಯ ತಿಳಿದು ನೂರಾರು ಜನ ಆಸ್ಪತ್ರೆ ಎದುರು ಜಮಾಯಿಸಿದರು. ‘ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು. ಕೊಡಿಗೇಹಳ್ಳಿ ಪೊಲೀಸರು ಸ್ಥಳಕ್ಕೆ ಬಂದು ಪ್ರತಿಭಟನ-ಕಾರರನ್ನು ಚದುರಿಸಿದರು.

ನೀಟ್–ಪಿಜಿ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ನೀಟ್–ಪಿಜಿ 2024 ಪರೀಕ್ಷೆಯನ್ನು ದೇಶದ 170 ನಗರಗಳ 416 ಕೇಂದ್ರಗಳಲ್ಲಿ ಎರಡು ಪಾಳಿಗಳಲ್ಲಿ ಭಾನುವಾರ ಯಶಸ್ವಿಯಾಗಿ ನಡೆಸಲಾಯಿತು. ಕೇಂದ್ರ ಆರೋಗ್ಯ ಸಚಿವಾಲಯದ ಅಧೀನದ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ ಈ ಪರೀಕ್ಷೆ ನಡೆಸಿತು.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಈ ಪರೀಕ್ಷೆಯು ಜೂನ್ 23ರಂದು ನಡೆಯಬೇಕಿತ್ತು. ಆದರೆ ಕೆಲವು ಸ್ಪರ್ಧಾತ್ಮಕ ಪರೀಕ್ಷೆ-ಗಳಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪದ ಕಾರಣಕ್ಕೆ ‘ಮುನ್ನೆಚ್ಚರಿಕೆ ಕ್ರಮವಾಗಿ’ ಪರೀಕ್ಷೆಯನ್ನು ಮುಂದೂಡಲಾಗಿತ್ತು.

ಪ್ರವೇಶಪತ್ರಗಳನ್ನು 2.28 ಲಕ್ಷ ಅಭ್ಯರ್ಥಿಗಳಿಗೆ ನೀಡಲಾಗಿತ್ತು. ಅವರಿಗೆ, ಸಾಧ್ಯವಾದಷ್ಟೂ ಮಟ್ಟಿಗೆ ಅವರ ರಾಜ್ಯದಲ್ಲೇ ಪರೀಕ್ಷಾ ಕೇಂದ್ರ ನಿಗದಿ ಮಾಡಲಾಗಿತ್ತು ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಲು 300 ತಂಡಗಳನ್ನು ರಚಿಸಲಾಗಿತ್ತು ಎಂದು ಅದು ಹೇಳಿದೆ. ಅಲ್ಲದೆ, ತಪ್ಪು ಮಾಹಿತಿಗಳು ಹರಡುವುದನ್ನು ತಡೆಯಲು ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇರಿಸಲಾಗಿತ್ತು.

ರಕ್ಷಣಾ ಕಾರ್ಯಾಚರಣೆ ಮುಕ್ತಾಯ

ರುದ್ರಪ್ರಯಾಗ್ (ಪಿಟಿಐ): ಕೇದಾರನಾಥ ಭೂಕುಸಿತದಲ್ಲಿ ಹಾನಿಗೊಳಗಾದ ರಸ್ತೆಗಳ ರಿಪೇರಿ ಕಾರ್ಯ ಸಮರೋಪಾದಿಯಲ್ಲಿ ಮುಂದುವರಿದಿದ್ದು, ಎಂಐ-17 ಹೆಲಿಕಾಪ್ಟರ್ ಮೂಲಕ ಸಾಧುಗಳು, ಸ್ಥಳೀಯ ವ್ಯಾಪಾರಿಗಳನ್ನು ಭಾನುವಾರ ಬೆಳಿಗ್ಗೆ ಗುಪ್ತಕಾಶಿಗೆ ಕಳುಹಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಭೂಕುಸಿತಕ್ಕೆ ಒಳಗಾದ ಜಾಗದಲ್ಲಿ ಯಾರೂ ಉಳಿದಿಲ್ಲ. ಕಾರ್ಯಾಚರಣೆ ಮುಕ್ತಾಯವಾಗಿದೆ’ ಎಂದರು.

ಜುಲೈ 31ರಂದು ಯಾತ್ರಾ ಮಾರ್ಗದಲ್ಲಿ ಭೂಕುಸಿತ ಸಂಭವಿಸಿತ್ತು. ಇದರಿಂದ ಕೇದಾರನಾಥ, ಗೌರಿಕುಂಡ್, ಲಿಂಚೋಲಿ, ಭಿಂಬಾಲಿಯಲ್ಲಿ ಸಾವಿರಾರು ಯಾತ್ರಿಕರು ಸಿಲುಕಿಕೊಂಡಿದ್ದ-ರು. ಹೀಗಾಗಿ, ಮರುದಿನದಿಂದ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು.

ಪುಷ್ಪ ಪ್ರದರ್ಶನ: 68 ಸಾವಿರ ಮಂದಿ ಭೇಟಿ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ‘ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ. ಆರ್. ಅಂಬೇಡ್ಕರ್’ ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನ’ಕ್ಕೆ ಭಾನುವಾರ 68 ಸಾವಿರ ಮಂದಿ ಭೇಟಿ ನೀಡಿದ್ದು, ₹42.32 ಲಕ್ಷ ಸಂಗ್ರಹವಾಗಿದೆ. ಶನಿವಾರಕ್ಕೆ ಹೋಲಿಸಿದರೆ ಉದ್ಯಾನಕ್ಕೆ ಭೇಟಿ ನೀಡಿದವರ ಸಂಖ್ಯೆ ಹೆಚ್ಚಿತ್ತು.

ಶಾಲೆ–ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ಲಾಲ್‌ಬಾಗ್‌ಗೆ ಗುಂಪು–ಗುಂಪಾಗಿ ಆಗಮಿಸಿದರು. ಬಂಡೆ, ಕೆರೆ ಏರಿ, ಬೋನ್ಸಾಯ್, ತರಕಾರಿ ಉದ್ಯಾನ, ಮಾರಾಟ ಮಳಿಗೆಗಳ ಬಳಿ ಕಿಕ್ಕಿರಿದ ಜನಸಂದಣಿ ಇತ್ತು. ಗಾಜಿನ ಮನೆಯಲ್ಲಿ ಜನದಟ್ಟಣೆ ಉಂಟಾಗಿ, ಸಾಲುಗಳನ್ನು ನಿಯಂತ್ರಿಸಲು ತೋಟಗಾರಿಕೆ ಇಲಾಖೆ ಸಿಬ್ಬಂದಿ ಮತ್ತು ಪೊಲೀಸರು ಹರಸಾಹಸಪಟ್ಟರು.

ಟಿಕೆಟ್ ಪಡೆಯಲು ಸಹ ಜನರು ಸಾಲಿನಲ್ಲಿ ಸಾಕಷ್ಟು ಹೊತ್ತು ನಿಲ್ಲಬೇಕಾಯಿತು. ಇದರಿಂದ ಮಕ್ಕಳು ಹಾಗೂ ವೃದ್ಧರು ಸಮಸ್ಯೆ ಎದುರಿಸಿದರು. ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗದಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿಯಾಗಿದ್ದವು.

ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಪುಷ್ಪ ಪ್ರದರ್ಶನಕ್ಕೆ ಭಾನುವಾರ ಅಸಂಖ್ಯ ಜನರು ಭೇಟಿ ನೀಡಿದ್ದರು –ಪ್ರಜಾವಾಣಿ ಚಿತ್ರ

‘ನಂಜೇಗೌಡರು ಕಾವೇರಿ ಸಮಸ್ಯೆ ಪರಿಹರಿಸಲು ನಿರಂತರ ಯತ್ನಿಸಿದ್ದರು’

ಧುರೀಣ ಎಚ್.ಎನ್. ಎನ್ ಸೇವೆ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ನಂಜೇಗೌಡರು ನಿರಂತರವಾಗಿ ಪ್ರಯತ್ನಿಸಿದ್ದರು’ ಎಂದು ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕು-ಮಾರ್ ಹೇಳಿದರು.

ಎಚ್.ಎನ್. ನಂಜೇಗೌಡರ ಅಭಿಮಾನಿ ಬಳಗ ಹಾಗೂ ಹನ್ನಾಳು ಪ್ರಕಾಶನ ಮೈಸೂರು ಸಹಯೋಗದಲ್ಲಿ ಭಾನುವಾರ ನಡೆದ ಕಾರ್ಯಕ್ರಮ-ದಲ್ಲಿ ಎಚ್.ಎಸ್. ಗೋವಿಂದಗೌಡ ಸಂಪಾದಕತ್ವದ ‘ಧೀಮಂತ ಧುರೀಣ ಎಚ್.ಎನ್. ನಂಜೇಗೌಡರು’ ಎಂಬ ಸಂಸ್ಮರಣ ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಲೋಕಸಭೆಯಲ್ಲಿ ನಂಜೇಗೌಡರು ನೀರಾವರಿಗೆ ಸಂಬಂಧಿಸಿದಂತೆ ವಿಚಾರಗಳನ್ನು ಮಾತನಾಡುತ್ತಿದ್ದರೆ, ಇಡೀ ಲೋಕಸಭೆಯೇ ಸ್ತಬ್ಧವಾಗುತ್ತಿತ್ತು. ಪ್ರತಿಯೊಬ್ಬರೂ ಅವರ ಮಾತುಗಳನ್ನು ಆಲಿಸುತ್ತಿದ್ದರು. ಹರಿಯಾಣ, ದೆಹಲಿ, ಮಧ್ಯಪ್ರದೇಶ, ರಾಜಸ್ಥಾನ, ಹಾಗೂ ಗುಜರಾತ್ ರಾಜ್ಯಗಳ ಸಂಸದರು ನಂಜೇಗೌಡರ ಬಳಿ ತಮ್ಮ ರಾಜ್ಯಗಳ-ಲ್ಲಿನ ನೀರಾವರಿ ಸಮಸ್ಯೆಗಳ ಕುರಿತು ಸಲಹೆಗಳನ್ನು ಪಡೆಯುತ್ತಿದ್ದರು’ ಎಂದು ನೆನಪಿಸಿಕೊಂಡರು.

ಬೆಂಗಳೂರು ಕೃಷಿ ವಿಶ್ವವಿದ್ಯಾ-ಲಯದ ವಿಶ್ರಾಂತ ಕುಲಪತಿ ಕೆ. ನಾರಾಯಣಗೌಡ ಮಾತನಾಡಿ, ‘1970-80ರಲ್ಲಿ ನಂಜೇಗೌಡರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದರು. ನಂತರದ ಮೂರು ದಶಕಗಳ ಕಾಲ ನೀರಾವರಿಗೆ ಸಂಬಂಧಿಸಿದ ವಿಷಯಗಳ ಕುರಿತು ಆಳವಾದ ಅಧ್ಯಯನ ಹಾಗೂ ಸಂಶೋಧನೆಗಳನ್ನು ಮಾಡಿದ್ದರು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಆರ್. ಪಾಟೀಲ, ಮಾಜಿ ಸಚಿವ ರಾಮಚಂದ್ರೇಗೌಡ, ಶಾಸಕ ಎ. ಮಂಜು, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎನ್. ಬಾಲಕೃಷ್ಣ ಭಾಗವಹಿಸಿದ್ದರು.

‘ಎಚ್.ಎನ್. ನಂಜೇಗೌಡ’ ಸಂಸ್ಮರಣ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ನಾರಾಯಣಗೌಡ, ಬಿಜೆಪಿ ಮುಖಂಡ ರಾಮಚಂದ್ರೇಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರೂ ಆದ ಶಾಸಕ ಸಿ. ಎನ್. ಬಾಲಕೃಷ್ಣ ಮತ್ತು ಶಾಸಕ ಎ. ಮಂಜು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಯಕ್ಷಗಾನ ಪುರುಷರಿಗೆ ಸೀಮಿತವಾಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಕ್ಷಗಾನ ಪುರುಷರಿಗಷ್ಟೇ ಸೀಮಿತವಾಗಿಲ್ಲ. ಹಿಮ್ಮೇಳ ಮತ್ತು ಮುಮ್ಮೇಳದಲ್ಲಿ ಮಹಿಳೆಯರೂ ಪಾಲ್ಗೊಂಡು ಸಾಧನೆ ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ತಿಳಿಸಿದರು.

ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆ ಏರ್ಪಡಿಸಿದ್ದ ಯಕ್ಷಗಾನ ಉತ್ಸವ-2024 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾಗವತಿಕೆಯಲ್ಲಿ, ಚೆಂಡೆ ವಾದನದಲ್ಲಿ, ಮುಮ್ಮೇಳ ಕಲಾವಿದರಾಗಿ ಮಹಿಳೆಯರು ತಮ್ಮದೇ ಛಾಪು ಮೂಡಿಸಿದ್ದಾರೆ. ಬಣ್ಣದ ವೇಷದಲ್ಲೂ ತೊಡಗಿಸಿಕೊಂಡು, ಆಯಾ ಪಾತ್ರಕ್ಕೆ ಅನುಗುಣವಾದ ಧ್ವನಿಯನ್ನೂ ನೀಡಿ ಪಾತ್ರಕ್ಕೆ ನ್ಯಾಯ ಒದಗಿಸುತ್ತಿದ್ದಾರೆ ಎಂದು ಹೇಳಿದರು.

ಯಕ್ಷಗಾನದ ಬೇರು ಆಳವಾಗಿದೆ. ಎಂದಿಗೂ ಅದು ತನ್ನ ಅಸ್ತಿತ್ವವನ್ನು ಉಳಿ-ಸಿಕೊಳ್ಳಲಿದೆ. ಯಕ್ಷಗಾನವನ್ನು ಉಳಿಸಿ-ಕೊಳ್ಳಬೇಕು, ಯಕ್ಷಗಾನ ಅವನತಿಯತ್ತ ಸಾಗುತ್ತಿದೆ ಎಂಬಂತಹ ಮಾತುಗಳ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದರು.

‘ಶರಸೇತು ಬಂಧ’ ಮಹಿಳಾ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರ-ಮದಲ್ಲಿ ಆಂಜನೇಯನ ಪಾತ್ರವಹಿಸಿ ಅರ್ಥಗಾರಿಕೆ ಮಾಡಿ ಧರಣೀದೇವಿ ಗಮನ ಸೆಳೆದರು.

ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆಯ ನಿರ್ದೇಶಕಿ ಗೌರಿ ಕೆ. ಮಾತನಾಡಿ, ‘ಸಂಸ್ಥೆ 26 ವರ್ಷಗಳಿಂದ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಉಚಿತವಾಗಿ ತರಬೇತಿ ನೀಡುತ್ತಿದೆ. ಈಗ ವಿದ್ಯಾರ್ಥಿವೇತನದ ಮೂಲಕ 12 ಮಹಿಳೆಯರಿಗೆ ಯಕ್ಷಗಾನ ತರಬೇತಿ ನೀಡುವ ಪ್ರಮುಖ ನಿರ್ಧಾರ ತೆಗೆದುಕೊಂಡಿದೆ’ ಎಂದು ವಿವರಿಸಿದರು.

ಯಕ್ಷಗಾನ ಉತ್ಸವದಲ್ಲಿ ಯಕ್ಷಗಾನ ವೇಷಭೂಷಣ ಹಾಗೂ ಮುಖವರ್ಣಿಕೆ ಕಮ್ಮಟ ನಡೆಸಲಾಯಿತು. ಯಕ್ಷಗಾನ ಪ್ರದರ್ಶನ, ತಾಳಮದ್ದಳೆ ನಡೆಯಿತು.

ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆ ನಗರದಲ್ಲಿ ಏರ್ಪಡಿಸಿದ್ದ ಯಕ್ಷಗಾನ ಉತ್ಸವದಲ್ಲಿ ಕಲಾವಿದೆಯರಿಂದ ಯಕ್ಷಗಾನ ಪ್ರದರ್ಶನ ನಡೆಯಿತು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

NACO
National Aids Control Organisation
India's Voice against AIDS
Ministry of Health & Family Welfare, Government of India
www.naco.gov.in

ಕರ್ನಾಟಕ ಸರ್ಕಾರ

KSAPS
KARNATAKA STATE AIDS PREVENTION SOCIETY

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಂತರಾಷ್ಟ್ರೀಯ ಯುವ ದಿನಾಚರಣೆ 2024

ಘೋಷ ವಾಕ್ಯ
"ಸುಸ್ಥಿರ ಅಭಿವೃದ್ಧಿಗಾಗಿ ಯುವಜನತೆಯ ಡಿಜಿಟಲ್ ಮಾರ್ಗಗಳು"

ಹೆಚ್.ಐ.ವಿ ತಡೆಗಟ್ಟಲು ತೀವ್ರಗೊಳಿಸಿದ ಐ.ಇ.ಸಿ ಪ್ರಚಾರಾಂದೋಲನಕ್ಕೆ ಚಾಲನೆ

ಮಾನ್ಯ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಹೆಚ್.ಐ.ವಿ ಪ್ರಚಾರಾಂದೋಲನದಲ್ಲಿ ಭಾಗವಹಿಸಿರುವುದು

ದಿನಾಂಕ : 12.08.2024ರ ಬೆಳಗ್ಗೆ 11:00ಕ್ಕೆ । ಸ್ಥಳ : ಆರೋಗ್ಯ ಸೌಧ, ನೆಲ ಮಹಡಿ ಸಭಾಂಗಣ, ಬೆಂಗಳೂರು

ನಿಮಗೆ ಅನುಮಾನವಿದ್ದಲ್ಲಿ
ಹೆಚ್‌ಐವಿ ಪರೀಕ್ಷೆ ಮಾಡಿಸಿಕೊಳ್ಳಿ

ಗೌಪ್ಯ ಪಾಲನೆ, ಉಚಿತ ಸಲಹೆ
ಉಚಿತ ಆಪ್ತ ಸಮಾಲೋಚನೆ ದೊರಕುತ್ತದೆ.

ಹೆಚ್‌ಐವಿ ಸೋಂಕಿತರಿಗೆ
ಬದುಕುವ ಹಕ್ಕಿದೆ

ತಾರತಮ್ಯ ಮಾಡಬೇಡಿ
ಗೌರವ, ಪ್ರೀತಿ, ಮಮತೆ ಜೊತೆಗೆ ನೆರವು, ಸಹಕಾರ
ಬೆಂಬಲ ಎಲ್ಲರಿಗೂ ನೀಡಿ

ಹೆಚ್.ಐ.ವಿ/ಏಡ್ಸ್ ಸಂಬಂಧಿತ ತಾರತಮ್ಯ ದೂರುಗಳಿದ್ದರೆ
ಕೂಡಲೇ ಸಂಪರ್ಕಿಸಿ
ಇಮೇಲ್: ombudsman.hiv@karnataka.gov.in

ಹೆಚ್‌ಐವಿ ಸೋಂಕು ಹರಡುವ ಬಗ್ಗೆ

ಹೆಚ್.ಐ.ವಿ ಸೋಂಕಿತ ವ್ಯಕ್ತಿಯೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ

ಹೆಚ್.ಐ.ವಿ ಸೋಂಕಿತ ತಾಯಿಯಿಂದ ಮಗುವಿಗೆ ಗರ್ಭಾವಸ್ಥೆಯಲ್ಲಿ, ಹೆರಿಗೆಯಲ್ಲಿ ಅಥವಾ ಎದೆ ಹಾಲು ಉಣಿಸುವ ಮೂಲಕ



ಹೆಚ್.ಐ.ವಿ ಸೋಂಕಿತ ರಕ್ತವನ್ನು ಪರೀಕ್ಷೆ ಮಾಡದೇ ಪಡೆಯುವುದರಿಂದ

ಹೆಚ್.ಐ.ವಿ ಸೋಂಕಿತ ವ್ಯಕ್ತಿಗೆ ಬಳಸಿದ ಸೂಜಿ, ಸಿರಿಂಜು ಸಂಸ್ಕರಿಸದೇ ಬಳಸುವುದರಿಂದ

ಹೆಚ್‌ಐವಿ ಸೋಂಕು ಇವುಗಳಿಂದ ಹರಡುವುದಿಲ್ಲ

ಹೆಚ್.ಐ.ವಿ ಸೋಂಕಿತ ವ್ಯಕ್ತಿಯ ಶೌಚಾಲಯ ಬಳಸುವುದರಿಂದ

ಹೆಚ್.ಐ.ವಿ ಸೋಂಕಿತರ ಜೊತೆಯಲ್ಲಿ ಊಟ ಮಾಡುವುದರಿಂದ

ಹೆಚ್.ಐ.ವಿ ಸೋಂಕಿತ ವ್ಯಕ್ತಿಯ ಬಟ್ಟೆ ಧರಿಸುವುದರಿಂದ ಲೋಟ, ಪಾತ್ರೆ, ಕಪ್ ಉಪಯೋಗಿಸುವುದರಿಂದ



ಸೊಳ್ಳೆ, ಜಿಗಣೆ, ಕ್ರಿಮಿಕೀಟಗಳಿಂದ

ಹೆಚ್.ಐ.ವಿ ಸೋಂಕಿತ ವ್ಯಕ್ತಿಯ ಸ್ನೇಹ ಮಾಡುವುದರಿಂದ

ಪ್ರಚಾರಾಂದೋಲನದ ಉದ್ದೇಶಗಳು

- ಜನಸಾಮಾನ್ಯರಲ್ಲಿ **ಹೆಚ್‌ಐವಿ** ಮತ್ತು **ಎಸ್‌ಟಿಐ** ಸೋಂಕು ಹರಡುವ ಬಗ್ಗೆ ತಿಳುವಳಿಕೆ ಹೆಚ್ಚಿಸುವುದು.
- ಜನಸಾಮಾನ್ಯರಲ್ಲಿ ಸುರಕ್ಷಿತ ಅಭ್ಯಾಸಗಳನ್ನು ಉತ್ತೇಜಿಸಿ ಕಳಂಕ ಕಡಿಮೆ ಮಾಡಿ ಮತ್ತು **ಹೆಚ್‌ಐವಿ** ಮತ್ತು **ಎಸ್‌ಟಿಐ** ಸೇವೆಗಳನ್ನು ಪಡೆಯುವಂತೆ ಪ್ರೇರೇಪಿಸುವುದು.
- ಮದುವೆಗೆ ಮುಂಚೆ ಬ್ರಹ್ಮಚರ್ಯ ಪಾಲನೆ ಹಾಗೂ ಸಂಗಾತಿಯೊಂದಿಗೆ ನಿಷ್ಠೆಯ ಜೀವನ ನಡೆಸುವುದು ಹಾಗೂ ಅಪರಿಚಿತರೊಂದಿಗೆ ಲೈಂಗಿಕ ಸಂಪರ್ಕದಲ್ಲಿ ನಿರೋಧ್ ಬಳಸುವುದು.
- ಒಮ್ಮೆ ನೀವು ಹೆಚ್‌ಐವಿ ಸೋಂಕಿತರೆಂದು ತಿಳಿದ ಕೂಡಲೇ ಕಡ್ಡಾಯವಾಗಿ ಎ.ಆರ್.ಟಿ ಕೇಂದ್ರಕ್ಕೆ ಭೇಟಿ ನೀಡಿ ಉಚಿತ ಚಿಕಿತ್ಸೆ ಪಡೆದು ಭರವಸೆಯನ್ನು ಕಾಪಾಡಿಕೊಳ್ಳುವುದು.
- ಎಲ್ಲಾ ಗರ್ಭಿಣಿಯರು ತಮ್ಮ ಮೊದಲನೇ ತ್ರೈಮಾಸಿಕದಲ್ಲಿ ಹೆಚ್‌ಐವಿ ಹಾಗೂ ಸಿಫಿಲಿಸ್ ಪರೀಕ್ಷೆಗಳನ್ನು ಮಾಡಿಸಿ, ಹುಟ್ಟುವ ಮಗುವನ್ನು ಹೆಚ್‌ಐವಿ ಹಾಗೂ ಸಿಫಿಲಿಸ್ ಸೋಂಕಿನಿಂದ ರಕ್ಷಿಸಬಹುದು.

ಸರಿಯಾದ ಮಾಹಿತಿಗಳನ್ನು ಎಲ್ಲರಿಗೂ ತಿಳಿಸಿ. ಕಳಂಕ, ತಾರತಮ್ಯಗಳನ್ನು ಹೋಗಲಾಡಿಸಿ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು."
ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಹಿತಿ ಮತ್ತು ಸಲಹೆಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ AIDS Helpline 1097 ಕ್ಕೆ ಕರೆ ಮಾಡಿ | Download the NACO AIDS app GET IT ON Google Play | https://kspc.karnataka.gov.in | KarSAPS | ನಿಮ್ಮ ಆರೋಗ್ಯ, ನಮ್ಮ ಬದ್ಧತೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅರಿವು ಕೇಂದ್ರ

ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ

6599 ಹೊಸ ಗ್ರಾಮ ಗ್ರಂಥಾಲಯಗಳ ಘೋಷಣೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಮಾದರಿ ಅರಿವು ಕೇಂದ್ರ ವಿನ್ಯಾಸ ಅನಾವರಣ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಉಪಸ್ಥಿತಿ

ಶ್ರೀ ಪ್ರಿಯಾಂಕ್ ಖರ್ಗೆ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಐ.ಟಿ. ಮತ್ತು ಬಿ.ಟಿ. ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ

ಡಾ. ಸಿ.ಎನ್. ಅಶ್ವತ್ಥ ನಾರಾಯಣ
ಮಾನ್ಯ ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ

ದಿನಾಂಕ: **12-08-2024, ಸೋಮವಾರ**
ಸಮಯ: **ಸಂಜೆ 5:00 ಗಂಟೆ**
ಸ್ಥಳ: **ತ್ರಿಪುರವಾಸಿನಿ, ಗೇಟ್ ನಂ.2, ಅರಮನೆ ಮೈದಾನ, ಬೆಂಗಳೂರು**

ಸರ್ವರಿಗೂ ಆದರದ ಸ್ವಾಗತ

"ಭಾರತೀಯ ಸಂವಿಧಾನವು ಕಾನೂನಿನ ಅಡಿಯಲ್ಲಿ ಎಲ್ಲರಿಗೂ ಸಮಾನತೆ ಮತ್ತು ಸಮಾನ ರಕ್ಷಣೆಯನ್ನು ಪ್ರತಿಪಾದಿಸುತ್ತದೆ."

ಪ್ರಕಟಣೆ: ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1. ತುಂಗಭದ್ರಾ ಅಣೆಕಟ್ಟೆಯ ಕೊಚ್ಚಿ ಹೋದ 19ನೇ ಕ್ರಸ್ಟ್‌ಗೇಟ್ ಇದ್ದ ಸ್ಥಳವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ 2. ಕ್ರಸ್ಟ್‌ಗೇಟ್ ಇಲ್ಲದೆ (19ನೇ ಕ್ರಸ್ಟ್‌ಗೇಟ್ ಇದ್ದ ಸ್ಥಳ) ಜಲಾಶಯದಿಂದ ನದಿಗೆ ರಭಸವಾಗಿ, ಹರಿಯುತ್ತಿರುವ ನೀರು 3. 18ನೇ ಕ್ರಸ್ಟ್‌ಗೇಟ್‌ನ ನೋಟ –ಪ್ರಜಾವಾಣಿ ಚಿತ್ರ/ ಲವ ಕೆ.

ಜಲಾಶಯದಲ್ಲಿ ಹೂಳು ● ಪ್ರತಿ ಬಾರಿಯೂ ವ್ಯರ್ಥವಾಗಿ ಹರಿದುಹೋಗುತ್ತಿದೆ ತುಂಗಭದ್ರಾ ಅಣೆಕಟ್ಟೆಯ ನೀರು

ನವಲಿ ಸಮಾನಾಂತರ ಜಲಾಶಯ ನನೆಗುದಿಗೆ

● ಪ್ರಮೋದ ಕುಲಕರ್ಣಿ

ಕೊಪ್ಪಳ: ತುಂಗಭದ್ರಾ ಜಲಾಶಯದ ನೀರು ವ್ಯರ್ಥವಾಗಿ ಹರಿದು ಹೋಗದಂತೆ ತಡೆಯಲು ಜಿಲ್ಲೆಯ ಕನಕಗಿರಿ ತಾಲ್ಲೂಕಿನ ನವಲಿ ಬಳಿ ನಿರ್ಮಿಸಲು ಉದ್ದೇಶಿಸಲಾಗಿರುವ ಸಮಾನಾಂತರ ಜಲಾಶಯ ನಿರ್ಮಾಣದ ಆಶಯ ದಶಕಗಳೇ ಉರುಳಿದರೂ ಈಡೇರಿಲ್ಲ.

ತುಂಗಭದ್ರಾ ಜಲಾಶಯದಲ್ಲಿ 30 ಟಿಎಂಸಿ ಅಡಿಗಿಂತಲೂ ಹೆಚ್ಚು ಹೂಳು ತುಂಬಿಕೊಂಡಿರುವ ಕಾರಣ ಪರ್ಯಾಯವಾಗಿ ನವಲಿ ಬಳಿ ಹೊಸ ಜಲಾಶಯ ನಿರ್ಮಾಣ ಮಾಡುವುದಾಗಿ ದಶಕದ ಹಿಂದೆ ಆಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಹೇಳಿತ್ತು. ಅನುದಾನ ನೀಡುವುದಾಗಿಯೂ ಘೋಷಿಸಿತ್ತು.

2022ರಲ್ಲಿ ಗೋವಿಂದ ಕಾರಜೋಳ ಜಲಸಂಪನ್ಮೂಲ ಇಲಾಖೆ ಸಚಿವರಾಗಿದ್ದಾಗ ಈ ಯೋಜನೆಗಾಗಿ ₹ 13,040 ಕೋಟಿ ವೆಚ್ಚದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಆದರೆ ಯೋಜನೆ ಮಾತ್ರ ಎರಡೂ ಪಕ್ಷಗಳ ಸರ್ಕಾರಗಳಿಂದ ಕಾರ್ಯರೂಪಕ್ಕೆ ಬಂದಿಲ್ಲ.

ತುಂಗಭದ್ರಾ ಜಲಾಶಯ ಪ್ರಸ್ತುತ ಒಟ್ಟು 105.78 ಟಿಎಂಸಿ ಅಡಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ತುಂಬಿದ ಬಳಿಕ ಪ್ರತಿಬಾರಿಯೂ ವ್ಯರ್ಥವಾಗಿ ನದಿಗೆ ನೀರು ಹರಿದು ಹೋಗುವ ಪ್ರಮಾಣ ಹೆಚ್ಚಾಗುತ್ತಿದೆ. 2022ರಲ್ಲಿ ಜಲಾಶಯದಲ್ಲಿ ಸಂಗ್ರಹವಾದ ಮತ್ತು ಹರಿದು ಹೋದ ನೀರಿನ ಪ್ರಮಾಣವೇ 604.64 ಟಿಎಂಸಿ ಅಡಿ.

> **ನವಲಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆ ನಮ್ಮ ಸರ್ಕಾರ ಬದ್ಧತೆ ಹೊಂದಿದೆ. ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳೊಂದಿಗೆ ಚರ್ಚಿಸಿ ತ್ವರಿತ ಕ್ರಮ ಕೈಗೊಳ್ಳಲಾಗುವುದು**
> **ಡಿ.ಕೆ. ಶಿವಕುಮಾರ್,** ಜಲಸಂಪನ್ಮೂಲ ಖಾತೆ ಸಚಿವ

ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ತುಂಗಭದ್ರಾ ನೀರಿನಲ್ಲಿ ಪಾಲು ಹೊಂದಿರುವುದರಿಂದ ರಾಜ್ಯ ಸರ್ಕಾರ ಉಳಿದ ಎರಡು ರಾಜ್ಯಗಳ ಜೊತೆ ಸಮನ್ವಯ ಸಾಧಿಸಿ ಯೋಜನೆ ಆರಂಭಿಸಬೇಕಾಗಿದೆ. ತುಂಗಭದ್ರಾ ಜಲಾಶಯದಲ್ಲಿ 19ನೇ ಗೇಟ್‌ನ ಚೈನ್ ಲಿಂಕ್ ತುಂಡಾಗಿರುವುದರಿಂದ ಈಗ ನಿತ್ಯ ಲಕ್ಷಾಂತರ ಕ್ಯುಸೆಕ್ ನೀರು ಪೋಲಾಗುತ್ತದೆ. ಒಂದು ವೇಳೆ ಸಮಾನಾಂತರ ಜಲಾಶಯ ನಿರ್ಮಾಣವಾಗಿದ್ದರೆ ಒಂದಷ್ಟು ನೀರನ್ನಾದರೂ ಉಳಿಸಿಕೊಳ್ಳಲು ಅವಕಾಶವಿತ್ತು ಎನ್ನುತ್ತಾರೆ ಇಲ್ಲಿನ ರೈತರು.



ಪ್ರತಿ ಬಾರಿ ನೀರು ವ್ಯರ್ಥವಾಗಿ ಹರಿಯುವಾಗಲೆಲ್ಲ ಸಮಾನಾಂತರ ಜಲಾಶಯದ ಚರ್ಚೆ ಮುನ್ನಲೆಗೆ ಬರುತ್ತದೆ. ದಶಕದ ಹಿಂದಿನ ಯೋಜನೆ ಆರಂಭವಾಗಿದ್ದರೆ ಈ ಭಾಗದಲ್ಲಿ ಮಳೆ ಕೊರತೆಯಿದ್ದಾಗ ಕೃಷಿ ಚಟುವಟಿಕೆಗೆ ನೀರಿನ ತೊಂದರೆ ತಪ್ಪುತ್ತಿತ್ತು. ಈಗಿನ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಕ್ಷೇತ್ರದಲ್ಲಿಯೇ ನವಲಿ ಗ್ರಾಮ ಬರುವುದರಿಂದ 'ಜಲಾಶಯ ಮಾತ್ರ ನಿರ್ಮಿಸಿದರೆ ಮುಳುಗಡೆಯ ಭೀತಿ ಇರುತ್ತದೆ. ಆದ್ದರಿಂದ ಸಣ್ಣ ಪ್ರಮಾಣದ ನೀರಿನ ಸಂಗ್ರಹದ ಮಾದರಿಗಳನ್ನು ನಿರ್ಮಿಸಿದರೆ ಹೆಚ್ಚು ರೈತರಿಗೆ ಅನುಕೂಲವಾಗುತ್ತದೆ' ಎಂದು ಪ್ರತಿಪಾದಿಸುತ್ತಿದ್ದಾರೆ.

'ಯಾವ ರೀತಿಯ ಜಲಾಶಯ ನಿರ್ಮಿಸಬೇಕು ಎನ್ನುವುದರ ಬಗ್ಗೆ ಪರ ಹಾಗೂ ವಿರೋಧದ ಅಭಿಪ್ರಾಯಗಳಿವೆ. ಆದ್ದರಿಂದ ಸರ್ಕಾರ ಈ ನಿಟ್ಟಿನಲ್ಲಿ ತ್ವರಿತವಾಗಿ ಕ್ರಮ ಕೈಗೊಂಡು ವ್ಯರ್ಥವಾಗಿ ಹರಿಯುವ ತುಂಗಭದ್ರಾ ನೀರು ಜಿಲ್ಲೆಯಲ್ಲಿಯೇ ಒಂದಷ್ಟು ಪ್ರಮಾಣದಲ್ಲಿ ಉಳಿಸಿಕೊಳ್ಳಲು ಇರುವ ಅವಕಾಶವನ್ನು ಬಳಸಿಕೊಳ್ಳಬೇಕಿದೆ. ಇದರಿಂದ ರೈತರಿಗೂ ಲಾಭವಾಗುತ್ತದೆ' ಎಂದು ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಉದ್ದಿಹಾಳ್ ಹೇಳುತ್ತಾರೆ.

ಸುದ್ದಿ 2 ನಿಮಿಷ

ಆಂಧ್ರಪ್ರದೇಶ: ಜಾಗರೂಕತೆಗೆ ಸಿ.ಎಂ ನಾಯ್ಡು ಸೂಚನೆ

ಹೈದರಾಬಾದ್: ಕರ್ನಾಟಕದ ಮುನಿರಾಬಾದ್‌ನಲ್ಲಿರುವ ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್‌ವೊಂದು ತುಂಡಾಗಿ ಭಾರಿ ಪ್ರಮಾಣದ ನೀರು ನದಿಗೆ ಹರಿಯುತ್ತಿರುವ ಹಿನ್ನೆಲೆಯಲ್ಲಿ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಅಧಿಕಾರಿಗಳ ಸಭೆ ನಡೆಸಿ, ಪರಿಸ್ಥಿತಿ ಮೇಲೆ ನಿಗಾ ಇರಿಸುವಂತೆ ಭಾನುವಾರ ಸೂಚಿಸಿದ್ದಾರೆ.

ಗೇಟ್ ಅಳವಡಿಕೆ ಕಾರ್ಯದಲ್ಲಿ ತುಂಗಭದ್ರಾ ಅಣೆಕಟ್ಟೆ ಅಧಿಕಾರಿಗಳಿಗೆ ನೆರವಾಗಲು ಎಂಜಿನಿಯರುಗಳ ತಂಡವೊಂದನ್ನು ಅವಘಡ ಸಂಭವಿಸಿದ ಸ್ಥಳಕ್ಕೆ ಕಳುಹಿಸುವಂತೆ ರಾಜ್ಯದ ಜಲಸಂಪನ್ಮೂಲ ಇಲಾಖೆಗೆ ನಾಯ್ಡು ಸೂಚನೆ ನೀಡಿದ್ದಾರೆ.

'ಸ್ಟಾಪ್‌ಲಾಕ್ ಗೇಟ್ ಬಳಸಿ, ತುಂಡಾಗಿರುವ ಗೇಟ್ ಅನ್ನು ತಾತ್ಕಾಲಿಕವಾಗಿ ಮರುಜೋಡಣೆ ಮಾಡಬಹುದು' ಎಂದು ಸರ್ಕಾರದ ವಿಶೇಷ ಮುಖ್ಯ ಕಾರ್ಯದರ್ಶಿ ಜಿ.ಸಾಯಿ ಪ್ರಸಾದ್ ಸಭೆಗೆ ಮಾಹಿತಿ ನೀಡಿದರು.

ನದಿಗೆ ಹೆಚ್ಚುವರಿಯಾಗಿ ನೀರು ಹರಿಯುತ್ತಿರುವ ಕಾರಣ, ಸಂಭಾವ್ಯ ಪರಿಸ್ಥಿತಿ ಎದುರಿಸಲು ಸಜ್ಜಾಗಿರುವಂತೆ ಶ್ರೀಶೈಲಂ, ನಾಗರಾರ್ಜುನ ಸಾಗರ ಹಾಗೂ ಪುಲಿಚಿಂತಲ ಯೋಜನೆಗಳ ಎಂಜಿನಿಯರ್‌ಗಳಿಗೆ ಸಚಿವ ನಿಮ್ಮಲ ರಾಮ ನಾಯ್ಡು ಸೂಚಿಸಿದ್ದಾರೆ.

ಎಚ್ಚರಿಕೆ: ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್‌ವೊಂದು ತುಂಡಾಗಿ, ಅಪಾರ ಪ್ರಮಾಣದ ನೀರು ನದಿಗೆ ಹರಿಯುತ್ತಿರುವುದರಿಂದ ಕರ್ನೂಲು ಜಿಲ್ಲೆಯಲ್ಲಿ ನದಿಪಾತ್ರದ ಜನರು ಜಾಗರೂಕರಾಗಿರುವಂತೆ ಆಂಧ್ರಪ್ರದೇಶ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಚ್ಚರಿಕೆ ನೀಡಿದೆ.

ಕಬಿನಿ ಅಣೆಕಟ್ಟೆಗೂ ತಪ್ಪದ ಆತಂಕ

ಮೈಸೂರು: ಎಚ್‌.ಡಿ. ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯದ ಬಲದಂಡೆ ನಾಲೆಗೆ ನೀರು ಹರಿಸುವ ಗೇಟ್ ಬಳಿ ಬಹುದಿನದಿಂದಲೂ ಸೋರಿಕೆ ಆಗುತ್ತಿದ್ದು, ಇಲ್ಲಿಯೂ ಆತಂಕ ಎದುರಾಗಿದೆ.

ನಾಲೆ ಗೇಟ್ ಬಳಿ ಮಾರುತಿ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನೀರು ಹರಿದು ಹೋಗುವ ಜಾಗದಲ್ಲಿ ಸೋರಿಕೆ ಆಗುತ್ತಿದೆ. ಮೂರ್ನಾಲ್ಕು ವರ್ಷದಿಂದಲೂ ಈ ಸಮಸ್ಯೆ ಇದೆ.

ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಕಬಿನಿ ಮತ್ತು ವರುಣ ನಾಲಾ ವೃತ್ತದ ಅಧಿಕಾರಿಗಳು, 'ಜಲಾಶಯದ ಮುಖ್ಯ ಭಾಗದಲ್ಲಿ ಯಾವುದೇ ಸೋರಿಕೆ ಇಲ್ಲ. ಬಲದಂಡೆ ನಾಲೆಯ ಸ್ಲೂಯಿಸ್ ವಾಲ್‌ಗಳಲ್ಲಿ ಹಲವು ವರ್ಷಗಳಿಂದ ಸೋರಿಕೆ ಉಂಟಾಗುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯು ಪರಿವೀಕ್ಷಣೆ ನಡೆಸಿ ವರದಿ ನೀಡಿದೆ. ಈ ಸೋರಿಕೆಯಿಂದ ಜಲಾಶಯದ ಸುರಕ್ಷತೆಗೆ ಯಾವುದೇ ಅಪಾಯವಿಲ್ಲ' ಎಂದು ಹೇಳಿದ್ದಾರೆ.

'ತಜ್ಞರ ಸಮಿತಿಯ ಶಿಫಾರಸಿನಂತೆ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿ ಸೋರಿಕೆಯನ್ನು ನಿಯಮಿತವಾಗಿ ಪರಿವೀಕ್ಷಿಸಲಾಗುತ್ತಿದೆ. ಜಲಾಶಯದಲ್ಲಿನ ನೀರಿನ ಸಂಗ್ರಹ ಮಟ್ಟವು ಕಡಿಮೆಯಾದ ಬಳಿಕ ಮುಂದಿನ ವರ್ಷ ಫೆಬ್ರುವರಿ ಅಥವಾ ಮೇ ತಿಂಗಳಿನಲ್ಲಿ ಕಾಮಗಾರಿಯನ್ನು ನಡೆಸಲಾಗುವುದು' ಎಂದು ತಿಳಿಸಿದ್ದಾರೆ.

ಈ ಬಗ್ಗೆ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಸಹ ಸ್ಪಷ್ಟನೆ ನೀಡಿದ್ದು, 'ಜಲಾಶಯಕ್ಕೆ ಇದರಿಂದ ಯಾವುದೇ ತೊಂದರೆ ಇಲ್ಲ. ಸುರಕ್ಷತೆಗೆ ಬೇಕಾದ ಎಲ್ಲ ಕ್ರಮ ಕೈಗೊಂಡಿದ್ದೇವೆ' ಎಂದಿದ್ದಾರೆ.

ತುಂಗಭದ್ರಾ ಜಲಾಶಯ: ಸಿಎಂ ಭೇಟಿ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಂಗಭದ್ರಾ ಜಲಾಶಯದ 19ನೇ ಗೇಟ್ ತುಂಡಾದ ಘಟನೆ ಕುರಿತಂತೆ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಚರ್ಚೆ ನಡೆಸಿದರು. ಮುಖ್ಯಮಂತ್ರಿ ಜಲಾಶಯಕ್ಕೆ ಮಂಗಳವಾರ (ಆಗಸ್ಟ್ 13) ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ.

ಸಿದ್ದರಾಮಯ್ಯ

ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಜೊತೆಗೆ ಮಾತುಕತೆ ನಡೆಸಿದ ಮುಖ್ಯಮಂತ್ರಿ, ಯಾವುದೇ ಹಾನಿ ಸಂಭವಿಸದಂತೆ ಮುಂಜಾಗ್ರತೆ ವಹಿಸುವಂತೆ ಸೂಚನೆ ನೀಡಿದರು.

ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಜೊತೆಗೂ ಮುಖ್ಯಮಂತ್ರಿ ಚರ್ಚೆ ನಡೆಸಿದರು.

19ನೇ ಕ್ರಸ್ಟ್‌ಗೇಟ್ ನೀರುಪಾಲು...

ಒಂದನೇ ಪುಟದಿಂದ...

ತುಂಗಭದ್ರಾ ಜಲಾಶಯದ ಸಂಗ್ರಹ ಸಾಮರ್ಥ್ಯ 105.78 ಟಿಎಂಸಿ ಅಡಿ. ಶನಿವಾರವಷ್ಟೇ ಜಲಾಶಯ ಭರ್ತಿ ಆಗಿತ್ತು. ಇದೀಗ ಗೇಟ್ ಅಳವಡಿಸಲು ಜಲಾಶಯದ ನೀರನ್ನು 45 ಟಿಎಂಸಿ ಅಡಿಗೆ ಇಳಿಸಬೇಕಾಗಿದೆ. ಒಂದು ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರನ್ನು ನಿರಂತರ ನದಿಗೆ ಹರಿಯಬಿಡುವ ಮೂಲಕ ನಾಲ್ಕೈದು ದಿನದೊಳಗೆ ನೀರಿನ ಮಟ್ಟ ಇಳಿಸಿ ಕ್ರಸ್ಟ್‌ಗೇಟ್ ಅಳವಡಿಸಲು ಸಿದ್ಧತೆ ನಡೆದಿದೆ.

ಜಲಸಂಪನ್ಮೂಲ ಸಚಿವರ ಭೇಟಿ: ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ಮಧ್ಯಾಹ್ನ ಅಣೆಕಟ್ಟೆಗೆ ಭೇಟಿ ನೀಡಿ ಗೇಟ್ ಕೊಚ್ಚಿಹೋದ ಸ್ಥಳ ಪರಿಶೀಲಿಸಿದರು. ಎಲ್ಲ ಸಂಪನ್ಮೂಲ ಬಳಸಿಕೊಂಡು ತಕ್ಷಣ ಗೇಟ್ ಅಳವಡಿಕೆಗೆ ಸಜ್ಜಾಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

'ಜಲಾಶಯ ರಾಜ್ಯದ ಸಂಪತ್ತು. ಇದನ್ನು ಉಳಿಸಬೇಕಿದೆ. ಇದು ತಾಂತ್ರಿಕ ವಿಷಯವಾಗಿದ್ದು, ಮೊದಲು ಗೇಟ್ ಸರಿಪಡಿಸಲಾಗುವುದು. ದುರಂತಕ್ಕೆ ಕಾರಣ ಯಾರು ಎಂದು ಈಗ ಹುಡುಕುತ್ತ ಕುಳಿತುಕೊಳ್ಳದೆ ತಕ್ಷಣ ಗೇಟ್ ಅಳವಡಿಸಿ ರೈತರ ಕಷ್ಟ ಪರಿಹರಿಸುವುದೇ ಸರ್ಕಾರದ ಆದ್ಯತೆ' ಎಂದು ಸ್ಪಷ್ಟಪಡಿಸಿದರು.

'ರಾಜ್ಯದ ವಿಜಯನಗರ, ಕೊಪ್ಪಳ, ಬಳ್ಳಾರಿ, ರಾಯಚೂರು ಜಿಲ್ಲೆಗಳು, ಆಂಧ್ರ ಪ್ರದೇಶ ಹಾಗೂ ತೆಲಂಗಾಣಕ್ಕೆ ಸದ್ಯ ಮೊದಲ ಬೆಳೆಗೆ 25 ಟಿಎಂಸಿ ಅಡಿ ನೀರು ಪೂರೈಕೆಯಾಗಿದೆ. ಇನ್ನೂ 90 ಟಿಎಂಸಿ ಅಡಿ ನೀರು ಒದಗಿಸಬೇಕಾಗಿದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಮಳೆ ಸುರಿದು ಜಲಾಶಯಕ್ಕೆ ನೀರು ಹರಿದು ಬರುವ ನಿರೀಕ್ಷೆ ಹೊಂದಲಾಗಿದೆ' ಎಂದು ಅವರು ತಿಳಿಸಿದರು.

> **ರೈತರಿಗೆ ಒಂದು ಬೆಳೆಗಾದರೂ ನೀರು ಒದಗಿಸಲು ಸರ್ಕಾರ ಸರ್ವ ಪ್ರಯತ್ನ ಮಾಡಲಿದೆ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ/ಜಲಸಂಪನ್ಮೂಲ ಸಚಿವ

> **ಕೆಆರ್‌ಎಸ್ ಅಣೆಕಟ್ಟೆ ವಿಚಾರದಲ್ಲೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಕೆಆರ್‌ಎಸ್ ಡ್ಯಾಂ ಕಟ್ಟುವಾಗ 'ಸ್ಟಾಪ್ ಲಾಕ್ ಗೇಟ್' ಇರಲಿಲ್ಲ. ಈಗ ಅದನ್ನು ಅಳವಡಿಸಬೇಕು**
> **ಎಚ್‌.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

ಭಾನುವಾರ 98 ಸಾವಿರ ಕ್ಯುಸೆಕ್ ನೀರು ನದಿಗೆ ಹರಿಸಿದ್ದು, 35 ಸಾವಿರ ಕ್ಯುಸೆಕ್ ನೀರು 19ನೇ ಗೇಟ್‌ನಿಂದಲೇ ಹರಿದುಹೋಗುತ್ತಿದೆ. ಒಳಹರಿವಿನ ಪ್ರಮಾಣ 28 ಸಾವಿರ ಕ್ಯುಸೆಕ್‌ನಷ್ಟಿದೆ.

ನೀರಾವರಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಸಣ್ಣ ನೀರಾವರಿ ಸಚಿವ ಎನ್‌.ಎಸ್‌. ಬೋಸರಾಜು ರ ಜತೆಗಿದ್ದರು.

12 ಲಕ್ಷ ಎಕರೆಗೆ ನೀರಿನ ಸೆಲೆ; ಒಂದು ಬೆಳೆಗೆ ನೀರಿನ ಭರವಸೆ

ಲಕ್ಷಾಂತರ ರೈತರ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯ ರಾಜ್ಯದ ವಿಜಯನಗರ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ 12 ಲಕ್ಷ ಎಕರೆ ಹಾಗೂ ಆಂಧ್ರ ಪ್ರದೇಶ, ತೆಲಂಗಾಣದ ಸುಮಾರು 5 ಲಕ್ಷ ಎಕರೆಗೆ ನೀರುಣಿಸುತ್ತದೆ.

ಈ ಬಾರಿ ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗಿದ್ದರಿಂದ ಜಲಾಶಯ ಭರ್ತಿಯಾಗಿತ್ತು. ಹೀಗಾಗಿ ಎರಡು ಬೆಳೆಗೆ ನೀರು ಸಿಗುವ ಆಶಾಭಾವದಲ್ಲಿ ರೈತರಿದ್ದರು. ಆದರೆ 19ನೇ ಗೇಟ್ ಕೊಚ್ಚಿ ಹೋಗಿರುವುದರಿಂದ ರೈತರು ಕಂಗಾಲಾಗಿದ್ದು, ಸದ್ಯ ಒಂದು ಬೆಳೆಗೆ ಮಾತ್ರ ನೀರಿನ ಭರವಸೆ ಸಿಕ್ಕಿದೆ.

ಹೊಸಪೇಟೆಯಲ್ಲೇ ಗೇಟ್ ತಯಾರಿ

ಕ್ರಸ್ಟ್ ಗೇಟ್ ಸಿದ್ಧಪಡಿಸುವ ಕೆಲಸವನ್ನು ಹೊಸಪೇಟೆಯ ನಾರಾಯಣ ಎಂಜಿನಿಯರಿಂಗ್ ಹಾಗೂ ಹಿಂದುಸ್ಥಾನ ಕಂಪನಿಗೆ ವಹಿಸಲಾಗಿದ್ದು, ಈಗಾಗಲೇ ವಿನ್ಯಾಸ ನೀಡಲಾಗಿದೆ. ಇವೇ ಕಂಪನಿಗಳು ಈ ಹಿಂದೆಯೂ ಇಲ್ಲಿ ಗೇಟ್ ಅಳವಡಿಸಿದ್ದವು.

'ಅಣೆಕಟ್ಟೆಯ 1ರಿಂದ 16ನೇ ಗೇಟುಗಳನ್ನು ಕೇಂದ್ರೀಯ ಜಲ ಆಯೋಗ (ಸಿಡಬ್ಲ್ಯುಸಿ) ನಿರ್ವಹಣೆ ಮಾಡುತ್ತದೆ. 17ರಿಂದ 33ರವರೆಗಿನ ಜವಾಬ್ದಾರಿ ಕರ್ನಾಟಕ ಸರ್ಕಾರದ್ದಾಗಿದೆ. ಕೇಂದ್ರ ಜಲ ಆಯೋಗದವರು ಕೂಡ ತಂತ್ರಜ್ಞರನ್ನು ಕಳುಹಿಸಿದ್ದಾರೆ. ನಾವು ಕೂಡ ನುರಿತ ತಂತ್ರಜ್ಞರನ್ನು ಕಳುಹಿಸಿದ್ದೇವೆ' ಎಂದು ಶಿವಕುಮಾರ್ ಹೇಳಿದ್ದಾರೆ.

> **ಡಿ.ಕೆ ಶಿವಕುಮಾರ್ ಅವರು ಕಳೆದ ವರ್ಷ ಕಾವೇರಿ ನೀರು ಖಾಲಿ ಮಾಡಿ ಮೈಸೂರು ಭಾಗದ ರೈತರನ್ನು ಬಲಿಪಶು ಮಾಡಿದರು. ಈ ವರ್ಷ ಬೇಜವಾಬ್ದಾರಿ ತೋರಿ ಉತ್ತರ ಕರ್ನಾಟಕದ ಭಾಗದ ರೈತರನ್ನು ಸಂತ್ರಸ್ತರನ್ನಾಗಿ ಮಾಡಿದರು. ಹೀಗಾಗಿ ಅವರು ರಾಜೀನಾಮೆ ನೀಡಬೇಕು**
> **ಕುರುಬೂರು ಶಾಂತಕುಮಾರ್,** ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ

ಹೊಣೆ ನಿಭಾಯಿಸಿಲ್ಲ: 'ಎಂಟು ತಿಂಗಳುಗಳಿಂದ ಅಣೆಕಟ್ಟೆಯ ಮುಖ್ಯ ಎಂಜಿನಿಯರ್ ಹುದ್ದೆ ಖಾಲಿ ಇತ್ತು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಮರ್ಪಕವಾಗಿ ತಮ್ಮ ಹೊಣೆ ನಿಭಾಯಿಸದೆ ಇದ್ದ ಕಾರಣ ಈ ದುರಂತ ಸಂಭವಿಸಿದೆ' ಎಂದು ಸಂಸದ ಇ.ತುಕಾರಾಂ ಆರೋಪಿಸಿದ್ದಾರೆ.

'ರಾಜ್ಯದ ಜಲಾಶಯಗಳ ರಕ್ಷಣೆ ಬಗ್ಗೆ, ರೈತರ ಬೆವರಿನ ಹನಿಯ ಬಗ್ಗೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕಾಳಜಿ ಇಲ್ಲ. ಸರ್ಕಾರದ ನಿರ್ಲಕ್ಷ್ಯದಿಂದಲೇ ಈ ಘಟನೆ ನಡೆದಿದೆ' ಎಂದು ಮಾಜಿ ಸಚಿವ ಹಾಲಪ್ಪ ಆಚಾರ್ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತುಂಗಭದ್ರಾ ಅಣೆಕಟ್ಟೆಗೆ ಮಂಗಳವಾರ ಭೇಟಿ ನೀಡಲಿದ್ದಾರೆ. ಅಂದೇ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯ ಈ ಮೊದಲು ನಿಗದಿ ಆಗಿತ್ತು. ಆ ಕಾರ್ಯಕ್ರಮ ನಡೆಯುವ ಬಗ್ಗೆ ಜಿಲ್ಲಾಡಳಿತ ಅನುಮಾನ ವ್ಯಕ್ತಪಡಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123.85	19,213	41,258
ಹಾರಂಗಿ	2,859	2,856.58	2,355	2,166
ಕಬಿನಿ	2,284.00	2,283.07	4,966	6,350
ಹೇಮಾವತಿ	2,922	2,921.35	9,247	16,475
ಲಿಂಗನಮಕ್ಕಿ	1,819	1,816.65	8,371	7,046
ಸೂಪಾ (ಮೀ)	564	558.49	4,436.4	4,436.10
ಮಾಣಿ	595	588.70	1,889	87
ತುಂಗಭದ್ರಾ	1,633	1,632.60	24,500	98,000
ಮಲಪ್ರಭಾ	2,079.5	2,077	2,194	2,194
ಘಟಪ್ರಭಾ	2175	2,174.93	7,075	4,977
ಭದ್ರಾ	186	180.4	6,827	8,841
ಆಲಮಟ್ಟಿ (ಮೀ)	519.6	519.14	80,160	44,408
ನಾರಾಯಣಪುರ (ಮೀ)	492.25	492.21	20,000	6,000

* ನೆಲಮಟ್ಟದಿಂದ

ಅಣೆಕಟ್ಟೆಯ ಗೇಟ್ ಕೊಚ್ಚಿಹೋಗಿದ್ದಕ್ಕೆ ಆಘಾತ

8 ವರ್ಷಗಳ ಹಿಂದೆ ಟಿಎಸ್‌ಪಿ ಕಂಪನಿ ಮುಚ್ಚಿದ್ದಕ್ಕೆ ಈಗ ಪಶ್ಚಾತ್ತಾಪ

● ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯ ಸಮೀಪದಲ್ಲೇ ಈಗಿನ ಜಿಲ್ಲಾಧಿಕಾರಿ ಕಚೇರಿ ಇದ್ದ ಸ್ಥಳದಲ್ಲಿ ಎಂಟು ವರ್ಷಗಳ ಹಿಂದೆ ಇದ್ದ ಸರ್ಕಾರಿ ಸ್ವಾಮ್ಯದ ತುಂಗಭದ್ರಾ ಸ್ಟೀಲ್ ಪ್ರೊಡಕ್ಟ್ (ಟಿಎಸ್‌ಪಿ) ಮುಚ್ಚದೆ ಹೋಗಿದ್ದರೆ ಕ್ರಸ್ಟ್‌ಗೇಟ್ ದುರಂತ ಸಂಭವಿಸುತ್ತಿರಲಿಲ್ಲವೇ?'

ಇಂಥದ್ದೊಂದು ಅನುಮಾನ ಈಗ ಹೊಸಪೇಟೆಯಾದ್ಯಂತ ಹರಡಿದೆ.

'ಟಿಎಸ್‌ಪಿ 75 ವರ್ಷ ಹೊಸಪೇಟೆಯ ಹೆಸರನ್ನು ದೇಶ, ವಿದೇಶಗಳಲ್ಲಿ ಮೆರೆಸಿತ್ತು. ಭಾರತದ ಬಹುತೇಕ ಅಣೆಕಟ್ಟೆಗಳಿಗೆ ಕ್ರಸ್ಟ್‌ಗೇಟ್‌ಗಳು ಪೂರೈಕೆಯಾಗುತ್ತಿದ್ದುದು ಇಲ್ಲಿಂದಲೇ. ಕಂಪನಿ ಈಗಲೂ ಇದ್ದಿದ್ದರೆ ತುಂಗಭದ್ರಾ ಅಣೆಕಟ್ಟೆಯ ಎಲ್ಲ ಕ್ರಸ್ಟ್‌ಗೇಟ್‌ಗಳ ಮೇಲ್ವಿಚಾರಣೆಯನ್ನು ಕಂಪನಿಯೇ ನೋಡಿಕೊಳ್ಳುತ್ತಿತ್ತು' ಎಂದು ಕಂಪನಿಯ ಮಾಜಿ ನೌಕರ ವೀರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಟಿಎಸ್‌ಪಿ ಕಂಪನಿಯುಲ್ಲಿ ಅತ್ಯಂತ ನುರಿತ ಕ್ರಸ್ಟ್‌ಗೇಟ್ ತಜ್ಞರಿದ್ದರು. ನಿರ್ವಹಣೆ ವಿಚಾರದಲ್ಲೂ ಎತ್ತಿದ ಕೈ ಆಗಿದ್ದರು. ವಿದೇಶಗಳಿಗೂ ಹೋಗಿ ಸೇವೆ ಸಲ್ಲಿಸಿ ಬಂದಿದ್ದ ಉದಾಹರಣೆ ಇದೆ. ಇಂತಹ ಕಂಪನಿ ತುಂಗಭದ್ರಾ ಅಣೆಕಟ್ಟೆಯ ಸೆರಗಲ್ಲೇ ಇದ್ದುದು ಬಹಳಷ್ಟು ಪ್ರಯೋಜನಕಾರಿಯಾಗಿತ್ತು' ಎಂದು ಅವರು ನೆನಪು ಮಾಡಿಕೊಂಡರು.

ಹೊಸಪೇಟೆಯಲ್ಲಿ ಟಿಎಸ್‌ಪಿ ಕಂಪನಿಯ ಆಡಳಿತ ಕಚೇರಿಯಾಗಿದ್ದ ಕಟ್ಟಡ ಈಗ ಜಿಲ್ಲಾಧಿಕಾರಿ ಕಚೇರಿಯಾಗಿದೆ –ಪ್ರಜಾವಾಣಿ ಚಿತ್ರ

ಗೇಟ್ ಮುರಿಯಲು ಕಾರಣ ಏನು?: 'ಸರಿಯಾಗಿ ಗೇಟ್‌ಗಳ ನಿರ್ವಹಣೆ ಮಾಡಿಲ್ಲದಿರುವುದರಿಂದಲೇ ಈ ದುರಂತ ಸಂಭವಿಸಿದೆ. ಅಧಿಕಾರಿಗಳು ಏನೇ ಸಬೂಬು ಹೇಳಿದರೂ ಸದ್ಯ ಅವರ ಹೇಳಿದ್ದನ್ನು ಕೇಳಬೇಕಷ್ಟೆ. ಕ್ರಸ್ಟ್‌ಗೇಟ್ ತಯಾರಿಕಾ ಕಂಪನಿಯಲ್ಲಿ ಕೆಲಸ ಮಾಡಿದ ನಮಗೆ ಅದರ ಹುಳುಕು ಖಂಡಿತ ಅರ್ಥವಾಗುತ್ತದೆ. ಟಿಎಸ್‌ಪಿ ಕಂಪನಿಯ ನಿರ್ವಹಣೆಯಲ್ಲಿದ್ದ ಅಣೆಕಟ್ಟೆಗಳ ಗೇಟ್‌ಗಳಿಗೆ ಏನೂ ಅಪಾಯ ಆಗಿರಲಿಲ್ಲ ಎಂಬುದನ್ನು ಮರೆಯಬಾರದು' ಎಂದು ವೀರಸ್ವಾಮಿ ಹೇಳಿದರು.

ತುಂಗಭದ್ರಾ ಕೃಷಿ ಉಪಕರಣ ಸಹಕಾರ ಸಂಘ (ಟಾಯ್ಸ್) ಈಗಲೂ ಹೊಸಪೇಟೆಯಲ್ಲಿ ಚಾಲ್ತಿಯಲ್ಲಿದ್ದು, ಕ್ರೇನ್, ಗೇಟ್ ನಿರ್ಮಾಣದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಆದರೆ ತುಂಗಭದ್ರಾ ಮಂಡಳಿ ಈ ಸಂಘವನ್ನು ಸಹ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಮೂಲಗಳು ಹೇಳಿವೆ.

'ತುಂಗಭದ್ರಾ ಮಂಡಳಿಗೆ ನಿಕಟವಾದ ಕೆಲವು ಕಂಪನಿಗಳು ಒಳಗಿಂದೊಗೆ ಪಿತೂರಿ ಮಾಡಿಕೊಂಡು ಕೆಲಸವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರಿಂದ ಉತ್ತಮ ಕಂಪನಿಗಳು ಮುಚ್ಚಿದವು. ಕೆಟ್ಟ ಕಂಪನಿಗಳ ನಿರ್ವಹಣೆಯಿಂದ ದುರಂತ ಸಂಭವಿಸುವಂತಾಯಿತು' ಎಂದು ಮೂಲಗಳು ಅಭಿಪ್ರಾಯಪಟ್ಟವೆ.

ಏನು ನಡೆಯುತ್ತಿದೆ ಗೊತ್ತಿಲ್ಲ: 'ರೈತರ ಹಿತ ಕಾಯುವುದೇ ತುಂಗಭದ್ರಾ ಮಂಡಳಿ, ಅಲ್ಲಿನ ಎಂಜಿನಿಯರ್‌ಗಳು, ಕರ್ನಾಟಕ ನೀರಾವರಿ ನಿಗಮದ ಎಂಜಿನಿಯರ್‌ಗಳ ಕೆಲಸವಾಗಬೇಕು. ಅಣೆಕಟ್ಟೆಯ ವಿಚಾರದಲ್ಲಿ ಏನು ನಡೆಯುತ್ತಿದೆ ಎಂಬುದೇ ತಿಳಿಯುತ್ತಿಲ್ಲ. ಬರಗಾಲ ಬಂದರೆ ನೀರಿಗೆ ಗೋಗರೆಯುವ ಪರಿಪಾಟಲು ನಮ್ಮದು, ಈ ಬಾರಿ ಸಮೃದ್ಧ ಮಳೆಯಾದಾಗ ಹೀಗೆ ನೀರು ಪೋಲಾಗುವುದನ್ನು ನೋಡುವ ದುರ್ಗತಿಯೂ ನಮ್ಮದೇ' ಎಂದು ರೈತ ಮುಖಂಡ ಸಣ್ಣಕ್ಕಿ ರುದ್ರಪ್ಪ ಬೇಸರಪಟ್ಟರು.

ಮೂರು ತಿಂಗಳ ಹಿಂದೆ ಟೆಂಡರ್ ಹಂತದಲ್ಲಿಯೇ ಸ್ಥಗಿತಗೊಂಡಿದೆ ದುರಸ್ತಿ ಕಾರ್ಯ

ಭದ್ರಾ; ಎಡದಂಡೆ ಕಾಲುವೆಗೆ ನೀರು ಸೋರಿಕೆ?

● ವೆಂಕಟೇಶ ಜಿ.ಎಚ್

ಶಿವಮೊಗ್ಗ: ಮಧ್ಯ ಕರ್ನಾಟಕದ ಐದಾರು ಜಿಲ್ಲೆಗಳಲ್ಲಿ ಕುಡಿಯುವ ನೀರು ಹಾಗೂ ನೀರಾವರಿಗೆ ಆಸರೆಯಾಗಿರುವ ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ಎಡದಂಡೆ ಕಾಲುವೆಗೆ ನೀರು ಸೋರಿಕೆಯ ದುರಸ್ತಿ ಕಾರ್ಯ 3 ತಿಂಗಳ ಹಿಂದೆ ಟೆಂಡರ್ ಹಂತದಲ್ಲಿಯೇ ಸ್ಥಗಿತಗೊಂಡಿದೆ. ಇದರಿಂದ ನಿತ್ಯ 180 ಕ್ಯುಸೆಕ್‌ನಷ್ಟು ನೀರು ಜಲಾಶಯದಿಂದ ಕಾಲುವೆಗೆ ಸೋರಿಕೆಯಾಗುತ್ತಿದೆ. ಇದು ಭದ್ರಾ ಜಲಾಶಯದ ಸುರಕ್ಷತೆಗೂ ಸವಾಲಾಗಿ ಪರಿಣಮಿಸಿದೆ ಎಂದು ಹೇಳಲಾಗಿದೆ.

ಭದ್ರಾ ಎಡದಂಡೆ ಕಾಲುವೆಯ ವಿಸ್ತಾರ ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಲ್ಲಿ 77 ಕಿ.ಮೀ ದೂರ ಹಾದುಹೋಗಿದೆ. ಕಾಲುವೆಯಲ್ಲಿ ಸಾಮಾನ್ಯವಾಗಿ ಪ್ರತಿ ದಿನ 360 ಕ್ಯುಸೆಕ್ ನೀರು ಹರಿಯುತ್ತದೆ. ಸೋರಿಕೆ ಪ್ರಮಾಣ ಅದರ ಅರ್ಧದಷ್ಟು ಇದೆ.

₹ 6.37 ಕೋಟಿ ವೆಚ್ಚದ ಯೋಜನೆ: ಎಡದಂಡೆ ಕಾಲುವೆಗೆ ನೀರು ಸೋರಿಕೆ ಆಗುತ್ತಿರುವುದು ಕಂಡುಬರುತ್ತಿದ್ದಂತೆಯೇ ದುರಸ್ತಿ ಕಾರ್ಯಕ್ಕೆ ₹ 6.37 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಿದ್ದ ಕರ್ನಾಟಕ ನೀರಾವರಿ ನಿಗಮ (ಕೆಎನ್‌ಎನ್) 2024ರ ಏಪ್ರಿಲ್ 25ರಂದು ಟೆಂಡರ್ ಕರೆದಿತ್ತು. ಆಗ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಚುನಾವಣಾ ಆಯೋಗದಿಂದ ಅನುಮತಿ ಪಡೆದು ಮೇ 1ರಂದು ಟೆಂಡರ್‌ನ ಪತ್ರಿಕಾ ಪ್ರಕಟಣೆ ಕೂಡ ನೀಡಲಾಗಿತ್ತು.

ಮಾಹಿತಿ ಹಕ್ಕು ಕಾರ್ಯಕರ್ತರ ಆಕ್ಷೇಪ: ಹೇಮಾವತಿ ನಾಲೆಗೆ ಜಲಾಶಯದಿಂದ ನೀರು ಸೋರಿಕೆ ತಡೆಗೆ ರೂಪಿಸಿದ್ದ ಯೋಜನಾ ವೆಚ್ಚಕ್ಕಿಂತ ಭದ್ರಾ ಎಡದಂಡೆ ಕಾಲುವೆಯ ದುರಸ್ತಿ ಕಾರ್ಯದ ಟೆಂಡರ್ ಮೊತ್ತ ಹೆಚ್ಚಾಗಿದೆ ಎಂದು ಆರೋಪಿಸಿ, ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕಿನ ಮೂವರು ಮಾಹಿತಿ ಹಕ್ಕು ಕಾರ್ಯಕರ್ತರು ಜಲಸಂಪನ್ಮೂಲ ಇಲಾಖೆಗೆ ದೂರು ಸಲ್ಲಿಸಿದ್ದರು. ಹೀಗಾಗಿ ದುರಸ್ತಿ ಕಾರ್ಯ ತಡೆ ಹಿಡಿದ ಸರ್ಕಾರ, ಯೋಜನಾ ವೆಚ್ಚದ ಪರಿಶೀಲನೆಗೆ ತಜ್ಞರ ನೇತೃತ್ವದ ತಾಂತ್ರಿಕ ಸಮಿತಿ ರಚಿಸಿತ್ತು.

ಪರಿಶೀಲನೆ ನಡೆಸಿದ ತಾಂತ್ರಿಕ ಸಮಿತಿ, ಹೇಮಾವತಿ ನಾಲೆಗೆ ಸೋರಿಕೆಯ ದುರಸ್ತಿಗೂ ಇಲ್ಲಿನ ಕಾಮಗಾರಿಗೂ ತಾಂತ್ರಿಕತೆಯಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಯೋಜನಾ ವೆಚ್ಚದಲ್ಲಿ ಅನಗತ್ಯ ಹೆಚ್ಚಳ ಆಗಿಲ್ಲ ಎಂದು ಕಳೆದ ಜೂನ್‌ನಲ್ಲಿ ವರದಿ ನೀಡಿದೆ. ಆ ವೇಳೆಗೆ ಮಳೆ ಆರಂಭವಾಗಿದ್ದರಿಂದ ಟೆಂಡರ್‌ಗೆ ಒಪ್ಪಿಗೆ ಕೊಡುವ ವಿಚಾರದಲ್ಲಿ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ತಿಳಿದುಬಂದಿದೆ.

ಭದ್ರಾ ಜಲಾಶಯದ ನೋಟ

ಆಳ ಜಲಾಶಯದಲ್ಲಿ ಕೆಲಸ: 1962ರಲ್ಲಿ ಗಾರೆ, ಸುಣ್ಣ ಹಾಗೂ ಕಲ್ಲು ಬಳಸಿ ಭದ್ರಾ ಜಲಾಶಯ ಕಟ್ಟಲಾಗಿದೆ. ಅದರ ನೆಲಮಟ್ಟದಿಂದ 35 ಅಡಿ ಎತ್ತರದಲ್ಲಿ ಕಲ್ಲು ಕಿತ್ತು ಹೋಗಿವೆ. ಅಲ್ಲಿಂದಲೇ ಕಾಲುವೆಗೆ ನೀರು ಸೋರಿಕೆ ಆಗುತ್ತಿದೆ. ಟೆಂಡರ್ ಕರೆದಾಗ ಜಲಾಶಯದಲ್ಲಿ ನೀರಿನ ಒತ್ತಡವೂ ಕಡಿಮೆ ಇತ್ತು. ಈಗ ಜಲಾಶಯದಲ್ಲಿ 150 ಅಡಿ ಆಳದಲ್ಲಿ ನೀರಿನಲ್ಲಿ ಮುಳುಗಿ ಕೆಲಸ ಮಾಡಬೇಕಿದೆ. ಸದ್ಯ ಕಾಲುವೆಗಳಿಗೆ ನೀರು ಹರಿಸುವ ಗೇಟ್‌ಗಳಿಗೆ ಇನ್ನೂ ತೊಂದರೆ ಆಗಿಲ್ಲ ಎಂದು ಮೂಲಗಳು ಹೇಳುತ್ತವೆ.

'ಭದ್ರಾ ಜಲಾಶಯದಿಂದ ಎಡದಂಡೆ ಕಾಲುವೆಗೆ ನೀರಿನ ಸೋರಿಕೆ ಗಮನಕ್ಕೆ ಬಂದಿಲ್ಲ. ಸದ್ಯ ಕಾಲುವೆಗೆ ನೀರು ಹರಿಸಿದ್ದೇವೆ. ಅದು ಹೋಗುತ್ತಿದೆ. ಸೋರಿಕೆ ಆಗುತ್ತಿರುವ ಬಗ್ಗೆ ನಿಮ್ಮ ಬಳಿ (ಪ್ರಜಾವಾಣಿ) ದಾಖಲೆ ಇದ್ದರೆ ಕೊಡಿ' ಎಂದು ಕೆಎನ್‌ಎನ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಭಾವಿ ಕೇಳಿದರು. ದುರಸ್ತಿಗೆ ಟೆಂಡರ್ ಕರೆಯಲಾಗಿತ್ತಲ್ಲ? ಎಂಬ ಪ್ರಶ್ನೆಗೆ, 'ಅದು ನನಗೆ ಗೊತ್ತಿಲ್ಲ' ಎಂದು ಹೇಳಿ ಕರೆ ಕಡಿತಗೊಳಿಸಿದರು.

ನಾಲ್ಕು ದಿನಗಳಲ್ಲಿ ಸ್ಲೂಸ್ ಗೇಟ್ ದುರಸ್ತಿ

ಹೊಸಪೇಟೆಯ ತುಂಗಭದ್ರಾ ಜಲಾಶಯ ತುಂಬಿದ ನಂತರ ಗೇಟ್ ಕಿತ್ತು ಹೋಗಿದ್ದರೆ, ಭದ್ರಾ ಜಲಾಶಯದಲ್ಲಿನ ನದಿಮಟ್ಟದ ಸ್ಲೂಸ್ ಗೇಟ್ ಎರಡು ತಿಂಗಳ ಹಿಂದೆ ಜಲಾಶಯದಲ್ಲಿ ಶೇ 30ರಷ್ಟು ನೀರಿದ್ದಾಗ ಕ್ಯಾಲ್ಸಿನೇಶನ್ ಸಮಸ್ಯೆಯಿಂದ ಕಿತ್ತು ಹೋಗಿತ್ತು. ಇದರಿಂದ ನಾಲ್ಕು ದಿನಗಳಲ್ಲಿ 0.34 ಟಿಎಂಸಿ ಅಡಿ ನೀರು ನದಿಗೆ ಹರಿದಿತ್ತು. ಸಮರೋಪಾದಿಯಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು ಮುಳುಗು ತಜ್ಞರ ನೆರವಿನಿಂದ ನೀರಿನ ಆಳದಲ್ಲಿ ಕಾರ್ಯಾಚರಣೆ ನಡೆಸಿ ಗೇಟ್ ದುರಸ್ತಿ ಮಾಡಿದ್ದರು.

ಭದ್ರಾ ಜಲಾಶಯದ ಸುರಕ್ಷೆಗೆ ಕರ್ನಾಟಕ ನೀರಾವರಿ ನಿಗಮವು ಕೇಂದ್ರೀಯ ಜಲ ಆಯೋಗದ (ಸಿಡಬ್ಲ್ಯುಸಿ) ಅಧೀನದ ಜಲಾಶಯಗಳ ಪುನರುತ್ಥಾನ ಹಾಗೂ ಅಭಿವೃದ್ಧಿ ಯೋಜನೆ (Dam Rehabitaton and Improvement Project–Drip) ಅಡಿ ತಾಂತ್ರಿಕ ಹಾಗೂ ಆರ್ಥಿಕ ನೆರವು ಕೋರಿದೆ. ಇದಕ್ಕಾಗಿ ₹ 100 ಕೋಟಿ ಮೊತ್ತದ ಯೋಜನಾ ವರದಿ ಕೂಡ ಸಿದ್ಧಪಡಿಸಿ ಕಳುಹಿಸಿದೆ.

ತುಂಗಾ ಜಲಾಶಯ: ವೈ ರೋಪ್‌ನಲ್ಲಿ ದೋಷ

ಗಾಜನೂರಿನ ತುಂಗಾ ಜಲಾಶಯದ 22 ಗೇಟ್‌ಗಳ ಪೈಕಿ ಎಂಟನೇ ಸಂಖ್ಯೆಯ ಗೇಟ್‌ನ ವೈ ರೋಪ್‌ನಲ್ಲಿ (ಗೇಟ್ ಎತ್ತುವ ಉಕ್ಕಿನ ಹಗ್ಗ) ಡ್ಯಾಮೇಜ್ ಕಾಣಿಸಿಕೊಂಡಿದೆ. ಹೀಗಾಗಿ ಜಲಾಶಯದ 21 ಗೇಟ್‌ಗಳನ್ನು ಮಾತ್ರ ತೆರೆದು ನದಿಗೆ ನೀರು ಹರಿಸಲಾಗಿದೆ.

'ಗೇಟ್‌ನ ವೈ ರೋಪ್ ದುರಸ್ತಿಗೆ ಈಗಾಗಲೇ ಮೂರು ಬಾರಿ ಟೆಂಡರ್ ಕರೆಯಲಾಗಿದೆ. ಈ ಬಾರಿ ಗುತ್ತಿಗೆದಾರರು ಮುಂದೆ ಬಂದಿದ್ದಾರೆ. ಅದರ ದುರಸ್ತಿ ಕಾರ್ಯ 15ರಿಂದ 20 ದಿನಗಳಲ್ಲಿ ಮುಗಿಸಲಿದ್ದೇವೆ' ಎಂದು ತುಂಗಾ ಜಲಾಶಯ ಯೋಜನಾ ವಿಭಾಗದ ಎಂಜಿನಿಯರ್ ತಿಪ್ಪಾನಾಯ್ಕ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. ಕಾರ್ಗಲ್‌ನ ಲಿಂಗನಮಕ್ಕಿ, ಹೊಸನಗರ ತಾಲ್ಲೂಕಿನ ಮಾಣಿ, ಸಾವೇಹಕ್ಲು, ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಜಲಾಶಯಗಳಲ್ಲಿ ಯಾವುದೇ ಸಮಸ್ಯೆ ಕಂಡುಬಂದಿಲ್ಲ.

ಶಿಕ್ಷಣ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ರಮಣ್ ಕಾಂತ್ ಮುಂಜಾಲ್ ಸ್ಕಾಲರ್‌ಶಿಪ್

ಹೀರೋ ಫಿನ್‌ಕಾರ್ಪ್‌ನಿಂದ ಬೆಂಬಲಿತ ರಮಣ್ ಕಾಂತ್ ಮುಂಜಾಲ್ ಫೌಂಡೇಷನ್‌ನ ಉಪಕ್ರಮವಾಗಿದೆ. ಹಣಕಾಸು-ಸಂಬಂಧಿತ ಕೋರ್ಸ್‌ಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ.

ಅರ್ಹತೆ: ಪ್ರಥಮ ವರ್ಷದ ಬಿಬಿಎ, ಬಿಎಫ್‌ಐಎ, ಬಿ.ಕಾಂ. (ಎಚ್, ಇ), ಬಿಎಂಎಸ್, ಐಪಿಎಂ, ಬಿ.ಎ. (ಎಕನಾಮಿಕ್ಸ್). ಬಿಬಿಎಸ್, ಬಿಬಿಐ, ಬಿಎಎಫ್, ಬಿ.ಎಸ್‌ಸಿ (ಸ್ಟಾಟಿಸ್ಟಿಕ್ಸ್) ಅಥವಾ ಯಾವುದೇ ಇತರ ಹಣಕಾಸು-ಸಂಬಂಧಿತ ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳು ನೆರವು ಪಡೆಯಲು ಅರ್ಹರು.

ವಿದ್ಯಾರ್ಥಿ ವೇತನ ಕೈಪಿಡಿ

ಅಭ್ಯರ್ಥಿಗಳು 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 80ರಷ್ಟು ಅಂಕಗಳನ್ನು ಪಡೆದಿರಬೇಕು. ವಾರ್ಷಿಕ ಕುಟುಂಬದ ಆದಾಯ ₹4 ಲಕ್ಷಗಳಿಗಿಂತ ಕಡಿಮೆ ಇರಬೇಕು. ಭಾರತೀಯ ನಾಗರಿಕರಿಗೆ ಮಾತ್ರ ಲಭ್ಯವಿರುತ್ತದೆ.

ಆರ್ಥಿಕ ನೆರವು: ವಾರ್ಷಿಕ ₹ 40,000ರಿಂದ ₹ 5,50,000ದವರೆಗೆ ವಿದ್ಯಾರ್ಥಿವೇತನ ಮೂರು ವರ್ಷಗಳವರೆಗೆ.

ಅರ್ಜಿ ಸಲ್ಲಿಸಲು ಕೊನೆ ದಿನ: 20-08-2024

ಅರ್ಜಿ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/RMKSP4

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ–11 ಭಾರತದ ಋತುಗಳು

ಪೀಠಿಕೆ:– ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಈ ಮಾದರಿಯ ವಾಯುಗುಣದಲ್ಲಿ ಮಾರುತಗಳು ವರ್ಷದ ವಿವಿಧ ಋತುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಿಂದ ಬೀಸುತ್ತವೆ. ವರ್ಷದ ಅರ್ಧಭಾಗ ನೈಋತ್ಯ ದಿಕ್ಕಿನಿಂದ ಈಶಾನ್ಯದ ಕಡೆಗೆ ಬೀಸುವ ಕಡೆಗೆ ಬೀಸುವ ಮಾನ್ಸೂನ್ ಮಾರುತಗಳು ಉಳಿದ ಅವಧಿಯಲ್ಲಿ ಈಶಾನ್ಯದಿಂದ ನೈಋತ್ಯದ ಕಡೆಗೆ ಬೀಸುತ್ತವೆ. ಜೊತೆಗೆ ಭಾರತವು ಭೌಗೋಳಿಕವಾಗಿ ಉಷ್ಣವಲಯದ ಹಾಗೂ ಸಮಶೀತೋಷ್ಣ ವಲಯಗಳೆರಡರಲ್ಲಿಯೂ ಹಂಚಿಕೆಯಾಗಿದೆ. ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಸಾಗರಗಳಿಂದ ಇರುವ ದೂರ, ಮಾರುತಗಳ ದಿಕ್ಕು, ಪರ್ವತ ಸರಣಿಗಳು ಹಬ್ಬಿರುವ ರೀತಿ, ಸಾಗರ ಪ್ರವಾಹಗಳು ಮುಂತಾದವು ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ.

ಪ್ರಶ್ನೋತ್ತರ

1) ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ಎಷ್ಟು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ.?

ಉತ್ತರ:– ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣವನ್ನು ನಾಲ್ಕು ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ

1) **ಬೇಸಿಗೆ ಕಾಲ:** ಮಾರ್ಚ್ ನಿಂದ–ಮೇ ವರೆಗೆ
2) **ನೈಋತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಮಳೆಗಾಲ:** ಜೂನ್‌ನಿಂದ – ಸೆಪ್ಟಂಬರ್‌ವರೆಗೆ
3) **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ:** ಅಕ್ಟೋಬರ್‌ನಿಂದ – ನವಂಬರ್‌ವರೆಗೆ
4) **ಚಳಿಗಾಲ:** ಡಿಸೆಂಬರ್‌ನಿಂದ – ಫೆಬ್ರವರಿವರೆಗೆ

2) ಭಾರತದಲ್ಲಿ ಬೇಸಿಗೆ ಕಾಲ ಯಾವಾಗ ಆರಂಭವಾಗುತ್ತದೆ?

ಉತ್ತರ:– ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ.

3) ಭಾರತದಲ್ಲಿ ಎಲ್ಲಿ ಅತಿಹೆಚ್ಚು ಉಷ್ಣಾಂಶ ದಾಖಲಾಗುತ್ತದೆ?

ಉತ್ತರ: ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶ ದಾಖಲಾಗುತ್ತದೆ. ಇದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ

4) ದಕ್ಷಿಣ ಭಾರತವು ಬೇಸಿಗೆಯಲ್ಲಿ ಸಾಧಾರಣ ಉಷ್ಣಾಂಶವನ್ನು ಹೊಂದಿದೆ ಯಾಕೆ?

ಉತ್ತರ:– ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿರುವ ಕಾರಣ ಉಷ್ಣಾಂಶ ಸಾಧಾರಣವಾಗಿರುತ್ತದೆ

5) ಭಾರತದಲ್ಲಿ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಯಾಕೆ? ಯಾವ ಯಾವ ಪ್ರದೇಶದಲ್ಲಿ ಈ ಮಳೆಯನ್ನು ಯಾವ ಯಾವ ಹೆಸರಿನಲ್ಲಿ ಕರೆಯುತ್ತಾರೆ?

ಉತ್ತರ:– ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನ ಹೊಯ್ಲು' ಎಂದು ಕರೆಯುತ್ತಾರೆ.

6) ಭಾರತದ ·ಬೇಸಿಗೆ ಕಾಲದ ಬಗ್ಗೆ ವಿಸ್ತಾರವಾಗಿ ಬರೆಯಿರಿ

ಉತ್ತರ: ಭಾರತದಲ್ಲಿ ಬೇಸಿಗೆ ಕಾಲವು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ.

ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶವನ್ನು ದಾಖಲಿಸಿದ್ದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ. ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿದ್ದು ಇದರ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ. ಅದು ಕೇವಲ 32^0 ಸೆ ದಿಂದ 35^0 ಸೆ. ಗಳಷ್ಟು ಕಂಡುಬರುತ್ತದೆ. ಈ ಅವಧಿಯಲ್ಲಿ ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು ಸಾಕಷ್ಟು ತಂಪಾಗಿರುತ್ತವೆ. ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನಹೊಯ್ಲು' ಎಂದು ಕರೆಯುತ್ತಾರೆ.

ಬೇಸಿಗೆಯಲ್ಲಿ ದೇಶವು ವಾರ್ಷಿಕ ಮಳೆಯ ಶೇ. 10ರಷ್ಟನ್ನು ಮಾತ್ರ ಪಡೆಯುತ್ತದೆ

7) ಭಾರತದಲ್ಲಿ ಬಹುತೇಕ ಮಳೆಯು ಯಾವ ಮಾರುತಗಳಿಂದ ಉಂಟಾಗುತ್ತದೆ?

ಉತ್ತರ:– ನೈಋತ್ಯ ಮಾನ್ಸೂನ್ ಮಾರುತಗಳಿಂದ

8) ನೈಋತ್ಯ ಮಾನ್ಸೂನ್ ಮಾರುತಗಳಿಂದ ಭಾರತದ ಒಟ್ಟು ಮಳೆಯಲ್ಲಿ ಶೇಕಡ ಎಷ್ಟು ಬಿಳುತ್ತದೆ?

ಉತ್ತರ:– ಶೇ. 75

9) ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳನ್ನು ತಿಳಿಸಿ

ಉತ್ತರ:– ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳೆಂದರೆ:– ಪಶ್ಚಿಮ ಘಟ್ಟ ಪ್ರದೇಶಗಳಾದ ಕರಾವಳಿ ಕರ್ನಾಟಕ, ಮಹಾರಾಷ್ಟ್ರ, ಕೇರಳ ಹಾಗೂ ಈಶಾನ್ಯ ಭಾರತದ ಪ್ರದೇಶದಲ್ಲಿ ಬರುವ ಆಸ್ಸಾಂ, ಮೇಘಾಲಯ

10) ಮಳೆಗಾಲ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ನೈಋತ್ಯ ಮಾನ್ಸೂನ್ ಎಂದರೆ ಮಳೆಗಾಲವೆಂದರ್ಥ. ಇವುಗಳನ್ನು ಮುಂಗಾರು ಮಳೆಗಾಲದ ಮಾರುತಗಳೆಂದು ಕರೆಯುತ್ತಾರೆ. ಇವು ಜಲಾಂಶಪೂರಿತ ಮಾರುತಗಳಾಗಿದ್ದು ಭಾರತದ ಹೆಚ್ಚು ಭಾಗದಲ್ಲಿ ಮಳೆ ಸುರಿಸುತ್ತವೆ. ಇದು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಕಂಡುಬರುವುದು

ಭಾರತದ ಒಟ್ಟು ಮಳೆಯಲ್ಲಿ ಶೇ. 75ರಷ್ಟು ಈ ಕಾಲದಲ್ಲಿ ಬೀಳುವುದು. ನೈಋತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ ಅವುಗಳೆಂದರೆ ಅರಬ್ಬಿ ಸಮುದ್ರ ಶಾಖೆ ಹಾಗೂ ಬಂಗಾಳಕೊಲ್ಲಿಯ ಶಾಖೆ. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಮಳೆಯ ನೆರಳಿನ ಪ್ರದೇಶವೆನಿಸಿದೆ. ಬಂಗಾಳಕೊಲ್ಲಿಯ ಶಾಖೆಯು ಮಯನ್ಮಾರ್ (ಬರ್ಮಾ) ಬಾಂಗ್ಲಾದೇಶ, ಭಾರತದ ಈಶಾನ್ಯ ಭಾಗ, ಹಿಮಾಲಯದ ತಪ್ಪಲು ಮತ್ತು ಉತ್ತರದ ಮೈದಾನಗಳ ಕಡೆಗೆ ಮಳೆಯನ್ನು ತರುತ್ತದೆ. ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲಾ ಮಳೆ ಕಡಿಮೆಯಾಗುತ್ತದೆ. ತಮಿಳುನಾಡು ಹೊರತುಪಡಿಸಿ ಭಾರತದ ಹೆಚ್ಚು ಭಾಗಕ್ಕೆ ನೈಋತ್ಯ ಮಾನ್ಸೂನ್ ಮಾರುತಗಳು ಮಳೆಯನ್ನು ಸುರಿಸುತ್ತದೆ.

11) ಭಾರತದಲ್ಲಿ ಮಾರುತಗಳ ನಿರ್ಗಮನ ಕಾಲ ಬಗ್ಗೆ ವಿವರಿಸಿ

ಉತ್ತರ: ಅಕ್ಟೋಬರ ತಿಂಗಳ ಕೊನೆಯ ಭಾಗದ ಒಳಗಾಗಿ ಭಾರತದ ಉಪಖಂಡದಲ್ಲಿ ಮಳೆ ಸುರಿದ ಪರಿಣಾಮವಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಅಲ್ಲದೆ ಸೂರ್ಯನ ಕಿರಣಗಳು ಕೂಡಾ ಈ ಅವಧಿಯಲ್ಲಿ ದಕ್ಷಿಣಾರ್ಧ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತವೆ. ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶವು ಕಡಿಮೆಯಾಗುತ್ತದೆ. ಪರಿಣಾಮವಾಗಿ ಆ ಪ್ರದೇಶವು ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ. ಅದಕ್ಕಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಂದೆ ಸರಿಯಲು ಪ್ರಾರಂಭ ಮಾಡುತ್ತವೆ. ನಿಧಾನವಾಗಿ ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಇವು ಬೀಸುವುದನ್ನು ನಿಲ್ಲಿಸುತ್ತವೆ. ಇದನ್ನೇ ಮಾನ್ಸೂನ್ ಮಾರುತಗಳ 'ನಿರ್ಗಮನ ಕಾಲ' ಅಥವಾ 'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ' ಎಂದು ಕರೆಯುವರು.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

II PUC: MATHEMATICS

Inverse Trigonometric Functions

35. $\tan^{-1}\left(\frac{1}{4}\right)+\tan^{-1}\frac{2}{9}=\frac{1}{2}\cos^{-1}\left(\frac{3}{5}\right)=\sin^{-1}\left(\frac{1}{\sqrt{5}}\right)$

(.........Contd)

$$\Rightarrow\frac{1-\tan^2\theta}{1+\tan^2\theta}=\frac{3}{5}=5-5\tan^2\theta$$

$$\Rightarrow 3+3\tan^2\theta\Rightarrow 8\tan^2\theta=5-3=2$$

$$\Rightarrow\tan^2\theta=\frac{1}{4}\Rightarrow\tan\theta=\frac{1}{2}\Rightarrow\theta=\tan^{-1}\frac{1}{2}$$

$$\Rightarrow\frac{1}{2}\cos^{-1}\left(\frac{3}{5}\right)=\tan^{-1}\frac{1}{2}$$

Again putting $\sin^{-1}\left(\frac{1}{\sqrt{5}}\right)=\theta$

$$\Rightarrow\sin\theta=\frac{1}{\sqrt{5}}\Rightarrow\tan\theta=\frac{1}{2}\Rightarrow a=\tan^{-1}\frac{1}{2}$$

$$\Rightarrow\sin^{-1}\frac{1}{\sqrt{5}}=\tan^{-1}\frac{1}{2}$$

Thus $\tan^{-1}\left(\frac{1}{4}\right)+\tan^{-1}\frac{2}{9}=\frac{1}{2}\cos^{-1}\frac{3}{5}=\sin^{-1}\frac{1}{\sqrt{5}}$

36. Solve for x:

$$\cos^{-1}\left(\frac{x^2-1}{x^2+1}\right)+\tan^{-1}\left(\frac{2x}{x^2-1}\right)=\frac{2\pi}{3}$$

Soln:–Consider, L.H.S.

$$\cos^{-1}\left(\frac{1-\frac{1}{x^2}}{1+\frac{1}{x^2}}\right)+\tan^{-1}\left(\frac{\frac{2}{x}}{1-\frac{1}{x^2}}\right)$$

Putting $\frac{1}{x}=\tan\theta$

$$\therefore L.H.S=\cos^{-1}\left(\frac{1-\tan^2\theta}{1+\tan^2\theta}\right)+\tan^{-1}\left(\frac{2\tan\theta}{1-\tan^2\theta}\right)$$

$$=\cos^{-1}(\cos 2\theta)+\tan^{-1}(\tan 2\theta)$$

$$=2\theta+2\theta=4\theta$$

$$=4\tan^{-1}\frac{1}{x}=\frac{2\pi}{3}\text{(given)}$$

$$\Rightarrow\tan^{-1}\frac{1}{x}=\frac{2\pi}{12}=\frac{\pi}{6}\Rightarrow\frac{1}{x}$$

$$\Rightarrow\tan\frac{\pi}{6}=\frac{1}{\sqrt{3}}\Rightarrow x=\sqrt{3}$$

37. Solve for x:

$$2\tan^{-1}(\sin x)=\tan^{-1}(2\sec x), x\neq\frac{\pi}{2}$$

Soln:–Consider, L.H.S.$=2\tan^{-1}(\sin x)$

$$=\tan^{-1}(\sin x)+\tan^{-1}(\sin x)$$

$$=\tan^{-1}\left(\frac{2\sin x}{1-\sin^2 x}\right)=\tan^{-1}\left(\frac{2\sin x}{\cos^2 x}\right)$$

$$=\tan^{-1}(2\tan x\sec x)$$

R.H.S $=\tan^{-1}(2\sec x)$

$$\therefore 2\tan x\sec x=2\sec x$$

$$\Rightarrow\frac{\tan x}{\cos x}=\frac{1}{\cos x}\Rightarrow\tan x=1$$

$$\therefore x=\frac{\pi}{4}$$

INTEGRALS

Integration is the opposite of Differentiation.

It is the process of finding an indefinite integral of a given function *f*.

Integrating f (x) means finding F (x) such that

$$\frac{d}{dx}[F(x)]=f(x)$$

Basics

1. What is $\int x^n dx$ equal to?

Ans:- $\int x^n dx=\frac{x^{n+1}}{n+1}+c\ (n\neq 1)$

2. What is $\int\frac{1}{x}dx$ equal to?

Ans:- $\int\frac{1}{x}dx=\log x+c$

3. What is $\int\frac{1}{x^n}dx$ equal to?

Ans:- $\int\frac{1}{x^n}dx=\frac{-1}{(n-1)x^{n-1}}+c\ (n\neq 1)$

4. What is $\int\frac{1}{x^2}dx$ equal to?

Ans:- $\int\frac{1}{x^2}dx=\frac{-1}{x}+c$

5. What is $\int\frac{1}{\sqrt{x}}dx$ equal to?

Ans:- $\int\frac{1}{\sqrt{x}}dx=2\sqrt{x}+c$

6. What is $\int e^x dx$ equal to?

Ans:- $\int e^x dx=e^x+c$

7. What is $\int e^{ax+b}dx$ equal to?

Ans:- $\int e^{ax+b}dx=\frac{1}{a}e^{ax-b}+c$

8. What is $\int a^x dx$ equal to?

(Contd.....)

CMR UNIVERSITY
Private University Estd in Karnataka State by Act No. 45 of 2013
BENGALURU | RECOGNIZED BY UGC

CREATE THE FUTURE

SCHOOL OF ARCHITECTURE
B.Arch.
SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE (Data Science)
• Computer Engg. NEW * • CST NEW *
* With specialization in Artificial Intelligence & Machine Learning, Internet of Things
• IT • ECE
M.Tech. (For Regular and Professionals) • CSE • AI
Ph.D. CSE (AI & ML, Networking and Cloud Computing, Data Analytics, Cyber Security, Data Science and Internet of Things)
• ECE • Mechanical Engineering
SCHOOL OF DESIGN
B.Des.
• Communication Design • Product Design
• Fashion Design • Interior Design
SCHOOL OF LIBERAL STUDIES
(Formerly School of Social Science & Humanities)
B.A. / B.A (Hons) (Major + Minor)
• Psychology • English • Journalism • Economics
• Political Science • History • Sociology
• Media Studies • Travel & Tourism NEW
B.Sc. | Psychology
M.Sc. | Psychology • Clinical • Counselling
• Human Resource Development and Management
Ph.D. | Psychology
SCHOOL OF ECONOMICS & COMMERCE
B.Com. / B.Com. (Hons.)
• General • International Accounting & Finance (ACCA, UK)
• Professional - CA Integrated • Data Science NEW
• Certified Management Accountant (US CMA) NEW
Ph.D. | Economics • Commerce
SCHOOL OF LEGAL STUDIES
B.A., LL.B. (Hons.),
B.B.A., LL.B. (Hons.), LL.B.
LL.M. | Constitutional Law • Commercial Law
• Criminal Law NEW Ph.D. | Law
SCHOOL OF SCIENCE & COMPUTER STUDIES
(Formerly School of Science Studies)
BCA / BCA (Hons) • General • Cloud Computing
• Data Science • Game Development
B.Sc. | Sound Engineering • Visual Effects & Animation
• Information Technology NEW
M.Sc. | Information Technology in Data Science NEW
MCA
Ph.D. | Computer Application
SCHOOL OF MANAGEMENT
BBA / BBA (Hons.)
• General • Digital Marketing • Business Analytics
MBA with Dual Specialisation in • Marketing • HR
• Finance • Business Analytics (IoA, UK) • Digital Marketing
• Supply Chain Management
MBA | Business Analytics & Business Intelligence NEW
Executive MBA | Product Leadership
Ph.D. | Management

SCAN TO UNLOCK A DEDUCTION OF 25% IN APPLICATION FEES

3rd RANK IN INDIA
Emerging Institutes & Placement category
Source: Times All India Engineering Institutes Ranking Survey 2024

PROVIDING OPPORTUNITIES TO GET SCHOLARSHIPS WORTH 12 CRORES
CMRUAT · MERIT · SPORTS · DEFENSE · CET RANK BASED

Accelerated Credit Course Programme (ACCP)
Stay ahead of the competition
APPLY TODAY
to get trained and certified for FREE in niche courses

PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395
MCA (OMBR Campus) - C527 | MCA (Lakeside Campus) - C521
CET codes: B.Tech. - E257 | B.Arch. - A245
We honour JEE, Comedk, and all National-level tests.

CELEBRATING 25 YEARS
CMRIT
CMR INSTITUTE OF TECHNOLOGY, BENGALURU.
ACCREDITED WITH GRADE A++ NAAC
CMR INSTITUTE OF TECHNOLOGY
Permanently affiliated to VTU • Approved by AICTE
Recognised by the Govt. of Karnataka • Accredited by NAAC with A++ grade • NBA Accredited • NIRF Ranked

B.E. CSE • CSE (AI & ML) • AI & DS • AI & ML
CSE (Data Science) • ISE • ECE
MBA | MCA
Ph.D. CSE • ECE • EEE • Mechanical
Civil • Physics • Mathematics
Chemistry • Business Administration
Computer Applications
B.E : CET code - E097
ComedK code - E032
PGCET code : MCA - C420MC
MBA - B151MB
www.cmrit.ac.in
admission@cmrit.ac.in
SCAN FOR DETAILS

+91 93429 00666
admissions@cmr.edu.in
www.cmr.edu.in
Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037

RAJAKARYAPRASAKTHA BHUMAPRASAKTHA LATE SRI B.M SREENIVASAIAH FOUNDER

BMS Educational Trust
BMS ACADEMY
FOR PROFESSIONAL COURSES

LATE SRI B.S NARAYAN DONOR TRUSTEE

CONGRATULATIONS TO OUR STAR ACHIEVERS FROM BMS ACADEMY

Congratulations to
CA Harshitha C
for clearing her CA Final 2024

TOP SCORER IN CA/CS FOUNDATION EXAMS

CA FOUNDATION ACHIEVERS

Dwijesh · Pranamya Ajila · Prerana Suresh · Sandip · Sinchana B Shetty

CSEET ACHIEVERS

Hema M · Jaya Sri K · Likitha C · Sanjana S Dambur · Sheetal Kumari

BMS Academy is proud to have nurtured future leaders in the field of Chartered Accountancy and Company Secretaryship

CHARTERED ACCOUNTANCY Foundation / Inter / Final
COMPANY SECRETARY Foundation / Executive / Professional

BMS ACADEMY FOR PROFESSIONAL COURSES, BMSCE Campus, Bull Temple Road, Basavanagudi, Bengaluru - 560 019
Mob: 90365 10011 / 89717 36008 Email: bmsiasacademy@gmail.com Website: www.bmsacademy.org.in

❦ ಸುಭಾಷಿತ ❦

ಬಾಲ್ಯದಲ್ಲಿ ಕಲಿತದ್ದೇ ಬದುಕಿನಲ್ಲಿ ಉಳಿಯುವುದರಿಂದ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು.

–ಚೆನ್ನವೀರ ಕಣವಿ

ಜಾಮೀನು ತಡೆಯಲು ತನಿಖಾ ಸಂಸ್ಥೆಗಳ ಪ್ರಯತ್ನ: 'ಸುಪ್ರೀಂ' ತರಾಟೆ

ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಬಂಧಿಸಿ 17 ತಿಂಗಳು ಸೆರೆಮನೆಯಲ್ಲಿ ಇರಿಸಿದ್ದವು. ಈ ಎರಡೂ ತನಿಖಾ ಸಂಸ್ಥೆಗಳನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸದೆ, ಜಾಮೀನು ಪಡೆಯುವ ಅವರ ಹಕ್ಕನ್ನು ಕಸಿದುಕೊಳ್ಳಲಾಗಿದೆ ಎಂದೂ ನ್ಯಾಯಾಲಯ ಹೇಳಿದೆ. ಸಿಸೋಡಿಯಾ ಅವರು ಜಾಮೀನಿಗಾಗಿ ಕಂಬ ಸುತ್ತುವಂತೆ ಮಾಡಬಾರದಿತ್ತು; ಜಾಮೀನಿಗಾಗಿ ಅವರು ವಿಚಾರಣಾ ನ್ಯಾಯಾಲಯದಿಂದ ಸುಪ್ರೀಂ ಕೋರ್ಟ್‌ವರೆಗೆ ಅಲೆಯುವಂತೆ ಮಾಡಿ, ಜಾಮೀನು ಪ್ರಕ್ರಿಯೆಯನ್ನೇ ಹಾವು-ಏಣಿ ಆಟ ಮಾಡಲಾಯಿತು; ಜಾಮೀನು ನೀಡದೆ, ಅದೇ ಅವರಿಗೆ ಶಿಕ್ಷೆ ಎಂಬಂತೆ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಹೇಳಿದೆ.

ವಿಚಾರಣೆಯು ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ತನಿಖಾಧಿಕಾರಿಗಳು ಕಳೆದ ವರ್ಷವೇ ನ್ಯಾಯಾಲಯಕ್ಕೆ ಹೇಳಿದ್ದರು. ಆದರೆ, ಅದು ಈಗಲೂ ಆರಂಭವೇ ಆಗಿಲ್ಲ. ನ್ಯಾಯಾಲಯವೇ ಹೇಳಿರುವಂತೆ, ಈ ವರ್ಷವೂ ವಿಚಾರಣೆ ಆರಂಭಗೊಳ್ಳುವ ಕ್ಷೀಣ ಸಾಧ್ಯತೆಯೂ ಇಲ್ಲ; ಏಕೆಂದರೆ ಪ್ರಕರಣದಲ್ಲಿ 493 ಸಾಕ್ಷಿಗಳನ್ನು ಪಟ್ಟಿ ಮಾಡಲಾಗಿದೆ, ಸಾವಿರಕ್ಕೂ ಹೆಚ್ಚು ದಾಖಲೆಗಳಿವೆ, ಅವು ಲಕ್ಷಕ್ಕೂ ಹೆಚ್ಚು ಪುಟಗಳಿವೆ. ಸಿಸೋಡಿಯಾ ಅವರ ಕಾರಣದಿಂದಲೇ ತನಿಖೆ ವಿಳಂಬವಾಗಿದೆ ಎಂಬ ತನಿಖಾ ಸಂಸ್ಥೆಗಳ ಆರೋಪವನ್ನೂ ನ್ಯಾಯಪೀಠವು ತಳ್ಳಿಹಾಕಿದೆ. ಈಗ ನ್ಯಾಯಾಲಯವು ಜಾಮೀನು ನೀಡಲು ಕೊಟ್ಟಿರುವ ಕಾರಣವು ಎಲ್ಗಾರ್ ಪರಿಷತ್ ಪ್ರಕರಣ, ದೆಹಲಿ ಗಲಭೆ ಪ್ರಕರಣಗಳಂತಹ ಇನ್ನೂ ಕೆಲವು ಪ್ರಕರಣಗಳಿಗೆ ಸಂಬಂಧಿಸಿ ಕೂಡ ಪ್ರಸ್ತುತ ಎನಿಸುತ್ತದೆ. ನ್ಯಾಯಾಲಯ ಈಗ ಕೇಳಿರುವ ಪ್ರಶ್ನೆಗಳು ಜಾಮೀನು ಅರ್ಜಿಗಳ ಕುರಿತು ತೀರ್ಮಾನ ಕೈಗೊಳ್ಳುವಾಗ ಹಾಗೂ ತನಿಖಾ ಸಂಸ್ಥೆಗಳ ವರ್ತನೆಯನ್ನು ಅವಲೋಕಿಸುವಾಗ ಕೂಡ ಮಹತ್ವದ್ದಾಗುತ್ತವೆ. ಅಪರಾಧವು ಗಂಭೀರವಾಗಿದೆ ಎಂಬ ಕಾರಣದಿಂದ ವಿಚಾರಣೆ ವಿಳಂಬಗೊಳ್ಳುವಂತೆ ಮಾಡಲಾಗದು ಎಂಬುದನ್ನು ನ್ಯಾಯಾಲಯವು ದೃಢಪಡಿಸಿದೆ. ಜಾಮೀನು ನೀಡಿಕೆಯು ಅತ್ಯಂತ ಬಿಗಿಯಾಗಿರುವ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಮತ್ತು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಅಡಿಯಲ್ಲಿನ ಪ್ರಕರಣಗಳಲ್ಲಿಯೂ ಸ್ವಾತಂತ್ರ್ಯದ ಹಕ್ಕನ್ನು ನಿರಾಕರಿಸಲು ಆಗದು ಎಂಬುದನ್ನೂ ಕೋರ್ಟ್ ಸ್ಪಷ್ಟಪಡಿಸಿದಂತಿದೆ. ಸಿಸೋಡಿಯಾ ಅವರು ಪರಾರಿಯಾಗಿ ತಲೆಮರೆಸಿಕೊಳ್ಳುವ ಸಾಧ್ಯತೆ ಇಲ್ಲ. ಹಾಗೆಯೇ ಅವರು ಸಾಕ್ಷ್ಯ ನಾಶಪಡಿಸಲೂ ಸಾಧ್ಯವಿಲ್ಲ. ಅವರು ತಮ್ಮ ಕಚೇರಿಗೆ ಮತ್ತು ದೆಹಲಿ ವಿಧಾನಸಭಾ ಕಾರ್ಯಾಲಯಕ್ಕೆ ಪ್ರವೇಶಿಸಬಾರದು ಎಂಬ ತನಿಖಾ ಸಂಸ್ಥೆಗಳ ಕೋರಿಕೆಯನ್ನೂ ನ್ಯಾಯಾಲಯವು ತಿರಸ್ಕರಿಸಿದೆ.



ಸಿಸೋಡಿಯಾ ಅವರಿಗೆ ಜಾಮೀನು ನೀಡುವಾಗ ಸುಪ್ರೀಂ ಕೋರ್ಟ್ ಆಡಿರುವ ಮಾತು ಕೆಳ ನ್ಯಾಯಾಲಯಗಳಿಗೆ ಮಾರ್ಗದರ್ಶಕ

ಜಾಮೀನು ನೀಡುವ ಹೊಣೆಯಿಂದ ಕೆಳ ನ್ಯಾಯಾಲಯಗಳು ನುಣುಚಿಕೊಳ್ಳುತ್ತಿವೆ; ಸುಲಭವಾಗಿ ಜಾಮೀನು ನೀಡಬಹುದಾದ ಪ್ರಕರಣಗಳು ಕೂಡ ಸುಪ್ರೀಂ ಕೋರ್ಟ್‌ವರೆಗೆ ಬರುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈಗಿನ ತೀರ್ಪು ಕೆಳ ನ್ಯಾಯಾಲಯಗಳಿಗೆ ಮಾರ್ಗದರ್ಶಕವಾಗಿದೆ. 'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜಾಮೀನು ನಿರಾಕರಿಸಬಹುದು' ಮತ್ತು 'ತನಿಖಾ ಪ್ರಕ್ರಿಯೆಯೇ ದಂಡನೆಯಾಗಿ ಪರಿವರ್ತನೆ ಆಗಬಾರದು' ಎಂಬ ಪರಿಕಲ್ಪನೆಗಳು ಹೊಸವೇನೂ ಅಲ್ಲ. ಆದರೆ, ಈ ಪರಿಕಲ್ಪನೆಗಳು ಪದೇಪದೇ ಉಲ್ಲಂಘನೆ ಆಗುತ್ತಿರುವ ಈಗಿನ ಕಾಲದಲ್ಲಿ ಇದನ್ನು ಪುನರುಚ್ಚರಿಸಬೇಕಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪ್ರಕರಣವೂ ಸೇರಿ ಹಲವು ಪ್ರಕರಣಗಳ ಮೇಲೆ ನ್ಯಾಯಾಲಯದ ಈಗಿನ ಅಭಿಪ್ರಾಯಗಳು ಪರಿಣಾಮ ಬೀರಬಹುದು. ಕೇಜ್ರಿವಾಲ್ ಅವರಿಗೆ ಇ.ಡಿ. ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ಜಾಮೀನು ಸಿಕ್ಕಿದ್ದರೂ ಸಿಬಿಐ ದಾಖಲಿಸಿದ ಪ್ರಕರಣದಲ್ಲಿ ಜಾಮೀನು ಸಿಗದ ಕಾರಣ ಅವರು ಸೆರೆಮನೆಯಲ್ಲಿಯೇ ಉಳಿಯುವಂತಾಗಿದೆ.

ದಿನದ ಟ್ವೀಟ್

ಆನೆ ಮತ್ತು ನಾವು

...ಮಾನವ- ವನ್ಯಜೀವಿ ಸಂಘರ್ಷ, ಅರಣ್ಯ ಅತಿಕ್ರಮಣ, ಹವಾಮಾನ ಬದಲಾವಣೆಗೆ ಸಂಬಂಧಿಸಿದ ವ್ಯತಿರಿಕ್ತ ಪರಿಣಾಮಗಳು ಸೇರಿದಂತೆ ವಿಶ್ವದಾದ್ಯಂತ ಆನೆಗಳು ಹಲವಾರು ಸವಾಲುಗಳನ್ನು ಎದುರಿಸುತ್ತಿವೆ. ಆನೆಗಳು ಬದುಕುಳಿಯುವುದಷ್ಟೇ ಅಲ್ಲ ಏಳಿಗೆಯೂ ಆಗುವಂತೆ ಅವುಗಳಿಗೆ ಸುರಕ್ಷಿತ ಭವಿಷ್ಯವನ್ನು ಕಲ್ಪಿಸಲು ನಾವು ಮುಂದಾಗಬೇಕಿದೆ. #WorldElephantDay

ಸುಪ್ರಿಯಾ ಸಾಹು, ಐಎಎಸ್ ಅಧಿಕಾರಿ

ಕಿಡಿನುಡಿ

ರಾಜಕೀಯ ಪಕ್ಷಗಳು ಅಥವಾ ರಾಜಕಾರಣಿಗಳು ಸೋತರೂ ಪರವಾಗಿಲ್ಲ, ಭಾರತದ ಪ್ರಾತಿನಿಧಿಕ ಸಂಸ್ಥೆಗಳು ಸೋಲಬಾರದು. ಅವು ಸೋತರೆ ಭಾರತ ಸೋತಂತೆ. ಭಾರತ ಸೋತರೆ ನಾವೆಲ್ಲರೂ ವೈಯಕ್ತಿಕವಾಗಿಯೂ ಸೋಲುತ್ತೇವೆ. ಯಾವುದೇ ಕಾರಣಕ್ಕೂ ಸೆಬಿ, ಆರ್‌ಬಿಐ, ಐಆರ್‌ಡಿಎಐ ಸೋಲಬಾರದು. ನಮ್ಮ ನ್ಯಾಯಾಲಯಗಳ ವ್ಯವಸ್ಥೆ ಸುಭದ್ರವಾಗಿರಬೇಕು. ಭಾರತದ ಅವನತಿಗೆ ಕಾಯುತ್ತಿರುವವರು ಒಳಗೂ ಇದ್ದಾರೆ ಹೊರಗೂ ಇದ್ದಾರೆ. ಇದನ್ನು ಮೆಟ್ಟಿ ನಿಂತು ಭಾರತ ಉನ್ನತ ಸ್ಥಾನಕ್ಕೆ ಏರಬೇಕು ಅನ್ನುವುದು ಪ್ರತಿ ಭಾರತೀಯನ ಆಶಯ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

25 ವರ್ಷಗಳ ಹಿಂದೆ

ಗುರುವಾರ, 12-8-1999

• ಮೈತ್ರಿ: ಹೆಗಡೆ ಸಲಹೆಗೆ ಬಿಜೆಪಿ ಸ್ಪಷ್ಟ ನಕಾರ

ನವದೆಹಲಿ, ಆಗಸ್ಟ್ 11- ಶರದ್ ಯಾದವ್ ನೇತೃತ್ವದ ಜನತಾದಳ (ಯು) ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಲೋಕಶಕ್ತಿಯ ನಾಯಕ ರಾಮಕೃಷ್ಣ ಹೆಗಡೆ ಅವರ ಮನವಿಯನ್ನು ಬಿಜೆಪಿ ಇಂದು ಸ್ಪಷ್ಟವಾಗಿ ತಿರಸ್ಕರಿಸಿದ್ದರಿಂದ, ಬಿಜೆಪಿ, ಲೋಕಶಕ್ತಿ ಮತ್ತು ಸಮತಾ ಪಕ್ಷದ ನಡುವಣ ಹೊಂದಾಣಿಕೆಗೆ ತೀವ್ರ ಅಪಾಯ ಎದುರಾಗಿದೆ.

ಜನತಾದಳ (ಯು)ಗೆ ರಾಷ್ಟ್ರೀಯ ಜನತಾಂತ್ರಿಕ ಮೈತ್ರಿಕೂಟಕ್ಕೆ ಪ್ರವೇಶ ನೀಡುವ ಬಗೆಗೆ ಯಾವುದೇ ತೀರ್ಮಾನ ಆಗಿಲ್ಲ ಎಂದು, ರಾಮಕೃಷ್ಣ ಹೆಗಡೆ ಅವರು ತಮ್ಮ ಬಳಿ ಬಂದು ಮಾತುಕತೆ ನಡೆಸಿದ ನಂತರ, ಕುಶಭಾವು ಠಾಕರೆ ಅವರು ತಿಳಿಸಿದ್ದಾರೆ.

• ಭಾರತದ ಹೆಲಿಕಾಪ್ಟರಿನತ್ತ ಪಾಕ್ ಕ್ಷಿಪಣಿ: ತಪ್ಪಿದ ಗುರಿ

ನವದೆಹಲಿ, ಆಗಸ್ಟ್ 11 (ಪಿಟಿಐ)- ಪಾಕ್ ವಿಮಾನವನ್ನು ಭಾರತದ ಮಿಗ್ ವಿಮಾನಗಳು ಹೊಡೆದು ಉರುಳಿಸಿದ ಸ್ಥಳಕ್ಕೆ ಪತ್ರಕರ್ತರನ್ನು ಒಯ್ಯುತ್ತಿದ್ದ ಹೆಲಿಕಾಪ್ಟರಿನತ್ತ ಪಾಕಿಸ್ತಾನವು ಇಂದು ಕ್ಷಿಪಣಿಯೊಂದನ್ನು ಹಾರಿಸಿತು. ಆದರೆ ಕ್ಷಿಪಣಿ ಗುರಿ ತಪ್ಪಿದ್ದು ಯಾರಿಗೂ ಅಪಾಯವಾಗಿಲ್ಲ.

ಭಾರತದ ಅಧಿಕಾರಿಗಳು ಹಾಗೂ ಪತ್ರಕರ್ತರು ನಾಲಿಯಾ ವಾಯುನೆಲೆಯಿಂದ ಮೂರು ಹೆಲಿಕಾಪ್ಟರುಗಳಲ್ಲಿ ಕಚ್‌ನ ಖಾರಿ ಕೊಲ್ಲಿಯತ್ತ ಹೋಗುತ್ತಿದ್ದಾಗ ಪಾಕ್ ಪಡೆಗಳು ಭೂಮಿಯಿಂದ ಆಕಾಶಕ್ಕೆ ಹೊಡೆಯುವ ಕ್ಷಿಪಣಿಯನ್ನು ಹಾರಿಸಿದವು.

ಕ್ಷಿಪಣಿಯು ಹೆಲಿಕಾಪ್ಟರಿನಿಂದ ಕೆಲವು ನೂರು ಮೀಟರ್ ದೂರದಲ್ಲಿ ಹಾರಿಹೋಯಿತು. ಹೆಲಿಕಾಪ್ಟರ್ ಗಡಿಯಿಂದ 4 ಕಿ.ಮೀ. ಒಳಗಿದ್ದಾಗ ಈ ದಾಳಿ ನಡೆಯಿತು.

50 ವರ್ಷಗಳ ಹಿಂದೆ

ಸೋಮವಾರ, 12-8-1974

• ಅಮೆರಿಕದ ಜೊತೆ ಬಾಂಧವ್ಯ ವೃದ್ಧಿ: ರಷ್ಯಾದ ನಿರ್ಧಾರ

ಮಾಸ್ಕೊ, ಆಗಸ್ಟ್ 11- ಅಮೆರಿಕ-ರಷ್ಯಾ ಬಾಂಧವ್ಯವನ್ನು ಮತ್ತಷ್ಟು ಉತ್ತಮಗೊಳಿಸುವ ದೃಢ ಕಾರ್ಯಕ್ರಮವನ್ನು ತಾನು ಮುಂದುವರಿಸಿಕೊಂಡು ಹೋಗುವುದಾಗಿ ಸೋವಿಯತ್ ಯೂನಿಯನ್ ಇಂದು ಮತ್ತೊಮ್ಮೆ ಸಾರಿದೆ.

ಅಮೆರಿಕದಲ್ಲಿ ಅಧ್ಯಕ್ಷರ ಬದಲಾವಣೆ ಸಂದರ್ಭದಲ್ಲಿ 'ಪ್ರಾವ್ಡಾ' ಪತ್ರಿಕೆ ಸಂಪಾದಕೀಯ ಲೇಖನ ಬರೆಯುತ್ತಾ ಸೋವಿಯತ್ ಯೂನಿಯನ್-ಅಮೆರಿಕ ವಿರಸ ನಿವಾರಣೆಗೆ ಕಾರ್ಯಕ್ರಮ ನಿಲ್ಲದಂತೆ ನೋಡಿಕೊಳ್ಳಲಾಗುವುದೆಂದು ತಿಳಿಸಲಾಗಿದೆ.

• ನಗರದಲ್ಲಿ ನಕಲಿ ವಿದೇಶಿ ವ್ವಿಸ್ಕಿ ತಯಾರಿಕೆಯ ಭಾರಿ ತಂಡದ ಪತ್ತೆ

ಬೆಂಗಳೂರು, ಆಗಸ್ಟ್ 11- ನಕಲಿ ವಿದೇಶಿ ವ್ವಿಸ್ಕಿ ತಯಾರಿಕೆಯ ಭಾರಿ ತಂಡವೊಂದನ್ನು ರಾಜ್ಯದ ಸಿ.ಐ.ಡಿ. ಪೊಲೀಸರು ಪತ್ತೆ ಮಾಡಿದ್ದಾರೆ. ಈ ಸಂಬಂಧದಲ್ಲಿ ಮುಂಬೈ, ಕಲ್ಕತ್ತ ನಗರಗಳಿಗೆ ಸೇರಿದ ಇಬ್ಬರು ಹಾಗೂ ನಗರಕ್ಕೆ ಸೇರಿದ ಮೂವರು ಹೀಗೆ ಒಟ್ಟು ಐವರನ್ನು ಬಂಧಿಸಲಾಗಿದೆ. ತಂಡಕ್ಕೆ ಸೇರಿದ ಪ್ರಮುಖ ವ್ಯಕ್ತಿ ಕುವೈತಿಗೆ ಓಡಿಹೋಗಿದ್ದಾನೆಂದು ಹೇಳಲಾಗಿದೆ.

ನಗರದ ದಂಡು ಪ್ರದೇಶದ ಮನೆಯಲ್ಲಿ ನಕಲಿ ವಿದೇಶಿ ವ್ವಿಸ್ಕಿ ತಯಾರಿಕೆಯ ಸಾಮಗ್ರಿಗಳನ್ನು, ನಕಲಿ ವಿದೇಶಿ ವ್ವಿಸ್ಕಿಯ 50 ಸೀಸೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪಕ್ಷಗಳ ಒಳಗೆ ಪ್ರಜಾತಂತ್ರ ಇಲ್ಲದಿದ್ದರೆ ದೇಶದಲ್ಲಿ ನಿಜವಾದ ಪ್ರಜಾತಂತ್ರ ಇರಲು ಸಾಧ್ಯವೇ?

ಬ್ರಿಟನ್ ಚುನಾವಣೆ ಕಲಿಸುವ ಪಾಠ

ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ರಿಷಿ ಸುನಕ್ ಅವರು ಬ್ರಿಟನ್ನಿನ 'ಮಾಜಿ ಪ್ರಧಾನಿ'ಯಾಗಿದ್ದಾರೆ. ಅವರ ಅಧಿಕಾರಾವಧಿಯು ಬಹಳ ಕಿರಿದಾಗಿತ್ತು, ಅದು ಸ್ಫೂರ್ತಿದಾಯಕವೇನೂ ಆಗಿರಲಿಲ್ಲ. ಬ್ರಿಟನ್ನಿನ ಜನ ಕನ್ಸರ್ವೇಟಿವ್ ಪಕ್ಷದ ವಿರುದ್ಧವಾಗಿ ನಿರ್ಣಾಯಕ ತೀರ್ಪು ನೀಡಿದರು. ಈ ಪಕ್ಷವನ್ನು ಸುನಕ್ ಅವರು ಎರಡು ವರ್ಷ ಮುನ್ನಡೆಸಿದ್ದರು. ಸುನಕ್ ಅವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಅರ್ಥ ವ್ಯವಸ್ಥೆಯು ಕುಸಿದಿತ್ತು. ಅವರು ವಿಘಟಿತವಾಗಿದ್ದ ತಮ್ಮ ಪಕ್ಷವನ್ನು ಒಗ್ಗೂಡಿಸಲು ಯತ್ನಿಸಿದರು. ಸುನಕ್ ಅವರಿಗೆ ರಾಜಕೀಯ ಅನುಭವ ಸಾಲದು ಎಂದು ಹಲವರು ಹೇಳಿದ್ದರು.

ಸುನಕ್ ಅವರೇ ವಲಸಿಗರು. ಆದರೆ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಅವರು ವಲಸಿಗರ ವಿಚಾರದಲ್ಲಿ ಸ್ಪಂದನಶೀಲರಾಗಿರಲಿಲ್ಲ. ಅಲ್ಲದೆ, ಸುನಕ್ ನೇತೃತ್ವದ ಸರ್ಕಾರವು ವಲಸಿಗರ ವಿಚಾರದಲ್ಲಿ ರೂಪಿಸಿದ ನೀತಿಗಳು ಅನುಕಂಪರಹಿತವಾಗಿದ್ದವು. ಅವರ ಪಕ್ಷ ಸೋಲುವುದು ನಿರೀಕ್ಷಿತವೇ ಆಗಿತ್ತು.

ಈ ಬರಹದ ಉದ್ದೇಶವು ಸುನಕ್ ಅವರ ಸಾಧನೆಯ ಬಗ್ಗೆ ಅಭಿಪ್ರಾಯ ದಾಖಲಿಸುವುದಲ್ಲ. ಸೋಲು ಕಂಡ ಸುನಕ್ ತೋರಿದ ಘನತೆಯ ನಡೆ ಹಾಗೂ ಜಯಶಾಲಿಯಾದ ಕಿಯರ್ ಸ್ಟಾರ್ಮರ್ ತೋರಿದ ಹೃದಯ ವೈಶಾಲ್ಯದ ಬಗ್ಗೆ ಈ ಬರಹ. ಭಾರತದ ಚುನಾವಣಾ ಕಣದಲ್ಲಿ ಕಾಣುವ ಕೋಮುವಾದಿ, ಅಸಭ್ಯ ಮಾತುಗಳ ಬದಲಿಗೆ, ಬ್ರಿಟನ್ನಿನಲ್ಲಿ ಕಂಡ ಸಭ್ಯವಾದ ಚುನಾವಣಾ ಅಭಿಯಾನದ ಬಗ್ಗೆ ಈ ಬರಹ. ಅಲ್ಲಿನ ಚುನಾವಣಾ ಫಲಿತಾಂಶವು ಬ್ರಿಟನ್ನಿನಲ್ಲಿ ಇಂದು ಕಾಣುವ ಬಹುಸಂಸ್ಕೃತಿಗಳ ಹಾಗೂ ಉಪಾಸನೆಯಲ್ಲಿನ ಬಹುತ್ವದ ವಿಜಯ.

ಅಲ್ಲಿನ ಚುನಾವಣೆಯು ಭಾರತದ ಚುನಾವಣೆಗಳಲ್ಲಿ ಧಾರ್ಮಿಕ, ಜಾತೀಯ, ಜನಾಂಗೀಯ ಮತ್ತು ಪ್ರಾದೇಶಿಕ ನೆಲೆಗಳಲ್ಲಿ ಕಾಣುತ್ತಿರುವ ವಿಭಜನೆಗಳಿಗೆ ತೀರಾ ವಿರುದ್ಧವಾಗಿದೆ. ಭಾರತದಲ್ಲಿನ ವಿಭಜನೆಯು ಸಂಸತ್ತಿಗೆ ಆಯ್ಕೆಯಾಗಿರುವ ಜನಪ್ರತಿನಿಧಿಗಳಲ್ಲಿ, ಕೇಂದ್ರ ಸಂಪುಟದ ರಚನೆಯಲ್ಲಿ ಕಾಣಿಸುತ್ತಿದೆ. ಸಂಪುಟದಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯವೇ ಇಲ್ಲ, ಮಹಿಳೆಯರಿಗೆ ಅವರ ಜನಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಸಂಪುಟದಲ್ಲಿಯಾಗಲಿ, ಸಂಸತ್ತಿನಲ್ಲಾಗಲಿ ಪ್ರಾತಿನಿಧ್ಯ ಇಲ್ಲ. ದೇಶದ ಜನಸಂಖ್ಯೆಯಲ್ಲಿ ಶೇಕಡ 15ರಷ್ಟು ಮುಸ್ಲಿಮರಿದ್ದರೂ, ಪ್ರಮುಖ ಆಡಳಿತಾರೂಢ ಪಕ್ಷದಲ್ಲಿ ಮುಸ್ಲಿಂ ಸಂಸದರೇ ಇಲ್ಲ. ಬಹುತ್ವವು ಭಾರತದ ನಾಗರಿಕತೆಯ ಜೊತೆ ಆಳವಾಗಿ ಬೆಸೆದುಕೊಂಡಿದೆ. ಆದರೆ, ಭಾರತದ ಚುನಾವಣೆಗಳು ಬಹುತ್ವವನ್ನು ಪ್ರತಿನಿಧಿಸುತ್ತಿಲ್ಲ.

ಬ್ರಿಟನ್ನಿನ ಚುನಾವಣೆಯಲ್ಲಿ ಆಯ್ಕೆಯಾದ ಶೇ 13ರಷ್ಟು ಮಂದಿ ಕೃಷ್ಣವರ್ಣೀಯರು, ಏಷ್ಯನ್ ಮೂಲದವರು ಅಥವಾ ಬಿಳಿಯರಲ್ಲದವರು. ಹಿಂದಿನ ಸಂಸತ್ತಿನಲ್ಲಿ ಇವರ ಪ್ರಾತಿನಿಧ್ಯ ಶೇ 10ರಷ್ಟು ಮಾತ್ರ ಇತ್ತು. 29 ಮಂದಿ ಸಂಸದರು ಭಾರತ ಮೂಲದವರು, 15 ಮಂದಿ ಪಾಕಿಸ್ತಾನಿ ಮೂಲದವರು. 12 ಮಂದಿ ಸಿಖ್ಖರು. ಆದರೆ, ಈ ಸಂಖ್ಯೆಗಳನ್ನು ಬ್ರಿಟನ್ನಿನಲ್ಲಿ ಏಷ್ಯನ್ನರ ಪ್ರಮಾಣ ಶೇ 8ರಷ್ಟು, ಕೃಷ್ಣವರ್ಣೀಯರ ಪ್ರಮಾಣ ಶೇ 4ರಷ್ಟು, ಭಾರತೀಯರ ಪ್ರಮಾಣ ಶೇ 3.1ರಷ್ಟು ಹಾಗೂ ಪಾಕಿಸ್ತಾನೀಯರ ಪ್ರಮಾಣ ಶೇ 2.7ರಷ್ಟು ಮಾತ್ರ ಇರುವುದರ ಹಿನ್ನೆಲೆಯಲ್ಲಿ ಗ್ರಹಿಸಬೇಕು. ಅಲ್ಲಿನ ಸಂಪುಟದಲ್ಲಿನ ಪ್ರಾತಿನಿಧ್ಯ ಕೂಡ ಇದೇ ಬಗೆಯಲ್ಲಿದೆ – ಹಿಂದಿನ ಬಾರಿಯೂ, ಈ ಬಾರಿಯೂ. ಅಲ್ಲಿನ ಹಣಕಾಸು ಸಚಿವ, ಗೃಹ ಸಚಿವ, ವಿದೇಶಾಂಗ ವ್ಯವಹಾರಗಳ ಸಚಿವ ಸ್ಥಾನವನ್ನು ಏಷ್ಯನ್, ಕೃಷ್ಣವರ್ಣೀಯ ಹಾಗೂ ಭಿನ್ನ ಉಪಾಸನಾ ಪದ್ಧತಿಗಳನ್ನು ಪಾಲಿಸುವವರಿಗೆ ನೀಡಲಾಗಿದೆ. ಲಂಡನ್ನಿನ ಮೇಯರ್ ಮುಸ್ಲಿಂ. ಅವರು ಪಾಕಿಸ್ತಾನಿ ವಲಸಿಗರೊಬ್ಬರ ಮಗ.

ಸುನಕ್ ಅವರು ಚುನಾವಣೆಯಲ್ಲಿ ಸೋತ ನಂತರ ಮಾಡಿದ ಭಾಷಣದಲ್ಲಿ ಎದ್ದು ಕಂಡಿದ್ದು, ಸರಳತೆ ಹಾಗೂ ಸೋಲಿನ ಹೊಣೆಯನ್ನು ಹೊತ್ತುಕೊಳ್ಳುವ ಗುಣ. ಸೋಲು ಕಂಡಿದ್ದ ತಮ್ಮ ಪಕ್ಷದವರಲ್ಲಿ ಅವರು ಕ್ಷಮೆಯಾಚಿಸಿದರು. 'ನಿಮ್ಮ ತೀರ್ಮಾನ ಮಾತ್ರವೇ ಪರಿಗಣಿತವಾಗುತ್ತದೆ. ನಿಮ್ಮ ಕೋಪ, ನಿರಾಸೆಗೆ ನಾನು ಕಿವಿಗೊಟ್ಟಿದ್ದೇನೆ. ಈ ಫಲಿತಾಂಶದ ನಂತರ ನಾನು ಪಕ್ಷದ ನಾಯಕನ ಸ್ಥಾನದಿಂದ ಕೆಳಗಿಳಿಯುತ್ತಿದ್ದೇನೆ' ಎಂದು ವಿನಮ್ರವಾಗಿ ಅವರು ಜನರನ್ನುದ್ದೇಶಿಸಿ ಹೇಳಿದರು. 'ಸರ್ ಕಿಯರ್ ಸ್ಟಾರ್ಮರ್ ಅವರು ಶೀಘ್ರವೇ ಪ್ರಧಾನಿಯಾಗಲಿದ್ದಾರೆ. ಅವರ ಯಶಸ್ಸು ನಮ್ಮ ಯಶಸ್ಸು ಕೂಡ ಆಗಲಿದೆ' ಎಂಬ ಮಾತನ್ನೂ ಹೇಳಿದರು.

ಆದರೆ ಅವರ ಮಾತುಗಳಲ್ಲಿ ಅತ್ಯಂತ ಪರಿಣಾಮಕಾರಿ ಆಗಿದ್ದುದು ತಮ್ಮ ವಲಸೆಯ ಹಿನ್ನೆಲೆಯನ್ನು ಅವರು ನೆನಪಿಸಿಕೊಂಡ ಬಗೆ. 'ಬ್ರಿಟನ್ ಕುರಿತ ಅತ್ಯಂತ ಗುರುತರವಾದ ಒಂದು ಸಂಗತಿಯೆಂದರೆ, ನನ್ನ ಮುತ್ತಜ್ಜಂದಿರು ಕೈಯಲ್ಲಿ ದೊಡ್ಡದೇನೂ ಇಲ್ಲದೆ ಇಲ್ಲಿಗೆ ಬಂದ ಎರಡು ತಲೆಮಾರುಗಳ ನಂತರ ನಾನು ಪ್ರಧಾನಿಯಾಗಲು ಸಾಧ್ಯವಾಯಿತು. ಅಲ್ಲದೆ, ನನ್ನ ಇಬ್ಬರು ಹೆಣ್ಣುಮಕ್ಕಳು ಡೌನಿಂಗ್ ಸ್ಟ್ರೀಟ್‌ನ ಮೆಟ್ಟಿಲುಗಳ ಮೇಲೆ ದೀಪಾವಳಿಯ ದೀಪ ಹಚ್ಚುವುದನ್ನು ನೋಡಲು ನನ್ನಿಂದ ಸಾಧ್ಯವಾಗಿದೆ... ಸಭ್ಯತೆ ಮತ್ತು ಸಹಿಷ್ಣುತೆ ಯಾವತ್ತಿನಿಂದಲೂ ಬ್ರಿಟಿಷರ ಗುಣವಾಗಿದೆ' ಎಂದರು. ಸುನಕ್ ಅವರು ಘನತೆಯಿಂದಲೇ ಸೋತರು. ಆದರೆ ಅವರು ತಮ್ಮ ಜನರ ಹೃದಯ ಗೆದ್ದರು.

ಸರ್ ಸ್ಟಾರ್ಮರ್ ಅವರು ಸುನಕ್ ಅವರ ಬದ್ಧತೆ ಹಾಗೂ ಶ್ರಮವನ್ನು ಮೆಚ್ಚಿ ಮಾತನಾಡಿದರು. ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಏರಿದ ಏಷ್ಯಾ ಮೂಲದ ಮೊದಲ ವ್ಯಕ್ತಿ ಸುನಕ್ ಎಂದು ಅವರ ಸಾಧನೆಗಳನ್ನು ಗೌರವಿಸಿದರು. ದೇಶದ ಜನರು ಬದಲಾವಣೆಗಾಗಿ ನಿರ್ಣಾಯಕವಾಗಿ ಮತ ಚಲಾಯಿಸಿದ್ದಾರೆ ಎಂದರು. ಬ್ರಿಟನ್ನಿನ ಅರ್ಥ ವ್ಯವಸ್ಥೆಯನ್ನು ಸರಿಪಡಿಸುವ ಹೊಣೆ, ಐರೋಪ್ಯ ಒಕ್ಕೂಟದಿಂದ ಬ್ರಿಟನ್ ದೇಶವನ್ನು ಹೊರತರುವ ಸಂಕೀರ್ಣವಾದ ಬ್ರೆಕ್ಸಿಟ್ ಹೊಣೆ ಸೇರಿದಂತೆ ಹಲವು ಮಹತ್ವದ ಜವಾಬ್ದಾರಿಗಳು ಅವರ ಮೇಲಿವೆ.

ನರೇಂದ್ರ ಮೋದಿ ಅವರು ಸತತ ಮೂರನೆಯ ಬಾರಿಗೆ ಭಾರತದ ಪ್ರಧಾನಿಯಾಗಿ ಆಯ್ಕೆಯಾದರು. ಇದು ಬಹಳ ಗುರುತರ ಸಾಧನೆ. ಆದರೆ ಮೋದಿ ಅವರು ಮುಂದೆ ನಿಂತು ನಡೆಸಿದ ಅವರ ಪಕ್ಷವು ಜನಾದೇಶವನ್ನು ಕಳೆದುಕೊಂಡಿತು. ಜನರು ಅವರ ಪಕ್ಷಕ್ಕೆ ಸರಳ ಬಹುಮತ ನಿರಾಕರಿಸಿದರು. ಹೀಗಾಗಿ ಅದು ಮೈತ್ರಿಪಕ್ಷಗಳನ್ನು ನೆಚ್ಚಿಕೊಳ್ಳಬೇಕಿದೆ. ಕೋಮು ಸೌಹಾರ್ದವನ್ನು ನಿರಂತರವಾಗಿ ಕದಡುತ್ತಿದ್ದ ಆಡಳಿತಾರೂಢ ಪಕ್ಷವು 'ಲಕ್ಷ್ಮಣ ರೇಖೆ'ಯನ್ನು ದಾಟದೆ, ಆ ಪಕ್ಷಕ್ಕೆ ಲಗಾಮು ಹಾಕಬೇಕು ಎಂದು ಜನ ತೀರ್ಮಾನಿಸಿದ್ದರು. ಇಲ್ಲಿ ಮೋದಿ ಅವರಿಗೆ, ಅವರ ಪಕ್ಷಕ್ಕೆ, ರಾಹುಲ್ ಗಾಂಧಿ ಅವರಿಗೆ ಹಾಗೂ 'ಇಂಡಿಯಾ' ಮೈತ್ರಿಕೂಟದ ಪಾಲುದಾರರಿಗೆ ಸ್ಪಷ್ಟವಾದ ಸಂದೇಶವಿದೆ. ಕೋಮು ಧ್ರುವೀಕರಣ ನಿಲ್ಲಿಸಬೇಕು, ಅಭಿವೃದ್ಧಿಯ ಮೇಲೆ ಗಮನ ನೀಡಬೇಕು ಎಂಬುದು ಬಿಜೆಪಿಗೆ ನೀಡಿದ ಸಂದೇಶ.

ಸುನಕ್ ಅವರ ಮಾತುಗಳಲ್ಲಿ 'ಇಂಡಿಯಾ' ನಾಯಕರಿಗೆ ಒಂದು ಸಂದೇಶವಿದೆ. ಪಕ್ಷದ ನಾಯಕನ ಸ್ಥಾನದಿಂದ ಕೆಳಗಿಳಿಯುತ್ತಿರುವುದಾಗಿ ಅವರು ಘೋಷಿಸಿದರು. ಆದರೆ, ಇಲ್ಲಿ ಸೋನಿಯಾ ಗಾಂಧಿ ಅವರು ತೆರೆಯ ಮರೆಯಲ್ಲಿ ಇಂದಿಗೂ ಕಾಂಗ್ರೆಸ್ಸಿನ ರಾಣಿಯಾಗಿ ಮುಂದುವರಿದಿದ್ದಾರೆ, ರಾಹುಲ್ ಅವರು 'ಕುಟುಂಬದ ಪಕ್ಷದ' ಪರಮೋಚ್ಚ ನಾಯಕನಂತೆ ಇದ್ದಾರೆ. 'ಇಂಡಿಯಾ' ಮೈತ್ರಿಕೂಟದ ಎಲ್ಲ ಪ್ರಾದೇಶಿಕ ಪಕ್ಷಗಳೂ ವಂಶಪಾರಂಪರ್ಯ ರಾಜಕಾರಣದಲ್ಲಿವೆ ಅಥವಾ ಸರ್ವಾಧಿಕಾರಿ ಮನಃಸ್ಥಿತಿಯನ್ನು ಹೊಂದಿವೆ. ಅಥವಾ ಇವೆರಡೂ ಗುಣಗಳನ್ನು ಅವು ಹೊಂದಿವೆ. ಪಕ್ಷಗಳ ಒಳಗೆ ಪ್ರಜಾತಂತ್ರ ಇಲ್ಲದಿದ್ದರೆ ದೇಶದಲ್ಲಿ ನಿಜವಾದ ಪ್ರಜಾತಂತ್ರ ಇರಲು ಸಾಧ್ಯವೇ?

ಬಿಜೆಪಿ ಕಂಡ ಸೋಲಿಗೆ ಯಾರೂ ಹೊಣೆ ಹೊತ್ತುಕೊಳ್ಳಲಿಲ್ಲ. ತಪ್ಪುಗಳಿಂದ ಪಾಠ ಕಲಿಯುವ ಭರವಸೆಯೂ ಅವರಿಂದ ಬರಲಿಲ್ಲ. ವಿರೋಧ ಪಕ್ಷಗಳ ಮಾತಿಗೆ ಕಿವಿಗೊಡುವ, ಸಂವಾದಗಳಿಗೆ ಉತ್ತೇಜನ ನೀಡುವ 'ಮೋದಿ ಗ್ಯಾರಂಟಿ' ಬಂದಿದ್ದರೆ ಅದು ಮೋದಿ ಅವರ ಘನತೆಯನ್ನು ಹೆಚ್ಚಿಸುತ್ತಿತ್ತು. ಅದೇ ರೀತಿ, ಮೋದಿ ಅವರನ್ನು ಗುರಿಯಾಗಿಸಿ ಘನತೆಯಿಲ್ಲದ ಮಾತುಗಳನ್ನು ನಿರಂತರವಾಗಿ ಆಡಿದ್ದಕ್ಕೆ ರಾಹುಲ್ ಅವರಿಂದ ಪಶ್ಚಾತ್ತಾಪ, ಇತರರಿಂದ ಕ್ಷಮೆಯಾಚನೆ ಬಂದಿದ್ದರೆ ಒಳ್ಳೆಯದಿತ್ತು. ಹಾಗೆ ಮಾಡಿದ್ದಿದ್ದರೆ ರಾಹುಲ್ ಮುತ್ಸದ್ದಿಯಾಗುತ್ತಿದ್ದರು.

ಚುರುಮುರಿ



ಬಬ್ರುವಾಹನ ವೆಬ್‌ಸರಣಿ

• ಸುಮಂಗಲಾ

'ಏ...ಬಾ ಇಲ್ಲಿ... ಬಬ್ರುವಾಹನ ಕಾಳಗ ಮಸ್ತ್ ನಡದೈತಿ...' ಬೆಕ್ಕಣ್ಣ ವದರಿತು.

'ಬೆಳ್‌ಬೆಳಿಗ್ಗೆ ಬಬ್ರುವಾಹನ ಸಿನಿಮಾ ನೋಡಾಕೆ ನನಗೆ ಟೈಮಿಲ್ಲಲೇ' ನಾನು ಸಿಡುಕಿದೆ.

'ಇದು ರಾಜಕುಮಾರ್ ಸಿನಿಮಾ ಅಲ್ಲ... ಬಂಡೆ ಮತ್ತೆ ಬ್ರದರ್ ನಡುವೆ ನಡೆದಿರೋ ಬಬ್ರುವಾಹನ ಕಾಳಗ! ನಮ್ ಮಲ್ಲೇಶಣ್ಣ ಸಿನಿಮಾ ಸ್ಕ್ರಿಪ್ಟ್ ಥರಾ ಚುರುಮುರಿ ಬರದಾನೆ... ಓದು ಬಾ' ಬೆಕ್ಕಣ್ಣ ಬಲು ಖುಷಿಯಿಂದ ವಿವರಿಸಿತು.

'ಓ... ಹಂಗಾರೆ ಹೊಸಾ ಬಬ್ರುವಾಹನ ಸಿನಿಮಾ ಮಾಡಬೌದು.'

'ಹೌದು... ಸಿನಿಮಾ ಮಾಡಿದ್ರೆ ಡಯಲಾಗ್ ಬರೆಯಾಕೆ ಮಲ್ಲೇಶಣ್ಣಂಗೆ ನಾ ಸಹಾಯ ಮಾಡ್ತೀನಿ. ಕುಮಾರಣ್ಣನ ಡಯಲಾಗ್ ಎಲ್ಲಾ ನಾನೇ ಬರೀತೀನಿ' ಬೆಕ್ಕಣ್ಣ ಮೀಸೆ ತಿರುವಿತು.

'ಒಂದಲ್ಲ... ಮೂರುನಾಕು ವರ್ಷನ್ ಬಬ್ರುವಾಹನ ಸಿನಿಮಾ ಮಾಡಬೇಕಾಗತೈತಿ. ನಿಮ್ ಯತ್ನಾಳ ಅಂಕಲ್ಲು- ಯೆಡ್ಯೂರಜ್ಜಾರಿದ್ದೂನು ಒಂದು ವರ್ಷನ್ ಮಾಡಬೌದು' ಎಂದೆ.

'ಅದೂ ಖರೇ... ಹಂಗೇ ಮೋದಿ ಮಾಮಂದು- ರಾಹುಲಂಕಲ್ಲದು ಕೂಡ ಒಂದು ವರ್ಷನ್ ಮಾಡಬೌದು' ಬೆಕ್ಕಣ್ಣ ವಿಚಾರಮಗ್ನನಾಗಿ ಹೇಳಿತು.

'ಆದರೆ ಈಗೇನಿದ್ರೂ ಓಟಿಟಿವಳಗೆ ವೆಬ್‌ಸೀರೀಸ್ ಕಾಲ. ಬೆಸ್ಟ್ ಅಂದ್ರೆ ನೀನು, ಮಲ್ಲೇಶಣ್ಣ ಕೂಡಿ ಬಬ್ರುವಾಹನ ವೆಬ್‌ಸೀರೀಸ್ ತೆಗೀರಿ. ಒಂದೊಂದು ಎಪಿಸೋಡಿಗೆ ಒಂದೊಂದು ಬಬ್ರುವಾಹನ ಜೋಡಿ, ಫುಲ್ ಹಿಟ್ ಆಗತೈತಿ' ನಾನು ಬೆಕ್ಕಣ್ಣನ ತಲೆಯಲ್ಲಿ ಹುಳ ಬಿಟ್ಟೆ.

'ಅಪರೂಪಕ್ಕೊಮ್ಮೆ ನೀ ಮಸ್ತ್ ಐಡಿಯಾ ಕೊಟ್ಟೀ'.

'ಒಂದು ಎಪಿಸೋಡಿನಾಗೆ ಕೇಂದ್ರ ಮತ್ತೆ ದಕ್ಷಿಣದ ರಾಜ್ಯಗಳೇ ಪಾತ್ರಧಾರಿಗಳಾಗಿ ಬಬ್ರುವಾಹನ ಕಾಳಗ ಮಾಡಬೌದು. ಹತ್ತಾರು ಟಿ.ವಿ. ಚಾನೆಲ್ ನೋಡು, ಎಲ್ಲ ಪಾತ್ರಧಾರಿಗಳ ಡಯಲಾಗ್ ಅಲ್ಲೇ ಸಿಗತೈತಿ' ಎಂದೆ.

'ಬ್ಯಾರೆ ಯಾರರೇ ಈ ಐಡಿಯಾ ಕದಿಯೋಕು ಮೊದಲು ಬಬ್ರುವಾಹನ ವೆಬ್‌ಸೀರೀಸ್ ಟೈಟಲ್ ರೆಜಿಸ್ಟರ್ ಮಾಡಿಸತೀವಿ' ಎಂದ ಬೆಕ್ಕಣ್ಣ ಮಲ್ಲೇಶಣ್ಣನಿಗೆ ಫೋನ್ ಮಾಡಿತು!

ಸಂಗತ

ಯುವಜನ: ಅರಿಯಬೇಕಿದೆ ಮನ

ಯುವಜನ ತಮ್ಮ ಕೌಶಲ ಮತ್ತು ಜ್ಞಾನವನ್ನು ಹೆಚ್ಚಿಸಿಕೊಂಡು, ತಂತ್ರಜ್ಞಾನ ಸೌಲಭ್ಯಗಳನ್ನು ಸಕಾರಾತ್ಮಕವಾಗಿ ಬಳಸುವತ್ತ ಆಲೋಚಿಸಬೇಕು

• ವಾಸುದೇವ ಶರ್ಮಾ ಎನ್.ವಿ.

ಯುವಜನ ಎನ್ನುವುದನ್ನು ಒಂದೊಂದೆಡೆ ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡಲಾಗುತ್ತಿದೆ. ವಿಶ್ವಸಂಸ್ಥೆಯು 15ರಿಂದ 24 ವರ್ಷದೊಳಗಿನವರು ಯುವಜನ ಎಂದು ಹೇಳಿದರೆ, ಭಾರತದ ಯುವಜನ ನೀತಿ-2014ರಂತೆ, ಇದು 15ರಿಂದ 29 ವರ್ಷಗಳ ವ್ಯಾಪ್ತಿಗೆ ಬರುತ್ತದೆ. ಇನ್ನು ಕೆಲವೆಡೆ, 15ರಿಂದ 35 ವರ್ಷದವರೆಗೆ ಎನ್ನುವುದೂ ಉಂಟು. ಯುವಜನರ ವ್ಯಾಪ್ತಿಯು ಎಷ್ಟು ವರ್ಷದಿಂದ ಎಷ್ಟು ವರ್ಷದವರೆಗಾದರೂ ಇರಲಿ, ಜಗತ್ತಿನಾದ್ಯಂತ ನಮ್ಮ ಯುವಜನ ಈಗ ಹೇಗಿದ್ದಾರೆ, ನಾಳೆಗೆ ಹೇಗೆ ತಯಾರಾಗುತ್ತಿದ್ದಾರೆ ಎನ್ನುವುದು ಬಹಳ ಮುಖ್ಯ.

ವಿವಿಧ ದೇಶಗಳನ್ನು ಒಳಗೊಂಡ ಜಾಗತಿಕ ಸಮ್ಮೇಳನದ ಸಲಹೆಯಂತೆ, ಅಂತರರಾಷ್ಟ್ರೀಯ ಯುವಜನ ದಿನವನ್ನು ಆಚರಿಸಲು ವಿಶ್ವಸಂಸ್ಥೆಯ ಮಹಾಸಭೆ ಸಮ್ಮತಿ ನೀಡಿತು. ಅದರಂತೆ, 2000ದ ಆಗಸ್ಟ್ 12ರಂದು ಮೊದಲ ಬಾರಿಗೆ ಯುವಜನ ದಿನವನ್ನು ಆಚರಿಸಲಾಯಿತು. ಈ ವರ್ಷದ ಅಂತರರಾಷ್ಟ್ರೀಯ ಯುವಜನ ದಿನಾಚರಣೆಯ ಘೋಷವಾಕ್ಯ, 'ಕ್ಲಿಕ್‌ಗಳಿಂದ ಪ್ರಗತಿಯತ್ತ: ಸುಸ್ಥಿರ ಅಭಿವೃದ್ಧಿಗಾಗಿ ಯುವಜನರ ಡಿಜಿಟಲ್ ಹೆದ್ದಾರಿ'. ಇದು ಯುವಜನರ ಭವಿಷ್ಯವನ್ನು ರೂಪಿಸುವಲ್ಲಿ ಡಿಜಿಟಲ್ ತಂತ್ರಜ್ಞಾನದ ಸದುಪಯೋಗ ಮತ್ತು ಅದು ವಹಿಸುವ ಮುಖ್ಯವಾದ ಪಾತ್ರದ ಮಹತ್ವವನ್ನು ತಿಳಿಸುತ್ತದೆ.

ಜಗತ್ತಿನಲ್ಲಿ ಈಗ 15ರಿಂದ 24 ವರ್ಷದೊಳಗಿನ 120 ಕೋಟಿ ಯುವಜನರಿದ್ದಾರೆ. ಇದು ಒಟ್ಟು ಜನಸಂಖ್ಯೆಯ ಶೇ 16ರಷ್ಟಾಗಿದ್ದು, ಮಾನವ ಇತಿಹಾಸದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಯುವಜನರಿರುವ ಕಾಲ ಇದು ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ 15ರಿಂದ 24 ವರ್ಷದೊಳಗಿನ 25.5 ಕೋಟಿ ಯುವಜನರಿದ್ದಾರೆ ಎಂದು ಅಂದಾಜಿಸಲಾಗಿದೆ ಅಂದರೆ, ದೇಶದ ಜನಸಂಖ್ಯೆಯಲ್ಲಿ ಯುವಜನರ ಪಾಲು ಶೇ 18.21ರಷ್ಟು.

ಇಷ್ಟೆಲ್ಲಾ ಯುವಜನರು ಇದ್ದಾರೆ, ಭವಿಷ್ಯದಲ್ಲಿ ಇವರು 'ಮಾನವ ಸಂಪನ್ಮೂಲ' ಆಗುತ್ತಾರೆ ಎಂದು ಭಾರತವೂ ಸೇರಿದಂತೆ ಬಹುತೇಕ ಎಲ್ಲ ದೇಶಗಳೂ ಕಾಯುತ್ತಿವೆ. 2030ರೊಳಗೆ ಇಡೀ ಜಗತ್ತು ಸುಸ್ಥಿರ ಅಭಿವೃದ್ಧಿ ಸಾಧಿಸಲು ಹಾಕಿಕೊಂಡಿರುವ ಬಹಳಷ್ಟು ಗುರಿಗಳ ಸಾಧನೆಯಾಗಬೇಕೆಂದರೆ, ಯುವಜನರ ಶಿಕ್ಷಣ, ಕೌಶಲದ ಮಟ್ಟ ಏರಿ, ಅವರ ಆರೋಗ್ಯ, ಕೊಳ್ಳುವ ಶಕ್ತಿ ಮತ್ತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯದ ಮಟ್ಟವೂ ವೃದ್ಧಿಸಲೇಬೇಕು.

ಭವಿಷ್ಯದಲ್ಲಿ ಈ ಗುರಿ ಸಾಧಿಸುವ ದಿಸೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಸಹಕಾರಿ ಎನ್ನಲಾಗುತ್ತದೆ. ಆದರೆ, ಭಾರತದಂತಹ ದೇಶದಲ್ಲಿ ಅಂತರ್ಜಾಲ ಸೌಕರ್ಯ ಅತ್ಯಂತ ಕಡಿಮೆ ಬೆಲೆಗೆ ಸಿಗುತ್ತಿರುವುದರಿಂದ, ಯುವಜನರು ಡಿಜಿಟಲ್ ಸಾಧನಗಳನ್ನು ಮನರಂಜನೆ, ಆಟಕ್ಕೇ ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ಇನ್ನೊಂದಷ್ಟು ಮಂದಿ ಇದನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆಯೂ ಆತಂಕ ವ್ಯಕ್ತವಾಗಿದೆ. ಇವರಲ್ಲಿ ಹೆಚ್ಚಿನವರು ನಿರುದ್ಯೋಗಿಗಳು ಇಲ್ಲವೇ ಅರೆ ಉದ್ಯೋಗಿಗಳು.

ಜಗತ್ತಿನಲ್ಲಿ ಪ್ರಸ್ತುತ 7.1 ಕೋಟಿ ಯುವಜನರು ನಿರುದ್ಯೋಗಿಗಳು ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ ಹೇಳಿದೆ. ಬಾಲ್ಯದಲ್ಲಿ ಇವರಿಗೆ ಸಮರ್ಪಕವಾದ ಶಿಕ್ಷಣ, ಸೂಕ್ತ ವೃತ್ತಿಶಿಕ್ಷಣ, ಕೌಶಲ ತರಬೇತಿ ಸಿಗದಿರುವುದೇ ಇದಕ್ಕೆ ಕಾರಣ. ಕೇಂದ್ರ ಸರ್ಕಾರವು 2014ರ ಯುವಜನ ನೀತಿಯಲ್ಲಿ, ಯುವಜನರನ್ನು 'ಅಭಿವೃದ್ಧಿಯ ಪಾಲುದಾರರು' ಎಂದು ಗುರುತಿಸಿದೆ. ಆದರೆ ಶಾಲಾಕಾಲೇಜುಗಳ ಮೆಟ್ಟಿಲೇರದ, ಕೃಷಿ, ಕೈಗಾರಿಕೆಯೂ ಸೇರಿದಂತೆ ವಿವಿಧ ಕೌಶಲಗಳನ್ನು ಹೊಂದದ ಯುವಜನರು ಅಭಿವೃದ್ಧಿಯ ಪಾಲುದಾರರು ಹೇಗೆ ಆದಾರು? ಬಾಲ್ಯವಿವಾಹ ಮತ್ತು 18 ವರ್ಷಗಳಾಗುವುದಕ್ಕೆ ಮೊದಲೇ ತಾಯಂದಿರಾಗುವುದು, ಲೈಂಗಿಕ ಶೋಷಣೆಗೆ ಸುಲಭವಾಗಿ ಪಕ್ಕಾಗುವ ಬಾಲಕಿಯರನ್ನು ರಕ್ಷಿಸಲು ಸಾಧ್ಯವಾಗದಿದ್ದಲ್ಲಿ ಅವರು ಅಭಿವೃದ್ಧಿಯ ಪಾಲುದಾರರಾಗಲು ಸಾಧ್ಯವೇ ಇಲ್ಲ.

ಅತ್ಯಂತ ಆತಂಕಕಾರಿ ವಿಚಾರವೆಂದರೆ, ಶೇ 7.3ರಷ್ಟು ಹದಿವಯಸ್ಕರು ಮತ್ತು ಶೇ 10.6ರಷ್ಟು ಯುವಜನರು ವಿವಿಧ ಮಟ್ಟದ ಮಾನಸಿಕ ನ್ಯೂನತೆ ಹೊಂದಿದ್ದಾರೆ ಮತ್ತು ನಗರ ಪ್ರದೇಶಗಳಲ್ಲಿ ಈ ಪ್ರಮಾಣ ದುಪ್ಪಟ್ಟು ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಸರ್ವೇಕ್ಷಣೆ 2015- 16 ಹೇಳುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿನಂತೆ, ಪ್ರತಿ ಐವರು ಯುವಜನರಲ್ಲಿ ಒಬ್ಬರಿಗೆ ಮಾನಸಿಕ ಸಮಸ್ಯೆ ಇದೆ.

ಈ ಎಲ್ಲವನ್ನೂ ಎದುರಿಸಿ ಯುವಶಕ್ತಿಯು ಮಾನವ ಸಂಪನ್ಮೂಲವಾಗಿ ಬೆಳೆಯುವುದಕ್ಕೆ ಪೂರಕವಾಗಿ ಯುವಜನರ ಜೊತೆಗೆ ಸರ್ಕಾರ, ನೀತಿ ನಿರೂಪಕರು, ಸಾರ್ವಜನಿಕರು, ಸ್ವಯಂಸೇವಾ ಸಂಸ್ಥೆಗಳು ಮತ್ತು ಖಾಸಗಿ ರಂಗವು ಕೈಜೋಡಿಸಬೇಕು. ಡಿಜಿಟಲ್ ತಂತ್ರಜ್ಞಾನದ ಸದುಪಯೋಗ ಪಡೆದುಕೊಳ್ಳಬೇಕು. ಅದರ ಆರೋಗ್ಯಕರ ಬಳಕೆ ಕುರಿತು ಎಚ್ಚರಿಕೆ ನೀಡುವ ಕೆಲಸ ಆಗಬೇಕು.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಯುವಜನರು ವಹಿಸಬೇಕಾದ ಮಹತ್ವದ ಪಾತ್ರದ ಕುರಿತು ವ್ಯಾಪಕ ಪ್ರಚಾರ ನಡೆಸಬೇಕು. ಯುವಜನರೂ ತಮ್ಮ ಕೌಶಲ ಮತ್ತು ಜ್ಞಾನವನ್ನು ಹೆಚ್ಚಿಸಿಕೊಂಡು, ತಂತ್ರಜ್ಞಾನ ಸೌಲಭ್ಯಗಳನ್ನು ಸಕಾರಾತ್ಮಕವಾಗಿ ಬಳಸುವತ್ತ ಆಲೋಚಿಸಬೇಕು. ಡಿಜಿಟಲ್ ತಂತ್ರಜ್ಞಾನವು ಸ್ವಯಂ ಹಾನಿಕರ ಆಗದಂತೆ ಮತ್ತು ಇತರರ ಶೋಷಣೆಗೆ ಬಳಕೆಯಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಗ್ರಾಮೀಣ ಮತ್ತು ನಗರ ಜೀವನದಲ್ಲಿ ಸುಸ್ಥಿರತೆ ಸಾಧಿಸಲು ಡಿಜಿಟಲ್ ತಂತ್ರಜ್ಞಾನ ಬಳಕೆಯಾಗಬೇಕಿದೆ.

ವಾಚಕರ ವಾಣಿ

ಕಿವಿ ಹಿಂಡುವವರು ಬೇಕಿದೆ...

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬ್ಯಾಂಕುಗಳ ಕಿವಿ ಹಿಂಡಿದ ಬಗ್ಗೆ ವರದಿಯಾಗಿದೆ (ಪ್ರ.ವಾ., ಆ. 11). ಆರ್‌ಬಿಐನ ಆಡಳಿತ ಮಂಡಳಿ ಸಭೆಯಲ್ಲಿ ಸಚಿವೆ ಸಣ್ಣ ಉಳಿತಾಯ ಠೇವಣಿಗೆ ಒತ್ತು ನೀಡಲು ಕಿವಿಮಾತು ಹೇಳಿದ್ದಾರೆ. ಈ ಕಿವಿ ಹಿಂಡುವ ಪ್ರಕ್ರಿಯೆ ಆರ್‌ಬಿಐನಿಂದ ಬ್ಯಾಂಕುಗಳ ಚೇರ್ಮನ್‌ಗಳಿಗೂ, ಅವರಿಂದ ಉನ್ನತ ಅಧಿಕಾರಿಗಳಿಗೂ ಶಾಖೆಗಳ ಮ್ಯಾನೇಜರ್‌ಗಳಿಗೂ, ಅಲ್ಲಿಂದ ಸಿಬ್ಬಂದಿವರೆಗೂ ಸಾಗುತ್ತದೆ. ಆದರೆ ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಅಗತ್ಯವಾದ ಸಿಬ್ಬಂದಿ ಕೊರತೆಯನ್ನು ನೀಗಲು ಸಂಬಂಧಿಸಿದವರ ಕಿವಿ ಹಿಂಡುವವರು ಅಗತ್ಯವಾಗಿ ಬೇಕಾಗಿದೆ! ಈ ಕೊರತೆ ನೀಗಿದರೆ ಕಿವಿ ಹಿಂಡಿದ್ದು ಫಲಪ್ರದವಾಗುತ್ತದೆ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ

ಪುರಸ್ಕಾರ ನಿರಾಕರಣೆ: ಅಭಿಮಾನದ ನಡೆ

ಕನ್ನಡ ಚಲನಚಿತ್ರ ನಟ ಸುದೀಪ್ ಅವರು ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಯನ್ನು ಇತ್ತೀಚೆಗೆ ನಯವಾಗಿ ನಿರಾಕರಿಸಿದ್ದರು. ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ನಟ ಪ್ರಕಾಶ್ ರಾಜ್ ಸಹ ನಿರಾಕರಿಸಿದ್ದಾರೆ. ಈ ಎರಡೂ ಸನ್ನಿವೇಶಗಳಲ್ಲಿ ಇಬ್ಬರೂ ನಟರು ನಡೆದುಕೊಂಡ ರೀತಿ ಪ್ರಶಂಸಾರ್ಹವಾಗಿದೆ. ಈಗಿನ ಬಹುತೇಕ ಪ್ರಶಸ್ತಿಗಳು ಮತ್ತು ಸರ್ಕಾರದ ಮಾನ ಸಮ್ಮಾನಗಳು ರಾಜಕೀಯಪ್ರೇರಿತವಾಗಿರುತ್ತವೆ. ಅದೆಷ್ಟೋ ಹಿರಿಯ ನಟರು ಇಂಥ ಯಾವುದೇ ಪ್ರಶಸ್ತಿ ಪಡೆಯದೆ ನಾಡಿನ ಸೇವೆ ಮಾಡಿರುವುದನ್ನು ಗಮನಿಸಿದರೆ, ಈ ನಟರ ನಡವಳಿಕೆ ಬಗ್ಗೆ ಅಭಿಮಾನ ಮೂಡುತ್ತದೆ.

ಬಸಪ್ಪ ಯ. ಬಂಗಾರಿ, ಬೆಂಗಳೂರು

ನಮ್ಮ ನಾಯಕರಿವರು, ಪ್ರಬುದ್ಧ ನೇತಾರರು!

ಬೆಂಗಳೂರಿನಿಂದ ಮೈಸೂರಿನವರೆಗೆ ನಡೆದ ಪಾದಯಾತ್ರೆ, ಸಮಾವೇಶಗಳ ಪರ್ವ ಅಂತೂ ಮುಗಿಯಿತು. ಪಾದಯಾತ್ರೆ, ಅದಕ್ಕೆ ಪ್ರತಿಯಾಗಿ ನಡೆದ ಸಮಾವೇಶಗಳ ಪ್ರಹಸನವನ್ನು ನೋಡುತ್ತಾ ಜನರಿಗೆ ನೇತ್ರಾನಂದವಾಯಿತು. ಪಾದಯಾತ್ರೆಯ ಕಾಲಕ್ಕೆ ಕೇಳಿಬಂದ ನಾಯಕರ ಮಾತುಗಳು ಹಾಗೂ ಸವಾಲು, ಜವಾಬುಗಳು ನಮಗೆ ಕರ್ಣಾನಂದವನ್ನು ಉಂಟು ಮಾಡಿದವು. ಗೌರವಾನ್ವಿತ ನೇತಾರರು ಲಭ್ಯವಿರುವ ಶಬ್ದ ಸಂಪತ್ತನ್ನೆಲ್ಲ ಬಳಸಿ ಎದುರಾಳಿಗಳನ್ನು ಬೆತ್ತಲೆ ಮಾಡಿದುದಲ್ಲದೆ ತಾವೂ ಬೆತ್ತಲಾದುದನ್ನು ನೋಡಿ ನಾಡಿನ ಜನರಿಗೆ ಮಹದಾನಂದವಾಯಿತು.

ಅವರ ಈ ಎಲ್ಲ ಪ್ರವರಗಳು ಕರ್ನಾಟಕದ ಜನತೆಗೆ ಗೊತ್ತಿಲ್ಲ ಎಂದಲ್ಲ. ಇತ್ತೀಚೆಗೆ ದಿನಾಲು ಮಾಮೂಲಿ ಎನ್ನುವಂತೆ ಜನರು ಇದನ್ನು ನೋಡುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ. ಪಾದಯಾತ್ರೆಯಿಂದಾಗಿ ಅದಕ್ಕೆ ಮತ್ತೊಂದಿಷ್ಟು ಕಳೆ ಬಂದಂತಾಯಿತು. ರಾಜಕೀಯ ಶಬ್ದಕೋಶಕ್ಕೆ ಒಂದಿಷ್ಟು ಹೊಸ ಶಬ್ದಗಳು ಸೇರ್ಪಡೆಯಾದವು. ನಶಿಸುತ್ತಿರುವ ರಾಜಕೀಯ ಮೌಲ್ಯಗಳಿಗೆ ಮತ್ತೊಂದಿಷ್ಟು ಬೆಲೆ ಬಂದಂತಾಯಿತು. ತಮ್ಮ ಆಸ್ತಿ, ಅಂತಸ್ತು, ಪುರುಷತ್ವ ಕುರಿತು ನಾಡ ಜನರಿಗೆ ಯಾವ ಸಂಶಯವೂ ಇಲ್ಲ. ತಾವೆಲ್ಲರೂ ಶೂರರು, ಧೀರರು, ಪೌರುಷವುಳ್ಳವರು, ಸತ್ಯಸಂಧರೂ ಆಗಿದ್ದೀರಿ. ಅಂತೆಯೇ ತಾವು ಈ ನಾಡನ್ನು ಆಳುತ್ತಿದ್ದೀರಿ. ತಮ್ಮನ್ನು ಒಮ್ಮೆ ನಾವು ಚುನಾಯಿಸಿ ಕಳುಹಿಸಿದ ಮೇಲೆ ತಾವು ಆಡಿದ್ದೇ ಆಟ. ಆನಂತರ ನಾಡ ಪ್ರಜೆಗಳು ಏನು ಮಾಡುವುದಕ್ಕೂ ಆಗದೆ ಸುಮ್ಮನಿರಬೇಕಾಗುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ತಿರುಗೇ(ನೋ)ಟು!

ಮೈಸೂರು ಸಮಾವೇಶದಲ್ಲಿ
ಆರೋಪ-ಪ್ರತ್ಯಾರೋಪ ಮಾಡುತ್ತಾ
ಆಡಳಿತ ಪಕ್ಷ, ವಿಪಕ್ಷಗಳ ನಾಯಕರು
ಪರಸ್ಪರ ನೀಡಿದರಂತೆ ತಿರುಗೇಟು,
ಬಂದು-ಹೋದ ಬಹುತೇಕ
ಜನ ಹೇಳುತಿಹರಂತೆ...
ನಮಗಂತೂ ಎರಡೂ ಪಕ್ಷದವರು
ಎರಡೂ ದಿನ ಮೋಸ ಮಾಡದೆ
ಕೊಟ್ಟರು ತಲಾ ₹ 500ರ ನೋಟು!

ಮ.ಗು.ಬಸವಣ್ಣ, ಮೈಸೂರು

ಉರಗಗಳ ರಕ್ಷಣೆಗೆ ಆದ್ಯತೆ ಇರಲಿ

ನಾಗರಪಂಚಮಿ ಬಂತೆಂದರೆ ಊರಿನ ತುಂಬೆಲ್ಲಾ ಹಬ್ಬದ ವಾತಾವರಣ. ಇದನ್ನು ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಆಚರಣೆ ಮಾಡುತ್ತಿರುವುದು ಸಂತೋಷದ ಸಂಗತಿ. ಆದರೆ, ಕೆಲವರು ಅಲ್ಲಲ್ಲಿ ಸರ್ಪಗಳಿಗೆ ಹೂವು ಹಾಕಿ, ಊದುಬತ್ತಿ ಬೆಳಗಿ, ಹಾಲುಣಿಸಿ ಪೂಜಿಸುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ವಾಸ್ತವವಾಗಿ ಹಾವುಗಳು ಹಾಲನ್ನು ಕುಡಿಯುವುದಿಲ್ಲ ಎಂಬ ಅಂಶವನ್ನು ಉರಗ ತಜ್ಞರು ತಿಳಿಸಿದ್ದಾರೆ. ಇಲಿ, ಹೆಗ್ಗಣದಂಥ ಪುಟ್ಟ ಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ಕಪ್ಪೆ, ಮೀನುಗಳು, ಕೀಟಗಳಂತಹವೇ ಹಾವಿನ ಆಹಾರ. ಕೆಲವು ಹಾವುಗಳು ವಿವಿಧ ಪ್ರಾಣಿ, ಪಕ್ಷಿಗಳ ಮೊಟ್ಟೆಗಳನ್ನು ತಿನ್ನುತ್ತವೆ. ಹೀಗಿರುವಾಗ, ಹಾವುಗಳನ್ನು ಹಿಡಿದು ಹಿಂಸಿಸುವುದು ಸಮಂಜಸವಲ್ಲ. ಉರಗಗಳ ರಕ್ಷಣೆಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಪೂಜಾ ಎಸ್., ಕಲಬುರಗಿ

ರಾಯಣ್ಣನ ನೆನೆಯೋಣ...

ಸಂಗೊಳ್ಳಿ ರಾಯಣ್ಣ ಈ ದೇಶ ಕಂಡ ಅಪ್ರತಿಮ ದೇಶಭಕ್ತ ಮತ್ತು ಸ್ವಾತಂತ್ರ್ಯಯೋಧ. ಕಿತ್ತೂರು ಸಂಸ್ಥಾನದಲ್ಲಿ ಬ್ರಿಟಿಷ್ ಸೈನ್ಯದ ವಿರುದ್ಧ ಹೋರಾಡಿದ ಕ್ರಾಂತಿಪುರುಷ. ಗೆರಿಲ್ಲಾ ಮಾದರಿ ಯುದ್ಧ ಮಾಡಿ ಬ್ರಿಟಿಷರಿಗೆ ನಡುಕ ಹುಟ್ಟಿಸಿದ್ದ ರಾಯಣ್ಣ ಬದುಕಿದ್ದು 33 ವರ್ಷಗಳು ಮಾತ್ರ. ಸಂಗೊಳ್ಳಿ ರಾಯಣ್ಣ ಹುಟ್ಟಿದ ದಿನ ಆಗಸ್ಟ್ 15. ಅಂದು ದೇಶಕ್ಕೆ ಸ್ವಾತಂತ್ರ್ಯ ದಿನೋತ್ಸವ.

ಸಂಗೊಳ್ಳಿ ರಾಯಣ್ಣ ಗಲ್ಲಿಗೇರಿದ ದಿನ ದೇಶಕ್ಕೆ ಗಣರಾಜ್ಯೋತ್ಸವ. ಇಂತಹ ಸೌಭಾಗ್ಯಶಾಲಿಯಾದ ರಾಯಣ್ಣನನ್ನು ಸ್ಮರಿಸುವ ಕಾರ್ಯ ಅವರ ಜನ್ಮದಿನವಾದ ಆಗಸ್ಟ್ 15ರಂದು ನಡೆಯಬೇಕಿದೆ. ಕರ್ನಾಟಕ ಸರ್ಕಾರವು ರಾಯಣ್ಣನಿಗೆ ಗೌರವ ಸಲ್ಲಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಸಿ.ಪುಟ್ಟಯ್ಯ, ಹಂದನಕೆರೆ, ತುಮಕೂರು ಜಿಲ್ಲೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳ: ಶಿಕ್ಷಣದಲ್ಲಿ ಡಿಜಿಟಲ್ ಕ್ರಾಂತಿ

ಪ್ರೌಢಶಾಲೆಯ ಮಕ್ಕಳ ಕೈಗೆ ಮೊಬೈಲ್, ಕಂಪ್ಯೂಟರ್ ಕೊಟ್ಟು ಅವುಗಳಿಗೆ ಅಂತರ್ಜಾಲ ಸಂಪರ್ಕ ಕಲ್ಪಿಸಿ ಕೇರಳ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ಸದ್ದಿಲ್ಲದೇ ಹೊಸ ಕ್ರಾಂತಿಯೊಂದನ್ನು ಮಾಡಿದೆ. ಭವಿಷ್ಯದ ಕೌಶಲಗಳಿಗಾಗಿ ಹದಿಹರೆಯದವರನ್ನು ಸಜ್ಜುಗೊಳಿಸುವ 'ಲಿಟ್ಲ್ ಕೈಟ್ ಎಜುಟೆಕ್' ಯೋಜನೆಯನ್ನು ಯುನಿಸೆಫ್ ಕೊಂಡಾಡಿದೆ. ಯೋಜನೆಯು ವಿದ್ಯಾರ್ಥಿಗಳನ್ನು ತಂತ್ರಜ್ಞಾನದ ಬಳಕೆದಾರರನ್ನಾಗಿ ಅಷ್ಟೇ ಅಲ್ಲ, ಅದರ ವಿನ್ಯಾಸಕರಾಗಿ ಹಾಗೂ ಸೃಷ್ಟಿಕರ್ತರನ್ನಾಗಿಯೂ ಪರಿವರ್ತಿಸಿದೆ

ಪ್ರಜಾವಾಣಿ ವಾರ್ತೆ

ಹದಿಹರೆಯದ ಮಕ್ಕಳಲ್ಲಿರುವ ಶಕ್ತಿ, ಹುಮ್ಮಸ್ಸು, ಕುತೂಹಲ, ಕಲಿಯುವ ಗುಣವನ್ನು ಗುರಿಯಾಗಿಸಿಕೊಂಡು ಕೇರಳ ಸರ್ಕಾರ 2018ರಲ್ಲಿ ಯೋಜನೆಯೊಂದನ್ನು ಪ್ರಾರಂಭಿಸಿತು. ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಮರುಜೀವ ನೀಡುವುದು ಅದರ ಉದ್ದೇಶವಾಗಿತ್ತು. ಆ ಯೋಜನೆಯ ಹೆಸರು 'ಲಿಟ್ಲ್ ಕೈಟ್ ಎಜುಟೆಕ್ ಯೋಜನೆ' (Little KITE EdTec). ಅದು ಜಾಗತಿಕ ಹಾಗೂ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಹಾಗೂ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ನಾಲ್ಕನೇ ಗುರಿಗೆ ಪೂರಕವಾಗಿತ್ತು. ಕೇರಳ ಶೈಕ್ಷಣಿಕ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಸಂಸ್ಥೆಯು (ಕೈಟ್) ಕಾರ್ಯರೂಪಕ್ಕಿಳಿಸಿರುವ ಈ ಯೋಜನೆಯ ಉದ್ದೇಶ, ಶಾಲಾ ಬಾಲಕ/ಬಾಲಕಿಯರನ್ನು ಡಿಜಿಟಲ್ ಸಾಕ್ಷರರನ್ನಾಗಿಸುವುದು.

ಹೀಗೆ, ಕೇರಳದ 2,174 ಪ್ರೌಢಶಾಲೆಗಳಲ್ಲಿ ಆರಂಭವಾದ ಕೌಶಲ್ಯಾಭಿವೃದ್ಧಿ ಯೋಜನೆಯಿಂದ ವಿದ್ಯಾರ್ಥಿಗಳು ಸಾಧಿಸಿದ ಪ್ರಗತಿ ಬೆರಗು ಮೂಡಿಸುವಂತಿತ್ತು. ಬಾಲಕ/ಬಾಲಕಿಯರು ಸಾಫ್ಟ್‌ವೇರ್‌ಗಳನ್ನು ಬಳಸುವುದು ಮಾತ್ರವಲ್ಲದೇ, ರೊಬೊಟಿಕ್ಸ್ ಹಾಗೂ ಕೃತಕ ಬುದ್ಧಿಮತ್ತೆಯನ್ನು (ಎಐ) ಕೂಡ ಯಶಸ್ವಿಯಾಗಿ ಬಳಸತೊಡಗಿದ್ದಾರೆ ಎಂದು ಈ ಯೋಜನೆ ಕುರಿತ ಯುನಿಸೆಫ್ ಇಂಡಿಯಾ ವರದಿ ತಿಳಿಸಿದೆ.

'ಲಿಟ್ಲ್ ಕೈಟ್' ಭಾರತದ ವಿದ್ಯಾರ್ಥಿಗಳ ಅತಿ ದೊಡ್ಡ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐಸಿಟಿ) ಜಾಲವಾಗಿದೆ. ಸರ್ಕಾರವು ಯುನಿಸೆಫ್‌ನ ಮಾರ್ಗಸೂಚಿಗೆ ಪೂರಕವಾಗಿ ಎಜುಟೆಕ್ (EdTec) ಕಾರ್ಯಕ್ರಮ ರೂಪಿಸಿ, 8ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ಡಿಜಿಟಲ್ ಸಾಧನಗಳು, ಅಂತರ್ಜಾಲ ಸಂಪರ್ಕ ಒದಗಿಸಿತು. ಯೋಜನೆಯಲ್ಲಿ ಉಚಿತ ಮತ್ತು ಓಪನ್ ಸೋರ್ಸ್ ಸಾಫ್ಟ್‌ವೇರ್ (ಎಫ್‌ಒಎಸ್‌ಎಸ್) ಬಳಸಲಾಗಿತ್ತು. 2008ರಿಂದ ಶಿಕ್ಷಣ ಇಲಾಖೆಯಲ್ಲಿ ಎಫ್‌ಒಎಸ್‌ಎಸ್ ಬಳಸಲಾಗುತ್ತಿದ್ದು, ಅದರಿಂದ ರಾಜ್ಯಕ್ಕೆ ವಾರ್ಷಿಕ ₹3,000 ಕೋಟಿ ಉಳಿತಾಯವಾಗಿದೆ ಎಂದು ಕೇರಳ ಸರ್ಕಾರ ಹೇಳಿದೆ.

ಈ ಯೋಜನೆಯ ಭಾಗವಾಗಿ ವಿದ್ಯಾರ್ಥಿಗಳು ಸಾಫ್ಟ್‌ವೇರ್‌ಗಳನ್ನು ಬಳಸುವುದಷ್ಟೇ ಅಲ್ಲ, ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಲೂ ಸೂಚಿಸಿ, ಅವನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ತಿಳಿಸಲಾಗಿತ್ತು. ಜತೆಗೆ, ವಿದ್ಯಾರ್ಥಿಗೆ ಅಗತ್ಯವಾದ ಜೀವನ ಕೌಶಲಗಳು, ಸಾಮಾಜಿಕ ಕೌಶಲಗಳು ಹಾಗೂ 21ನೇ ಶತಮಾನದ ಕೌಶಲಗಳನ್ನು ಕಲಿಸಲಾಯಿತು. ಕೋವಿಡ್ ವೇಳೆಯಲ್ಲಂತೂ ಇದು ವಿದ್ಯಾರ್ಥಿಗಳಿಗೆ ದೊಡ್ಡ ಮಟ್ಟದಲ್ಲಿ ನೆರವಾಯಿತು. ರಾಜ್ಯದ 46 ಲಕ್ಷ ವಿದ್ಯಾರ್ಥಿಗಳಿಗೆ ಇ-ಪಠ್ಯಕ್ರಮದ ಮೂಲಕ ಶಿಕ್ಷಣ ನೀಡಲಾಗಿತ್ತು. ವೆಬ್ ಮತ್ತು ಯುಟ್ಯೂಬ್ ಅನ್ನೂ ಬಳಸಿಕೊಳ್ಳಲಾಗಿತ್ತು. ಇದೆಲ್ಲದರ ಫಲವಾಗಿ, ರಾಜ್ಯದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಡಿಜಿಟಲ್ ತಂತ್ರಜ್ಞಾನದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದ್ದರು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಹೆಣ್ಣುಮಕ್ಕಳು ಕೂಡ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆಯಲು ಯೋಜನೆ ಪ್ರೇರೇಪಿಸಿತು. ಲಿಟ್ಲ್ ಕೈಟ್‌ಗೆ '2022ರ ರಾಜ್ಯದ ಅತ್ಯುತ್ತಮ ನಾವೀನ್ಯದ (ಇನೊವೇಶನ್) ಯೋಜನೆ' ಎನ್ನುವ ಮನ್ನಣೆಯೂ ಸಿಕ್ಕಿತು.

ಭಾರತದಲ್ಲಿರುವ 25.3 ಕೋಟಿ ಹದಿಹರೆಯದವರನ್ನು ಡಿಜಿಟಲ್ ಸಾಕ್ಷರನ್ನಾಗಿಸುವ ಮೂಲಕ ಭವಿಷ್ಯದ ಸವಾಲುಗಳಿಗೆ ಸಜ್ಜುಮಾಡುವ ದೃಷ್ಟಿಯಿಂದ ಕೇರಳದ ಮಾದರಿ ಅನುಕರಣೀಯ; ಇದು ಮಧ್ಯಮ ಆದಾಯದ ದೇಶಗಳು ಸೇರಿದಂತೆ ಅಭಿವೃದ್ಧಿ ಹೊಂದಿದ ದೇಶಗಳಿಗೂ ಉತ್ತಮ ಮಾದರಿ ಎಂದು ಯುನಿಸೆಫ್ ಶ್ಲಾಘಿಸಿದೆ. 11 ಮತ್ತು 12ನೇ ತರತಿಯ ಮಕ್ಕಳಿಗೂ ಕಾರ್ಯಕ್ರಮ ವಿಸ್ತರಿಸಿ ಎಂದು ಶಿಫಾರಸು ಮಾಡಿದೆ.

ಡಿಜಿಟಲ್ ಶಿಕ್ಷಣ ಜಾಗತಿಕ ನೋಟ

180 ಕೋಟಿ ಪ್ರಪಂಚದಲ್ಲಿರುವ ಹದಿಹರೆಯದವರು

90% ಕಡಿಮೆ ಮತ್ತು ಮಧ್ಯಮ ಆದಾಯದ ರಾಷ್ಟ್ರಗಳಲ್ಲಿರುವ ಹದಿಹರೆಯವದವರ ಪ್ರಮಾಣ

80,000 ಒಂಬತ್ತು ರಾಷ್ಟ್ರಗಳಲ್ಲಿ ನಡೆದ ಸಮೀಕ್ಷೆಯಲ್ಲಿ ಭಾಗವಹಿಸಿದವರು

25% ಕ್ಕೂ ಹೆಚ್ಚು ಮುಂದಿನ ದಶಕದಲ್ಲಿ ತಮ್ಮ ಜೀವನದ ಮೇಲೆ ತಂತ್ರಜ್ಞಾನ ಬೀರಲಿರುವ ಪರಿಣಾಮಗಳ ಬಗ್ಗೆ ಮಾಹಿತಿ ಇಲ್ಲದವರ ಪ್ರಮಾಣ

ಲಿಟ್ಲ್ 'ಕೈಟ್': ಸ್ಥೂಲ ನೋಟ

1.80 ಲಕ್ಷ ಲಿಟ್ಲ್ ಕೈಟ್ ಕ್ಲಬ್‌ಗಳ ಸದಸ್ಯತ್ವ ಪಡೆದಿರುವ ಪ್ರೌಢಶಾಲೆ ವಿದ್ಯಾರ್ಥಿಗಳು

2,175 ಲಿಟ್ಲ್ ಕೈಟ್ ಕ್ಲಬ್‌ಗಳನ್ನು ಹೊಂದಿರುವ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳು

50% ಕೈಟ್ ವ್ಯಾಪ್ತಿಗೆ ಬರುವ ರಾಜ್ಯದ ಶಾಲೆಗಳ ಪ್ರಮಾಣ

12 ಲಕ್ಷ 2018ರಲ್ಲಿ ಕಾರ್ಯಕ್ರಮ ಜಾರಿಗೆ ಬಂದ ನಂತರ ಪ್ರಯೋಜನ ಪಡೆದ ವಿದ್ಯಾರ್ಥಿಗಳು

46 ಲಕ್ಷ ಕೋವಿಡ್–19 ಸಂದರ್ಭದಲ್ಲಿ 'ಕೈಟ್' ವೇದಿಕೆ ಮೂಲಕ ಪ್ರಸಾರ ಮಾಡಿದ ಇ-ಪಠ್ಯದ ಲಾಭ ಪಡೆದ ಮಕ್ಕಳ ಸಂಖ್ಯೆ

80,000 ಈ ಕಾರ್ಯಕ್ರಮದಲ್ಲಿ ಕೃತಕ ಬುದ್ಧಿಮತ್ತೆ ತರಬೇತಿ ಪಡೆಯುತ್ತಿರುವ ಶಿಕ್ಷಕರು

ಫಿನ್ಲೆಂಡ್‌ನಲ್ಲೂ ಅನುಷ್ಠಾನ

ಲಿಟ್ಲ್ ಕೈಟ್ ಯೋಜನೆಯಿಂದ ಪ್ರೇರಣೆ ಪಡೆದ ಫಿನ್ಲೆಂಡ್ ಸರ್ಕಾರ, ಅಲ್ಲಿನ ಶಿಕ್ಷಣದಲ್ಲಿ ಈ ಮಾದರಿಯ ಡಿಜಿಟಲ್ ಶಿಕ್ಷಣವನ್ನು ಅಳವಡಿಸಿಕೊಳ್ಳುವುದಾಗಿ ಘೋಷಿಸಿದೆ. 2022ರಲ್ಲಿ ಕೇರಳದ 'ಕೈಟ್'ನೊಂದಿಗೆ ಈ ಸಂಬಂಧ ಒಪ್ಪಂದವನ್ನೂ ಮಾಡಿಕೊಂಡಿದೆ

ಏನೇನು ಕಲಿಕೆ ?

ಅನಿಮೇಷನ್, ರೊಬೊಟಿಕ್ಸ್, ಪ್ರೋಗ್ರಾಮಿಂಗ್, ಮೊಬೈಲ್ ಆ್ಯಪ್‌ಗಳ ಅಭಿವೃದ್ಧಿ, ಎಐ, ಭಾಷಾ ಕಂಪ್ಯೂಟಿಂಗ್, ಹಾರ್ಡ್‌ವೇರ್ ಮತ್ತು ಎಲೆಕ್ಟ್ರಾನಿಕ್ಸ್, ಮೀಡಿಯಾ ತರಬೇತಿ, ಸೈಬರ್ ಸೇಫ್ಟಿ, ಇ-ಕಾಮರ್ಸ್, ಇ-ಗವರ್ನೆನ್ಸ್, ವಿಡಿಯೊ ಡಾಕ್ಯುಮೆಂಟೇಷನ್, ವೆಬ್ ಟಿವಿ

ಪೋಷಕರಿಗೆ ಮಕ್ಕಳ ಪಾಠ

ಡಿಜಿಟಲ್ ಶಿಕ್ಷಣ ಪಡೆದ ಮಕ್ಕಳು ಪೋಷಕರಿಗೆ ಮಾಹಿತಿ ತಂತ್ರಜ್ಞಾನದ ಬಗ್ಗೆ ಪಾಠ ಮಾಡುತ್ತಿದ್ದಾರೆ. 'ಅಮ್ಮ ಅರಿವು ಕಾರ್ಯಕ್ರಮ'ದ ಅಡಿಯಲ್ಲಿ 4 ಲಕ್ಷ ತಾಯಂದಿರು ಸ್ಮಾರ್ಟ್‌ಫೋನ್, ಇಂಟರ್‌ನೆಟ್ ಬಳಕೆಯ ಬಗ್ಗೆ ತಮ್ಮ ಮಕ್ಕಳಿಂದಲೇ ಅರಿತುಕೊಂಡಿದ್ದಾರೆ.

'ಲಿಟ್ಲ್ ಕೈಟ್' ಸಾಗಿದ ಹಾದಿ...

2001
ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಶಿಕ್ಷಣ ನೀಡಲು ಕೇರಳ ಸರ್ಕಾರ ನಿರ್ಧಾರ. ಶಿಕ್ಷಕರಿಗೆ ಐಸಿಟಿ ತರಬೇತಿ. ಪ್ರತಿ ಶಾಲೆಗೂ ಐಟಿ ಸಮನ್ವಯಕಾರರ (ಎಸ್‌ಐಟಿಸಿ) ನಿಯೋಜನೆ. 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಗುಂಪು ರಚಿಸಿ ವಿದ್ಯಾರ್ಥಿ ಶಾಲಾ ಐಟಿ ಸಮನ್ವಯಕಾರರ (ಎಸ್‌ಎಸ್‌ಐಟಿಸಿ) ನೇಮಕ. ಅವರಿಗೆ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ನಿರ್ವಹಣೆಯ ತರಬೇತಿ

2007-2012
'ಕೈಟ್' ಅನುಷ್ಠಾನಕ್ಕೆ ಬಂದ ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಯೋಜನೆಗೆ ಅನುದಾನ ಮತ್ತು ಪೂರಕ ಸಲಕರಣೆಗಳನ್ನು ನೀಡಿದ ಕೇಂದ್ರ ಸರ್ಕಾರ

2016-2018
ಸಾರ್ವಜನಿಕ ಶಿಕ್ಷಣ ಪುನರುಜ್ಜೀವನ ಯೋಜನೆ ಆರಂಭಿಸಿದ ಸರ್ಕಾರ. ಎಸ್‌ಎಸ್‌ಐಟಿಸಿ ಜಾಲಕ್ಕೆ 'ಹೈ-ಸ್ಕೂಲ್ ಕುಟ್ಟಿಕೂಟ್ಟಮ್' ಎಂದು ಮರುನಾಮಕರಣ ಮಾಡಿ ಅನಿಮೇಷನ್, ಸೈಬರ್ ಸುರಕ್ಷತೆ, ಕಂಪ್ಯೂಟರ್‌ಗಳಲ್ಲಿ ಮಲಯಾಳ ಭಾಷೆ ಬಳಕೆ, ಹಾರ್ಡ್‌ವೇರ್ ಮತ್ತು ಎಲೆಕ್ಟ್ರಾನಿಕ್ಸ್, ಮಾಧ್ಯಮ ತರಬೇತಿ, ಇ-ಕಾಮರ್ಸ್, ಇ-ಆಡಳಿತ, ವಿಡಿಯೊ ದಾಖಲೀಕರಣ ಮತ್ತು ವೆಬ್ ಟಿವಿ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ

2018-2020
'ಹೈ-ಸ್ಕೂಲ್ ಕುಟ್ಟಿಕೂಟ್ಟಮ್'ಗೆ 'ಲಿಟ್ಲ್ ಕೈಟ್' ಎಂದು ಮರುನಾಮಕರಣ. 2,000ಕ್ಕೂ ಹೆಚ್ಚು ಶಾಲೆಗಳಲ್ಲಿ ಲಿಟ್ಲ್ ಕೈಟ್ ಘಟಕ ರಚನೆ

2020-2021
ಕೋವಿಡ್–19 ಸಮಯದಲ್ಲಿ ಕೈಟ್ ವಿಕ್ಟೆರ್ಸ್ ಚಾನೆಲ್ ಮೂಲಕ ಮಕ್ಕಳಿಗೆ ವಿಶೇಷ ತರಗತಿಗಳ ಪ್ರಸಾರ

2022
1.72 ಲಕ್ಷಕ್ಕೆ ವಿಸ್ತರಿಸಿದ ಲಿಟ್ಲ್ ಕೈಟ್ ಸದಸ್ಯರ ಸಂಖ್ಯೆ. ಇದು ಭಾರತದಲ್ಲೇ ವಿದ್ಯಾರ್ಥಿಗಳ ಅತಿ ದೊಡ್ಡ ಐಸಿಟಿ ಜಾಲ ಎಂಬ ಹೆಗ್ಗಳಿಕೆ

2023-2024
ಶಾಲೆ, ಉಪ ಜಿಲ್ಲೆ, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ವಿನೂತನ ತಂತ್ರಜ್ಞಾನ ಶಿಬಿರಗಳ ಆಯೋಜನೆ. ಲಿಟ್ಲ್ ಕೈಟ್‌ಗೆ ಹೆಚ್ಚುವರಿಯಾಗಿ 20 ಸಾವಿರ ರೊಬೊಟಿಕ್ ಕಿಟ್‌ಗಳ ನಿಯೋಜನೆ. ಸರ್ಕಾರಿ ಶಾಲೆಗಳ 80 ಸಾವಿರ ಶಿಕ್ಷಕರಿಗೆ ಕೃತಕ ಬುದ್ಧಿಮತ್ತೆ (ಎಐ) ತರಬೇತಿ ಆರಂಭ

ಆಧಾರ: ಯುನಿಸೆಫ್‌ನ 'ಎಂಪವರಿಂಗ್ ಅಡೋಲಸೆಂಟ್ಸ್ ವಿದ್ ಫ್ಯೂಚರ್ ರೆಡಿ ಸ್ಕಿಲ್ಸ್– ದಿ ಇನ್‌ಸ್ಪೈರಿಂಗ್ ಸ್ಟೋರಿ ಆಫ್ ಲಿಟ್ಲ್ ಕೈಟ್' ವರದಿ, ಚಿತ್ರ ಕೈಟ್ ವೆಬ್‌ಸೈಟ್

ಸಿನಿ ಬಿಟ್ಸ್

'ಭೈರತಿ'ಯ ಶೀರ್ಷಿಕೆ ಗೀತೆ

ಶಿವರಾಜ್‌ಕುಮಾರ್ ನಟನೆಯ ಈ ವರ್ಷದ ಬಹುನಿರೀಕ್ಷಿತ ಚಿತ್ರ 'ಭೈರತಿ ರಣಗಲ್'ನ ಶೀರ್ಷಿಕೆ ಗೀತೆ ಬಿಡುಗಡೆಗೊಂಡಿದೆ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ಅವರು ನಿರ್ಮಿಸಿರುವ ಚಿತ್ರವನ್ನು ನರ್ತನ್ ನಿರ್ದೇಶಿಸಿದ್ದಾರೆ.

ಕಿನ್ನಾಳ್ ರಾಜ್ ಅವರು ಬರೆದಿರುವ 'ಇತಿಹಾಸವೇ ನಿಬ್ಬೆರಗಿಸುವ ಎತ್ತಿ ಹಿಡಿಯುವ ಮೈಲಿಗಲ್ಲು' ಎಂಬ ಶೀರ್ಷಿಕೆ ಗೀತೆಗೆ ರವಿ ಬಸ್ರೂರು ಸಂಗೀತ ನೀಡಿದ್ದಾರೆ. ಸಂತೋಷ್ ವೆಂಕಿ ಹಾಡಿದ್ದಾರೆ. ಲುಂಗಿ, ಕಪ್ಪು ಅಂಗಿಯಲ್ಲಿ ಕಾಣಿಸಿಕೊಂಡಿರುವ ಶಿವರಾಜ್‌ಕುಮಾರ್ ಗಣಿಭೂಮಿಯಲ್ಲಿ ಧೂಳೆಬ್ಬಿಸುವ ಪಾತ್ರವನ್ನು ನಿರ್ವಹಿಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ.

ನರ್ತನ್ ಹಾಗೂ ಶಿವಣ್ಣ ಅವರ ಕಾಂಬಿನೇಶನ್‌ನಲ್ಲಿ ಬಂದಿದ್ದ 'ಮಫ್ತಿ' ಚಿತ್ರದ ಪ್ರೀಕ್ವೆಲ್ ಆಗಿರುವ 'ಭೈರತಿ ರಣಗಲ್' ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ.

ಶಿವರಾಜಕುಮಾರ್ ಅವರಿಗೆ ನಾಯಕಿಯಾಗಿ ರುಕ್ಮಿಣಿ ವಸಂತ್ ಅಭಿನಯಿಸಿದ್ದಾರೆ. ನವೀನ್ ಕುಮಾರ್ ಛಾಯಾಚಿತ್ರಗ್ರಹಣ, ಆಕಾಶ್ ಹಿರೇಮಠ ಸಂಕಲನ ಚಿತ್ರಕ್ಕಿದೆ. ❖

ಇದು ಹೊಸಬರ 'ವೈಕುಂಠ ಸಮಾರಾಧನೆ'!

ಕೆಲವು ಚಿತ್ರಗಳು ಶೀರ್ಷಿಕೆಯಿಂದಲೇ ಗಮನ ಸೆಳೆಯುತ್ತವೆ. ಅಂಥದ್ದೇ ಒಂದು ವಿಭಿನ್ನ ಶೀರ್ಷಿಕೆ ಹೊಂದಿರುವ ಹೊಸಬರ ಚಿತ್ರವೊಂದು ಸೆಟ್ಟೇರಲು ಸಜ್ಜಾಗಿದೆ. ರಜತ್ ಮೌರ್ಯ ನಿರ್ದೇಶನದೊಂದಿಗೆ, ನಾಯಕನಾಗಿ ನಟಿಸುತ್ತಿರುವ 'ವೈಕುಂಠ ಸಮಾರಾಧಾನೆ' ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಇದು ನಮ್ಮ ಸಿನಿಮಾದ ಡೆತ್‌ಲುಕ್ ಪೋಸ್ಟರ್' ಎಂಬ ಅಡಿಬರಹವಿದೆ.

'ಸಾವಿಲ್ಲದ ಮನೆ ಸಾಸಿವೆ ತನ್ನಿ ಎಂಬ ಮಾತಿದೆ. ಅದೇ ರೀತಿ ವೈಕುಂಠ ಸಮಾರಾಧನೆಯೇ ಇಲ್ಲದ ಮನೆ ಹುಡುಕಲು ಸಾಧ್ಯವಿಲ್ಲ. ಜೊತೆಗೆ ನಾನು ವೆಂಕಟೇಶನ ಭಕ್ತ. ಹೀಗಾಗಿ ಈ ಶೀರ್ಷಿಕೆ ಆಯ್ದುಕೊಂಡೆ. ಅಜ್ಜ–ಮೊಮ್ಮಗನ ಕಥೆ ಹೊಂದಿರುವ ಹಾಸ್ಯಮಯ ಚಿತ್ರವಿದು. ನವೆಂಬರ್‌ನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ. ಶೇ 65ರಷ್ಟು ಭಾಗ ಮಲೆನಾಡಿನಲ್ಲಿ ಚಿತ್ರೀಕರಣಗೊಳ್ಳಲಿದೆ' ಎಂದು ಚಿತ್ರದ ಬಗ್ಗೆ ಮಾಹಿತಿ ನೀಡಿದರು ರಜತ್. ಆಶಾ ಗೇರ್‌ಗಲ್ ಚಿತ್ರದ ನಿರ್ಮಾಪಕರು. ರುತ್ವಿಕ್ ಮುರುಳಿಧರ್ ಸಂಗೀತ, ಹರ್ಷಿತ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



'ಮಾರುಕಟ್ಟೆ ಬಿದ್ದಾಗ ಷೇರುಪೇಟೆಯಲ್ಲಿ ಹೂಡಿಕೆ ಮಾಡಬೇಕು. ಅದೇ ರೀತಿ ಚಿತ್ರರಂಗ ಸಂಕಷ್ಟದಲ್ಲಿರುವಾಗ ಹೊಸ ಅಲೆಯ ಚಿತ್ರಗಳು ಬರಬೇಕು. ನಮ್ಮಲ್ಲಿ ನಮ್ಮವರೇ ನಮ್ಮನ್ನು ತುಳಿಯುತ್ತಿದ್ದಾರೆ. ಚಿತ್ರೋದ್ಯಮದಲ್ಲಿ ನಾವೆಲ್ಲ ಒಗ್ಗಟ್ಟಾಗಿ ನಿಲ್ಲಬೇಕು. ವಕೀಲರಾಗಿರುವ ರಜತ್ ಚಿತ್ರರಂಗದಲ್ಲಿಯೂ ಯಶಸ್ಸು ಕಾಣಲಿ' ಎಂದರು 'ಶಾಖಾಹಾರಿ' ಚಿತ್ರದ ನಿರ್ಮಾಪಕ ರಾಜೇಶ್ ಕೀಳಂಬಿ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬಂಗಾಳಿ ಸಾಹಿತ್ಯದ ಮೇರು ಲೇಖಕ ರವೀಂದ್ರನಾಥ ಟ್ಯಾಗೋರ್ ಅವರ ಪ್ರತಿಮೆ ಭಗ್ನಗೊಂಡು ಕೆಳಗೆ ಬಿದ್ದಿರುವ ಚಿತ್ರ ಮತ್ತು ಅವರ ಪ್ರತಿಮೆಯನ್ನು ಗುಂಪೊಂದು ಪ್ರತಿಷ್ಠಾಪಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಹಿಂಸಾಚಾರದ ವೇಳೆ ಬಾಂಗ್ಲಾದೇಶದಲ್ಲಿ ಟ್ಯಾಗೋರ್ ಅವರ ಪ್ರತಿಮೆಯನ್ನು ಭಗ್ನಗೊಳಿಸಲಾಗಿದೆ ಎಂದು ಚಿತ್ರವನ್ನು ಹಂಚಿಕೊಂಡು ಪ್ರತಿಪಾದನೆ ಮಾಡಲಾಗುತ್ತಿದೆ. ಆದರೆ, ಈ ಪ್ರತಿಪಾದನೆ ಸುಳ್ಳು.

ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಈ ಬಗ್ಗೆ 2023ರಲ್ಲಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿ ಕಂಡುಬಂತು. ಅದರಲ್ಲಿ ರವೀಂದ್ರನಾಥ ಟ್ಯಾಗೋರ್ ಅವರ ಪ್ರತಿಮೆಯ ರುಂಡವು ನಾಪತ್ತೆಯಾಗಿರುವ ಬಗ್ಗೆ ವರದಿ ಮಾಡಲಾಗಿತ್ತು. ನಂತರ ಅದು ಢಾಕಾ ವಿಶ್ವವಿದ್ಯಾಲಯದ ಉದ್ಯಾನದಲ್ಲಿ ಪತ್ತೆಯಾಗಿತ್ತು. ವಿಶ್ವವಿದ್ಯಾಲಯವು ವಿದ್ಯಾರ್ಥಿಗಳು ಪ್ರತಿಷ್ಠಾಪಿಸಿದ್ದ ಪ್ರತಿಮೆಯನ್ನು ಅನಧಿಕೃತ ಎಂದು ತೆರವುಗೊಳಿಸಿತ್ತು. ವಿದ್ಯಾರ್ಥಿಗಳು ಮತ್ತೊಮ್ಮೆ ಅದನ್ನು ಪ್ರತಿಷ್ಠಾಪಿಸಿದ್ದರು. ಇದರ ಬಗ್ಗೆ ವರದಿ ಉಲ್ಲೇಖಿಸಿದೆ. ಈಗ ಶೇಖ್ ಮುಜೀಬುರ್ ರಹಮಾನ್ ಅವರ ಪ್ರತಿಮೆಯ ಭಗ್ನಾವಶೇಷಗಳೊಂದಿಗೆ ವಿಡಿಯೊ ಅನ್ನು ಹಂಚಿಕೊಳ್ಳಲಾಗುತ್ತಿದೆ. ಟ್ಯಾಗೋರ್ ಅವರ ಪ್ರತಿಮೆಯ ಹಳೆಯ ಚಿತ್ರ ಮತ್ತು ವಿಡಿಯೊ ಅನ್ನು ಈಗ ಹಂಚಿಕೊಂಡು, ಅವಕ್ಕೂ ಬಾಂಗ್ಲಾದೇಶದ ಹಿಂಸಾಚಾರಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ನುಡಿ ಬೆಳಗು

ಭಯವೆಂಬ ದೆವ್ವವನ್ನು ಮನದಿಂದ ಹೊಡೆದೋಡಿಸಿ

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಇದೊಂದು ಮುಲ್ಲಾ ನಸೀರುದ್ದೀನ್‌ನ ಪ್ರಸಿದ್ಧ ಹಾಸ್ಯಕತೆ. ಒಮ್ಮೆ ತೀವ್ರ ದುಃಖಿತನಾಗಿದ್ದ ವ್ಯಕ್ತಿಯೊಬ್ಬ ಮುಲ್ಲಾನ ಬಳಿ ಬಂದ. ಅವನ ಸಮಸ್ಯೆ ತೀರಾ ವಿಚಿತ್ರವಾಗಿತ್ತು. ಅದೇನೆಂದರೆ ಅವನಿಗೆ ತನ್ನ ಮಂಚದ ಕೆಳಗೆ ದೆವ್ವವೊಂದು ಅಡಗಿ ಕುಳಿತಿದೆ ಎನ್ನುವ ಭಯ ಆವರಿಸಿಬಿಟ್ಟಿತ್ತು. ಅದನ್ನು ಕೇಳಿದ ಮುಲ್ಲಾ 'ನೀನು ಫಕೀರನ ಬಳಿ ಹೋಗು. ಅವನು ತನ್ನ ನವಿಲುಗರಿ ಅಲ್ಲಾಡಿಸಿ ಹಾಗೂ ಧೂಪದ ಹೊಗೆ ಹಾಕಿ ನಿನ್ನ ಮಂಚದ ಕೆಳಗಿರುವ ದೆವ್ವವನ್ನು ಓಡಿಸುತ್ತಾನೆ' ಎಂದು ಸಲಹೆ ನೀಡಿದ. ಆಗ ವ್ಯಕ್ತಿ 'ನಾನು ಫಕೀರರ ಬಳಿ ಹೋಗಿದ್ದೆ ಸ್ವಾಮಿ. ಆದರೆ ಅವರು ತುಂಬಾ ದುಬಾರಿ. ಈ ಕೆಲಸಕ್ಕೆ ನೂರು ದಿನಾರು ಸಂಭಾವನೆ ಕೇಳುತ್ತಿದ್ದಾರೆ' ಎಂದ. ಆಗ ಮುಲ್ಲಾ 'ನಾನೇನು ನಿನಗೆ ಉಚಿತವಾಗಿ ಸಲಹೆ ನೀಡುವುದಿಲ್ಲ. ಆದರೆ ನೀನು ಬಡವನಂತೆ ಕಾಣುತ್ತೀಯ. ಮೊದಲು ನನಗೆ ಹತ್ತು ದಿನಾರ್ ನೀಡು. ಆಗ ನನ್ನ ಸಲಹೆ ನೀಡುತ್ತೇನೆ' ಎಂದ. ಆ ವ್ಯಕ್ತಿ ತಕ್ಷಣವೇ ತನ್ನ ಜೇಬಿನಿಂದ ಹತ್ತು ದಿನಾರ್ ತೆಗೆದು ಮುಲ್ಲಾನಿಗೆ ನೀಡಿದ. ಅದನ್ನು ಜೇಬಿಗಿಳಿಸಿದ ಮುಲ್ಲಾ, ಆ ವ್ಯಕ್ತಿಯನ್ನು ಬಳಿಗೆ ಕರೆದು 'ಒಂದು ಕೆಲಸ ಮಾಡು, ನಿನ್ನ ಮಂಚದ ನಾಲ್ಕೂ ಕಾಲುಗಳನ್ನು ಕತ್ತರಿಸಿ ಬಿಡು. ಆಗ ದೆವ್ವಕ್ಕೆ ಅಡಗಿಕೊಳ್ಳಲು ಜಾಗವೇ ಸಿಗುವುದಿಲ್ಲ. ಆಗ ನೀನದರ ಕಾಟದಿಂದ ಖಂಡಿತ ಪಾರಾಗುತ್ತೀ' ಎಂದು ಹೇಳಿದ.

ನಗು ತರಿಸುವ ಈ ಹಾಸ್ಯ ಚಟಾಕಿಯಲ್ಲಿ ಒಂದು ಒಳ್ಳೆಯ ಸಂದೇಶವಿದೆ. ಎಲ್ಲರಿಗೂ ಈ ಭಯವೆಂಬ ದೆವ್ವ ಸದಾ ಕಾಟ ಕೊಡುತ್ತದೆ. ಈ ದೆವ್ವಕ್ಕೆ ಮದ್ದೇನೆಂದರೆ ಭಯದ ನಿರ್ಮೂಲನೆ. ನಮ್ಮ ಮನಸ್ಸಿನಲ್ಲಿ ಭಯಕ್ಕೆ ಜಾಗ ನೀಡದಿದ್ದರೆ, ನಮಗೆ ಭಯಪಡುವ ಸನ್ನಿವೇಶವೇ ಎದುರಾಗುವುದಿಲ್ಲ. ಯಾವುದೇ ಕೆಲಸವನ್ನು ಮಾಡುವ ಮೊದಲು ನಮ್ಮಿಂದ ಅದು ಸಾಧ್ಯವಾಗದಿದ್ದರೆ, ಅಥವಾ ನಾವು ಆ ಪ್ರಯತ್ನದಲ್ಲಿ ಸೋತುಬಿಟ್ಟರೆ ಎಂಬಿತ್ಯಾದಿ ಭಯಗಳೇ ನಮ್ಮ ಕೆಲಸಕ್ಕೆ ಅಡ್ಡಗಾಲು ಹಾಕುತ್ತವೆ. ಆಗೋದು ಆಗಲಿ, ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಯೇ ಬಿಡೋಣ ಎಂದು ಆಲೋಚಿಸಿದಾಗ ಪೂರ್ವಗ್ರಹಪೀಡಿತ ಭಯಗಳು ನಮ್ಮಿಂದ ಸಹಜವಾಗಿ ದೂರಾಗುತ್ತವೆ.

ಎಷ್ಟೋ ಸಾರಿ ಮುಲ್ಲಾನ ಬಳಿ ಬಂದ ವ್ಯಕ್ತಿಯನ್ನು ಕಾಡಿದ ಮಂಚದ ಕೆಳಗಿನ ಇಲ್ಲದ ದೆವ್ವಗಳೇ ನಮ್ಮನ್ನು ಕೂಡ ಕಾಡುತ್ತಿರುತ್ತವೆ. ಇಂತಹ ಭಯವೆಂಬ ದೆವ್ವವನ್ನು ಮನದಿಂದ ಮೊದಲು ಹೊಡೆದೋಡಿಸುವುದೇ ಯಶಸ್ಸಿನ ಪ್ರಥಮ ಹೆಜ್ಜೆ. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಸಪ್ತಮಿ ಗಂ. 7-56 **ನಕ್ಷತ್ರ:** ಸ್ವಾತಿ ಗಂ. 8-33 **ಯೋಗ:** ಶುಕ್ಲ (ಶುಕ್ರ) ಗಂ. 15-49 **ಕರಣ:** ವಣಿಜ ಗಂ. 7-56, ಕರ್ಕಾಟಕ ಮಾಸದ 26 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-21 **ಸೂರ್ಯಾಸ್ತ:** 06-50
ಮುಸ್ಲಿಂ ದಿನಾಂಕ: 07 ಸಫರ್
ಅದೃಷ್ಟ ಸಂಖ್ಯೆ: 11, 9

ಮೇಷ: ನಾನಾ ರೀತಿಯಲ್ಲಿ ಉನ್ನತಿ ಗೋಚರಕ್ಕೆ ಬಂದರೂ ಹಣದ ಖರ್ಚು ವೆಚ್ಚಗಳ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ಆರೋಗ್ಯದ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ದಿನಸಿ ವ್ಯಾಪಾರಿಗಳಿಗೆ ಅಲ್ಪ ಲಾಭ.

ವೃಷಭ: ವ್ಯಾಪಾರ ವಿಷಯಗಳ ಸಂಬಂಧದಲ್ಲಿ ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ನಿಮ್ಮ ಅಂತರಂಗದ ಭಾವನೆಗಳಿಗೆ ಆದ್ಯತೆ ನೀಡಿ. ಚಾಲಕ ವೃತ್ತಿಯವರು ಸ್ವಂತ ವಾಹನ ಖರೀದಿಯ ದಾರಿಯನ್ನು ನೋಡಬಹುದು.

ಮಿಥುನ: ಈ ದಿನ ಸುತ್ತಮುತ್ತಲಿನ ಘಟನೆಗಳಿಂದ ನಿಮ್ಮ ಮನಸ್ಸು ಪರಿವರ್ತನೆಯಾಗಲಿದೆ. ಲೇವಾದೇವಿ ವ್ಯವಹಾರ ಮುಂದುವರಿಯುವುದು. ಯಂತ್ರಗಳ ರಿಪೇರಿ ಕೆಲಸಗಾರರಿಗೆ ಅಧಿಕ ವರಮಾನ ಇರಲಿದೆ.

ಕರ್ಕಾಟಕ: ಸಿನಿಮಾ ಕಲಾವಿದರಿಗೆ ಅವಕಾಶ ಒದಗಿ ಬರಲಿದೆ, ಅಭಿಮಾನಿಗಳನ್ನು ಸಂಪಾದಿಸಿಕೊಳ್ಳುವಿರಿ. ಗೃಹ ನಿರ್ಮಾಣ ಕಾರ್ಯಕ್ಕೆ ಆರ್ಥಿಕತೆಯ ಅಭಾವ ಎದುರಾಗಬಹುದು. ಮನಸ್ಸಿನಲ್ಲಿ ಹೆದರಿಕೆ ಮೂಡಲಿದೆ.

ಸಿಂಹ: ಅಣ್ಣ-ತಮ್ಮಂದಿರು ಒಂದೇ ವ್ಯವಹಾರದಲ್ಲಿ ಸಂಯಮದಿಂದ ನಡೆದುಕೊಂಡರೆ ವ್ಯವಹಾರಿಕವಾಗಿ ಲಾಭ ಹೊಂದಬಹುದು. ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವಿರಿ.

ಕನ್ಯಾ: ಬಹಳ ದಿನಗಳಿಂದ ಕಾಡುತ್ತಿದ್ದ ಭೂಮಿಗೆ ಸಂಬಂಧಿಸಿದ ಸಮಸ್ಯೆಯೊಂದು ನಿರಾತಂಕವಾಗಿ ಸ್ನೇಹಿತನಿಂದ ಬಗೆಹರಿಯುವುದು. ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಿರಿ.

ತುಲಾ: ಕೋರ್ಟು ಕಚೇರಿ ದೂರುಗಳಂತಹ ಗೊಡವೆಗಳಿಗೆ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ನಿಮ್ಮ ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ.

ವೃಶ್ಚಿಕ: ಉತ್ಪಾದಿಸಿದ ವಸ್ತುಗಳಿಗೆ ನಿಮ್ಮ ಪ್ರಾಂತ್ಯದಲ್ಲಿ ಹೆಚ್ಚಿನ ಬೇಡಿಕೆ ದೊರೆತು ಸಂತೋಷಕರ ವಾತಾವರಣ ನಿಮ್ಮದಾಗಲಿದೆ. ವ್ಯವಹಾರದಲ್ಲಿ ಬಹಳ ದಿನಗಳ ನಿರೀಕ್ಷಿತ ಬೆಳವಣಿಗೆ ಸಂಭವಿಸಬಹುದು.

ಧನು: ಎಂಜಿನಿಯರ್ ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಲು ತಯಾರಿ ನಡೆಸುವಿರಿ. ಮನೆಯಲ್ಲಿನ ವ್ಯವಹಾರಗಳಲ್ಲಿ ಕುಟುಂಬದವರಿಂದ ಈ ದಿನ ಸಕಾರಾತ್ಮಕವಾದ ಪ್ರತಿಕ್ರಿಯೆಗಳನ್ನು ಕಾಣುವಿರಿ.

ಮಕರ: ಹಲವು ಕಾರ್ಯದಲ್ಲಿ ದೇಹಾಯಾಸ ಮಾತ್ರ ನಿಮಗೆ ಸಿಗುವುದು. ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಮನೆಯಲ್ಲಿ ನೆಮ್ಮದಿಯ ವಾತಾವರಣ ಉಂಟಾಗಲಿದೆ.

ಕುಂಭ: ಹಾದಿಯಲ್ಲಿ ಹೋಗುವ ಸಮಸ್ಯೆಯನ್ನು ಮೈ ಮೇಲೆ ಎಳೆದುಕೊಳ್ಳುವಂಥ ಘಟನೆ ನಡೆಯುವುದು. ಹಿರಿಯರಿಂದ ಹಿತವಾಕ್ಯಗಳು, ಮಾರ್ಗದರ್ಶನ ಸಿಗುವುದು. ಪುಸ್ತಕ ಓದುವ ಹವ್ಯಾಸ ಹುಟ್ಟಲಿದೆ.

ಮೀನ: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡುಬರಲಿದೆ. ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನಹರಿಸಬೇಕು.

ಪದಬಂಧ 5770

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಆಗ ತಾನೇ ಕಡೆದು ತೆಗೆದ ಬೆಣ್ಣೆ (5)
4.ನಡುವೆ ಗರವಿದ್ದರೆ ಈ ಗೊಂದಲ! (4)
7.ಅನಿರೀಕ್ಷಿತ ಘಟನೆ (4)
8.ಹಜಾರವನ್ನು ಹೀಗೂ ಹೇಳುವರು (4)
10.ನೇಯ್ಗೆಯ ಯಂತ್ರ (2)
11.ಬಾಯಿಯಿಂದ ಸುರಿಯುತ್ತಿರುವ ಲಾಲಾರಸ (2)
12.ಪುಷ್ಪದಲ್ಲಿರುವ ಜೇನು (4)
14.ಕರದಲ್ಲಿರುವ ಶರೀರ! (4)
17.ಈತ ಗೆಲುವನ್ನು ಪಡೆದವನು (4)
18.ಕುದುರೆಯ ಮುಖ (5)

ಮೇಲಿಂದ ಕೆಳಕ್ಕೆ
1.ಅಪಹಾಸ್ಯ ಮಾಡುವವನು (3)
2.ಹಗರಣದಲ್ಲಿ ಸಿಕ್ಕ ದುಡ್ಡು (2)
3.ನೋಡುಗ ಇಲ್ಲಿದ್ದಾನೆ (3)
5.ರಸ ಒಸರುವ ನಾಲಿಗೆ (3)
6.ನಯವಾದ ಬಟ್ಟೆ (4)
7.ಆ ಮನೆ ಹತ್ತಿರ ಕಾಣಿಸಿದ ಗಜ (2)
9.ಮಕರಂದದ ಹತ್ತಿರ ಹಾರುತ್ತಿರುವ ನೊಣ (3)
10.ಹೆಣ್ಣು ದುಂಬಿಯಿದು (4)
12.ಮಧುರ ಫಲ ನೀಡುವ ವೃಕ್ಷ (2)
13.ದಡಿ ಹಿಡಿದು ನಿಂತಿರುವ ಟೊಣಪ (3)
15.ವರ್ತುಲಾಕಾರವಾಗಿರುವುದು ಅಥವಾ ಪ್ರದೇಶ (3)
16.ಗಿಲಿ ಗಿಲಿ ಶಬ್ದ ಮಾಡುವ ಮಕ್ಕಳ ಆಟಿಕೆ (3)
17.ಜವಾನನ ಹತ್ತಿರವಿರುವ ಮಂದಿ! (2)

1	■	■	2			3		■
4		5		■	■		■	6
	■		■	■	7			
■	■	8		9		■	■	
10		■	■		■	■	11	
	■	■	12			13	■	■
14		15		■	■		■	16
	■		■	■	17			
■	18					■	■	

5769ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಭಾರ 4.ಉದಕ
5.ಪರಿತಾಪ 6.ರಸದಾಳಿ
8.ವನಭೋಜನ 11.ಬಾಲರವಿ
13.ಮಧುಕರಿ 15.ತರಳೆ
16.ಹುರುಪು

ಮೇಲಿಂದ ಕೆಳಕ್ಕೆ:
1.ಆಲಾಪ 2.ಮಕರ
3.ಕದಳಿ 4.ಉಪವನ
7.ದಾಳ 9.ಜಡಿಮಳೆ
10.ಜಲ 11.ಬಾವಲಿ
12.ವಿತರ್ಕ 14.ರಿಕಾಪು

ಸುಡೊಕು 6155

3					8	2		
			4					3
1		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6154 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಕರ್ನಾಟಕ ಸರ್ಕಾರ ಭೂಮಿ ನೀಡಿಲ್ಲ: ರೈಲ್ವೆ ಸಚಿವ

ಪ್ರಜಾವಾಣಿ ವಾರ್ತೆ

ನವದೆಹಲಿ: ಧಾರವಾಡ–ಬೆಳಗಾವಿ ರೈಲು ಮಾರ್ಗ ಅಭಿವೃದ್ಧಿಗಾಗಿ ಅಗತ್ಯವಿರುವ ಜಮೀನನ್ನು ಕರ್ನಾಟಕ ಸರ್ಕಾರ ರೈಲ್ವೆಗೆ ಹಸ್ತಾಂತರಿಸಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

‘ಬೆಳಗಾವಿಯಿಂದ ಧಾರವಾಡವರೆಗೆ 73 ಕಿ.ಮೀ. ಉದ್ದದ ರೈಲು ಮಾರ್ಗವನ್ನು 50:50 ಪಾಲುದಾರಿಕೆಯಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಕರ್ನಾಟಕ ಸರ್ಕಾರ ಹಾಗೂ ರೈಲ್ವೆ ಯೋಜನಾ ವೆಚ್ಚದಲ್ಲಿ ತಲಾ ಶೇ 50 ಭರಿಸಬೇಕು. ಇದಕ್ಕೆ ಅಗತ್ಯವಿರುವ ಜಮೀನಿನನ್ನು ಕರ್ನಾಟಕ ಸರ್ಕಾರ ಉಚಿತವಾಗಿ ನೀಡಬೇಕಿದೆ’ ಎಂದು ಅವರು ಲೋಕಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಈ ಕುರಿತು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಶ್ನೆ ಕೇಳಿದ್ದರು.

ಯೋಜನೆಗೆ ಅಗತ್ಯವಿರುವ ಭೂಮಿಯ ಸ್ವಾಧೀನಪಡಿಸಿಕೊಳ್ಳುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಕೆಐಎಡಿಬಿಗೆ ವಹಿಸಿದೆ. 888 ಎಕರೆ ಒದಗಿಸುವಂತೆ ಕೆಐಎಡಿಬಿಗೆ ಬೇಡಿಕೆಯನ್ನೂ ಸಲ್ಲಿಸಲಾಗಿದೆ’ ಎಂದು ಸಚಿವ ವೈಷ್ಣವ್ ವಿವರಿಸಿದ್ದಾರೆ.

ನಾಟಿ ಯಂತ್ರ ಚಾಲನೆ ಮಾಡಿ, ರೈತರೊಂದಿಗೆ ಕುಳಿತು ಊಟ ಮಾಡಿದ ಕೇಂದ್ರ ಸಚಿವ

ಭತ್ತದ ಪೈರು ನಾಟಿ ಮಾಡಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಸೀತಾಪುರ ಗ್ರಾಮದ ಬಳಿಯ ರೈತರ ಜಮೀನಿನಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು, ಭತ್ತದ ಪೈರು ನಾಟಿ ಮಾಡಿ ಕೃಷಿ ಚಟುವಟಿಕೆಯನ್ನು ಭಾನುವಾರ ಹುರಿದುಂಬಿಸಿದರು.

ಬಿಳಿ ಅಂಗಿ, ಬಿಳಿ ಪಂಚೆ ತೊಟ್ಟಿದ್ದ ಕುಮಾರಸ್ವಾಮಿ, ಪಂಚೆ ಎತ್ತಿಕಟ್ಟಿ ರೈತ ಲಕ್ಷ್ಮಣ ಅವರ ಗದ್ದೆಯಲ್ಲಿ 15 ನಿಮಿಷ ಭತ್ತ ನಾಟಿ ಮಾಡಿ, ರೈತರ ಗಮನಸೆಳೆದರು.

ಜೆಡಿಎಸ್ ಯುವ ಘಟಕದ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಸಾಥ್ ನೀಡಿದರು. 100 ಹೆಣ್ಣಾಳು ಮತ್ತು 30 ಗಂಡಾಳುಗಳು ಕುಮಾರಸ್ವಾಮಿ ಅವರೊಂದಿಗೆ ನಾಟಿ ಕಾರ್ಯದಲ್ಲಿ ಪಾಲ್ಗೊಂಡರು.

ನಾಟಿ ಕಾರ್ಯಕ್ಕೂ ಮುನ್ನ ಸಮೀಪದಲ್ಲಿ ಹರಿಯುತ್ತಿದ್ದ ಕಾವೇರಿ ನದಿಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದರು. ಈಶ್ವರ ದೇಗುಲಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಸೀತಾಪುರ ಗ್ರಾಮದ ಬಳಿ ರೈತರೊಂದಿಗೆ ಕೇಂದ್ರ ಸಚಿವ ಎಚ್‌ಡಿ. ಕುಮಾರಸ್ವಾಮಿ ಅವರು ಭತ್ತದ ಪೈರು ನಾಟಿ ಮಾಡಿದರು —ಪ್ರಜಾವಾಣಿ ಚಿತ್ರ

ನಾಟಿ ಯಂತ್ರವನ್ನು ಚಾಲನೆ ಮಾಡಿ, ರೈತರನ್ನು ಬೆರಗುಗೊಳಿಸಿದರು. ನಂತರ ರೈತರೊಂದಿಗೆ ಬದುವಿನ ಮೇಲೆ ಕುಳಿತು ಊಟ ಮಾಡಿ, ಅವರ ಸಮಸ್ಯೆಗಳನ್ನು ಆಲಿಸಿದರು.

2018ರಲ್ಲಿ ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಆ.11ರಂದು ಇದೇ ರೈತ ಲಕ್ಷ್ಮಣ ಅವರ ಗದ್ದೆಯಲ್ಲಿ ನಾಟಿ ಮಾಡಿದ್ದರು.

ಈ ವೇಳೆ ಮಾತನಾಡಿದ ಕುಮಾರಸ್ವಾಮಿ, ‘2018ರಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಕೆಆರ್‌ಎಸ್ ಜಲಾಶಯ ತುಂಬಿತ್ತು. ಈ ವರ್ಷವೂ ಅಣೆಕಟ್ಟೆ ಭರ್ತಿಯಾಗಿದೆ. ಈ ಸಂತಸದ ಸಮಯದಲ್ಲಿ ಅನ್ನದಾತರಿಗೆ ಆತ್ಮಸ್ಥೈರ್ಯ ತುಂಬಲು ನಾಟಿ ಕಾರ್ಯದಲ್ಲಿ ಪಾಲ್ಗೊಂಡಿದ್ದೇನೆ. ರೈತರೊಂದಿಗೆ ಸದಾ ಇರುತ್ತೇನೆ’ ಎಂದರು.

ಶಾಸಕ ಎಚ್‌.ಟಿ. ಮಂಜು, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕ ಕೆ.ಅನ್ನದಾನಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ್ ಹಾಗೂ ಮುಖಂಡರು ಪಾಲ್ಗೊಂಡಿದ್ದರು.

‘ಸಿ.ಎಂ ಕುರ್ಚಿ ಅಲುಗಾಡಲ್ಲ, ಕುಳಿತವರು ಅಲುಗಾಡುವರು’

ಮಂಡ್ಯ: ‘ಮುಖ್ಯಮಂತ್ರಿ ಕುರ್ಚಿ ಎಂದಿಗೂ ಅಲುಗಾಡಲ್ಲ, ಅದು ಕೆಂಗಲ್ ಹನುಮಂತಯ್ಯನವರು ಕಟ್ಟಿರುವ ವಿಧಾನಸೌಧದ ಕುರ್ಚಿ. ಅದರಲ್ಲಿ ಕುಳಿತವರು ಅಲುಗಾಡುತ್ತಾರೆ’ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ನನ್ನ ಕುರ್ಚಿ ಅಲುಗಾಡಲ್ಲ’ ಎಂಬ ಹೇಳಿಕೆಗೆ ಈ ರೀತಿ ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಜನರಿಗೆ ತಿಳಿಸಲು ಪಾದಯಾತ್ರೆ ಮಾಡಿದ್ದೇವೆ. ಮುಂದೆ ಕಾನೂನು ರೀತಿಯ ಹೋರಾಟವೂ ನಡೆಯುತ್ತದೆ. ಸಂಪದ್ಭರಿತ ಖಜಾನೆಯನ್ನು ಈ ಸರ್ಕಾರ ಲೂಟಿ ಮಾಡುತ್ತಾ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿಲ್ಲ’ ಎಂದು ಕಿಡಿಕಾರಿದರು.

‘ಎಚ್‌ಡಿಕೆಯನ್ನು ಮೆಂಟಲ್ ಆಸ್ಪತ್ರೆಗೆ ಸೇರಿಸಬೇಕು’ ಎಂಬ ಡಿಕೆಶಿ ಹೇಳಿಕೆಗೆ, ‘ಯಾರು ಮೆಂಟಲ್ ಆಸ್ಪತ್ರೆಗೆ ಹೋಗುತ್ತಾರೆ ನೋಡೋಣ. ನಾವು ಮೆಂಟಲ್ ಆಸ್ಪತ್ರೆಗೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಬಹುದು. ಆದರೆ, ಅವರು ಹೋಗುವ ಜಾಗದಲ್ಲಿ ಯಾವ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಾರೆಯೋ ನೋಡೋಣ ಬನ್ನಿ’ ಎಂದು ಲೇವಡಿ ಮಾಡಿದರು.

ಸುದ್ದಿ 2 ನಿಮಿಷ

ಸ್ಥಾನಕ್ಕೆ ಕುತ್ತು ಬಂದಿದ್ದರಿಂದ ಜಾತಿಯ ಲೇಪನ: ಜೋಶಿ ಟೀಕೆ

ಹುಬ್ಬಳ್ಳಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ ಸ್ಥಾನ ಹೋಗುತ್ತದೆ ಎಂಬುದು ಗೊತ್ತಾದ ನಂತರ ಅದಕ್ಕೆ ಜಾತಿಯ ಲೇಪನ ಮಾಡುತ್ತಿದ್ದಾರೆ’ ಎಂದು ಕೇಂದ್ರ ನಾಗರಿಕ ಸರಬರಾಜು ಮತ್ತು ಆಹಾರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಿಂದುಳಿದ ವರ್ಗಗಳ ನಾಯಕನನ್ನು ತೆಗೆದು ಬೇರೆಯವರನ್ನು ಸಿ.ಎಂ ಮಾಡುವಂತೆ ನಾವು ಹೇಳಿಲ್ಲ.

ಸಿದ್ದರಾಮಯ್ಯ ಅವರು ಭ್ರಷ್ಟಾಚಾರದಲ್ಲಿ ತೊಡಗಿದ್ದು, ರಾಜೀನಾಮೆ ಕೊಡಬೇಕು ಎಂಬುದಷ್ಟೇ ನಮ್ಮ ಆಗ್ರಹ. ಹಿಂದುಳಿದ ವರ್ಗದ ಎಸ್.ಬಂಗಾರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಅವಮಾನಿಸಿದ್ದು ಕಾಂಗ್ರೆಸ್ ಪಕ್ಷ’ ಎಂದು ದೂರಿದರು.

‘ಸರ್ಕಾರದಲ್ಲಿ ಇದ್ದವರು ಆಡಳಿತ ನಡೆಸಬೇಕು, ಹೋರಾಟ ಮಾಡುವುದು ವಿರೋಧ ಪಕ್ಷದ ಕೆಲಸ’ ಎಂದರು.

‘ಮುಖ್ಯಮಂತ್ರಿ ಕುಟುಂಬದವರು ನಿಂಗ ಎಂಬುವರಿಂದ ಜಾಗ ಖರೀದಿಸಿದ್ದಾಗಿ ಹೇಳುತ್ತಿದ್ದರು. ಆ ಜಾಗ ನಿಂಗ ಅವರದ್ದೂ ಅಲ್ಲ ಎಂಬ ಮಾಹಿತಿ ಈಗ ಬಹಿರಂಗವಾಗಿದೆ. ಸಿ.ಎಂ ಅವರ ಪತ್ನಿ 14 ನಿವೇಶನಗಳನ್ನು ಪಡೆದಿರುವುದರ ಜತೆಗೆ ಅವರು ಬೆಂಬಲಿಗರಿಗೆ ನಿವೇಶನಗಳನ್ನು ‘ಮುಡಾ’ದಿಂದ ಕೊಡಿಸಿದ್ದಾರೆ’ ಎಂದು ಆರೋಪಿಸಿದರು.

ರೌಡಿಶೀಟರ್ ಕಾಲಿಗೆ ಪೊಲೀಸರ ಗುಂಡೇಟು

ಹಲಗೂರು (ಮಂಡ್ಯ ಜಿಲ್ಲೆ): ವಿವಿಧ ಕೊಲೆ ಪ್ರಕರಣಗಳ ಆರೋಪಿ ಮಳವಳ್ಳಿ ತಾಲ್ಲೂಕು ಹಲಗೂರು ಸಮೀಪದ ಬಾಳೆ ಹೊನ್ನಿಗ ಗ್ರಾಮದ ಮುತ್ತುರಾಜು ಅಲಿಯಾಸ್ ಡಕ್ಕ ಎಂಬಾತನ ಮೇಲೆ ಪೊಲೀಸರು ಭಾನುವಾರ ಬೆಳಿಗ್ಗೆ ಗುಂಡಿನ ದಾಳಿ ನಡೆಸಿ ಆತನನ್ನು ಬಂಧಿಸಿದ್ದಾರೆ.

‘ಹಲಗೂರು, ಕಿರುಗಾವಲು, ಹಾರೋಹಳ್ಳಿ ಮತ್ತು ಮಂಡ್ಯ ಪೂರ್ವ ಠಾಣೆಗಳಲ್ಲಿರುವ 11 ಕೊಲೆ ಪ್ರಕರಣಗಳು ಮತ್ತು ಇತರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಈತ ಹಲವು ದಿನಗಳಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

ಆತ, ಮಂಡ್ಯದಿಂದ ಮಳವಳ್ಳಿಗೆ ಬೈಕ್‌ನಲ್ಲಿ ಬರುತ್ತಿರುವ ಮಾಹಿತಿ ಪಡೆದ ಪೊಲೀಸರು ಮಾರ್ಗ ಮಧ್ಯೆ ಅಡ್ಡಗಟ್ಟಿದ್ದಾರೆ. ಆರೋಪಿ ಮುಖ್ಯ ರಸ್ತೆಯಿಂದ ಜಮೀನುಗಳಿಗೆ ಸಂಪರ್ಕಿಸುವ ಕಚ್ಚಾ ರಸ್ತೆಯಲ್ಲಿ ಹೋಗಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಬೆನ್ನು ಹತ್ತಿದ ಪೊಲೀಸರು ಸುತ್ತುವರಿದಾಗ ಕಾನ್‌ಸ್ಟೆಬಲ್ ಸಿದ್ದರಾಜು ಅವರಿಗೆ ಮಾರಕಾಸ್ತ್ರಗಳಿಂದ ಬಲಗೈಗೆ ಗಾಯಪಡಿಸಿದ್ದಾನೆ. ಆಗ, ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಿದ್ದಾರೆ. ಆಗಲೂ ಪರಾರಿಯಾಗಲು ಯತ್ನಿಸಿದ ಮುತ್ತುರಾಜ್ ಮೇಲೆ ಸಿಪಿಐ ಬಿ.ಎಸ್. ಶ್ರೀಧರ್ ಗುಂಡಿನ ದಾಳಿ ನಡೆಸಿದ್ದಾರೆ.

ಸಿಂಧನೂರು: ಬಾಂಗ್ಲಾ ಪುನರ್ವಸತಿ ಕ್ಯಾಂಪ್‌ನ ಐವರಿಗೆ ಪೌರತ್ವ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಕೇಂದ್ರ ಸರ್ಕಾರ ಈಚೆಗೆ ಜಾರಿಗೆ ತಂದಿರುವ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ ತಾಲ್ಲೂಕಿನ ಪುನರ್ವಸತಿ ಕ್ಯಾಂಪ್‌ನ ಐವರು ಬಾಂಗ್ಲಾ ನಿರಾಶ್ರಿತರಿಗೆ ಭಾರತದ ಪೌರತ್ವ ಲಭಿಸಿದೆ.

ಫೆಬ್ರುವರಿಯಲ್ಲಿ ರಾಜ್ಯಪತ್ರ ಹೊರಡಿಸಿ ನಿರಾಶ್ರಿತರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅದರಂತೆ ಅಂಚೆ ಇಲಾಖೆಯ ಅಧೀಕ್ಷಕರು ಸೇರಿ ರೈಲ್ವೆ ವ್ಯವಸ್ಥಾಪಕ, ಗುಪ್ತಚರ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ನಿರಾಶ್ರಿತರ ವಾಸಸ್ಥಳ ಹಾಗೂ ಮತ್ತಿತರ ಅಗತ್ಯ ದಾಖಲೆ ಪರಿಶೀಲಿಸಿ ಪೌರತ್ವಕ್ಕೆ ಶಿಫಾರಸು ಮಾಡಿತ್ತು.ಕರ್ನಾಟಕದಲ್ಲಿ ಮೊದಲ ಬಾರಿಗೆ ಆರ್.ಎಚ್.ಕ್ಯಾಂಪ್ ನಂ.2ರ ರಾಮಕೃಷ್ಣನ್ ಅಧಿಕಾರಿ, ಸುಕುಮಾರ ಮಂಡಲ್, ಬಿಪ್ರದಾಸ್ ಗೋಲ್ದಾರ್, ಅದ್ವೈತ್, ಆರ್.ಎಚ್.ಕ್ಯಾಂಪ್ ನಂ.4ರ ಜಯಂತ್ ಮಂಡಲ್ ಅವರಿಗೆ ಕರ್ನಾಟಕ ಗೃಹ ಸಚಿವಾಲಯದ ಜನಗಣತಿ ಕಾರ್ಯಾಚರಣೆ ಹಾಗೂ ನಾಗರಿಕ ನೋಂದಣಿ ನಿರ್ದೇಶನಾಲಯ ಪೌರತ್ವ ಪ್ರಮಾಣ ಪತ್ರ ನೀಡಿದೆ.

‘ತಾಲ್ಲೂಕಿನಲ್ಲಿ ಐದು ಬಾಂಗ್ಲಾ ಕ್ಯಾಂಪ್‌ಗಳಿದ್ದು, 146 ಜನ ನಿರಾಶ್ರಿತರು ಸಿಎಎ ಅಡಿ ಪೌರತ್ವಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದಾರೆ’ ಎಂದು ನಿಖಿಲ್ ಭಾರತ್ ಬಂಗಾಲಿ ಸಮನ್ವಯ ಸಮಿತಿಯ ಪ್ರಶೇನ್ ರಫ್ತಾನ್ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಕಳವಳ

‘ವಿದೇಶಗಳಲ್ಲಿ ಹಿಂದೂಗಳ ಸ್ಥಿತಿ ಗಂಭೀರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂಗಳನ್ನು ಒಂದೊಂದೇ ದೇಶದಿಂದ ಸಮಾಪ್ತಗೊಳಿಸುವ ಕಾರ್ಯ ನಡೆಯುತ್ತಿದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಕಳವಳ ವ್ಯಕ್ತಪಡಿಸಿದರು.

ಭಾನುವಾರ ವಿಶ್ವ ಹಿಂದು ಪರಿಷತ್‌ನ ದಕ್ಷಿಣ ಪ್ರಾಂತ ಕಾರ್ಯಾಲಯ ‘ಧರ್ಮಶ್ರೀ’ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಂದೂಗಳು ನೂರಾರು ವರ್ಷಗಳಿಂದ ಯಾವ ದೇಶಕ್ಕೆ ವಲಸೆ ಹೋದರೂ ಅಲ್ಲಿನ ಸಂಸ್ಕೃತಿಯ ಜೊತೆ ಹೊಂದಿಕೊಂಡು, ಆ ಸಂಸ್ಕೃತಿಯನ್ನು ಗೌರವಿಸಿಕೊಂಡು ಬದುಕುವುದನ್ನು ರೂಢಿಸಿಕೊಂಡಿದ್ದಾರೆ. ಇಂದು ಅನೇಕ ದೇಶಗಳಲ್ಲಿ ಹಿಂದುಗಳ ಮಾನವಹಕ್ಕುಗಳ ಸ್ಥಿತಿ ಗಂಭೀರವಾಗಿದೆ. ಶಾಂತಿದೂತರು ಎಂದೆನಿಸಿಕೊಂಡವರು ಅಶಾಂತಿ ಹರಡುತ್ತಿದ್ದಾರೆ. ಸೇವೆ ಮಾಡುತ್ತೇವೆಂದು ಹೊರಟವರು ಮತಾಂತರ ಮಾಡುತ್ತಿದ್ದಾರೆ’ ಎಂದು ತಿಳಿಸಿದರು.

ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಕಾರ್ಯಾಲಯ ‘ಧರ್ಮಶ್ರೀ ಭವನ’ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಲು ವಿಶ್ವ ಹಿಂದೂ ಪರಿಷದ್ ಅಂತರರಾಷ್ಟ್ರೀಯ ಕಾರ್ಯಾಧ್ಯಕ್ಷ ಆಲೋಕ್ ಕುಮಾರ್, ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಭಾನುವಾರ ಬೆಂಗಳೂರಿನ ಶಂಕರಪುರಕ್ಕೆ ಆಗಮಿಸಿದ ಸಂದರ್ಭ —ಪ್ರಜಾವಾಣಿ ಚಿತ್ರ

‘ಬಾಂಗ್ಲಾದ ಹಿಂದುಗಳನ್ನು ರಕ್ಷಣೆ ಮಾಡಲು ಜಗತ್ತಿನ ಎಲ್ಲರೂ ಧ್ವನಿ ಎತ್ತಬೇಕು, ಭಾರತದ ಹಿಂದು ಸಮಾಜ ಇದಕ್ಕಾಗಿ ತನ್ನಿಂದ ಸಾಧ್ಯವಿರುವುದನ್ನೆಲ್ಲ ಮಾಡಬೇಕು. ಭಾರತದ ಸರ್ಕಾರವು ಬಾಂಗ್ಲಾ ದೇಶದಲ್ಲಿರುವ ಹಿಂದುಗಳು, ಬೌದ್ಧರು ಸೇರಿ ಎಲ್ಲ ಅಲ್ಪಸಂಖ್ಯಾತರ ಜೀವನ, ಮಾನ, ಪ್ರಾಣ, ಆಸ್ತಿಗಳ ರಕ್ಷಣೆ ಮಾಡಲು ಮುಂದಾಗಬೇಕು’ ಎಂದು ಆಗ್ರಹಿಸಿದರು.

ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ ಮಾತನಾಡಿ, ‘ಬಾಂಗ್ಲಾದ ಪರಿಸ್ಥಿತಿಯ ಬಗ್ಗೆ ಆತಂಕ, ಕಳಕಳಿ ಹೊಂದಿಲ್ಲದವರು ಮನುಷ್ಯರೇ ಅಲ್ಲ. ಅಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಮೃಗೀಯ ವರ್ತನೆ ನಿಲ್ಲಬೇಕು. ಅಲ್ಲಿನ ಸರ್ಕಾರವು ತಕ್ಷಣ ಹಿಂದು ಸಮಾಜದವರ ರಕ್ಷಣೆಗೆ ಮುಂದಾಗಬೇಕು’ ಎಂದು ಆಗ್ರಹಿಸಿದರು.

‘ಹಿಂದೂಗಳನ್ನು ಜಾತಿ ಹೆಸರಿನಲ್ಲಿ ವಿಭಜಿಸಲಾಗುತ್ತಿದ್ದು, ಅದಕ್ಕೆತಕ್ಕ ಉತ್ತರ ನೀಡಿ ಒಗ್ಗಟ್ಟು ಪ್ರದರ್ಶಿಸಬೇಕು. ಅಸ್ಪೃಶ್ಯತೆ ಹೋಗಲಾಡಿಸಬೇಕು. ಜೈನ, ಬೌದ್ಧ ಮತ್ತು ಸಿಖ್ಖರ ಜೊತೆ ನಿರಂತರವಾಗಿ ಸಂವಾದವನ್ನಿಟ್ಟುಕೊಂಡು ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯಬೇಕು’ ಎಂದು ಸಲಹೆ ನೀಡಿದರು.

ವಿಶ್ವ ಹಿಂದೂ ಪರಿಷದ್ ಅಂತರರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್,ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಜಗನ್ನಾಥ ಶಾಸ್ತ್ರಿ, ಹಿರಿಯ ಕಾರ್ಯಕರ್ತ ವೈ.ಕೆ. ರಾಘವೇಂದ್ರ ರಾವ್, ವಿಶ್ವ ಹಿಂದೂ ಪರಿಷತ್ ಉಪಾಧ್ಯಕ್ಷೆ ವಿಜಯಲಕ್ಷ್ಮಿ ದೇಶಮಾನೆ, ಕ್ಷೇತ್ರೀಯ ಪ್ರಚಾರಕ್ ಸುಧೀರ್, ಕ್ಷೇತ್ರೀಯ ಸಂಘಚಾಲಕ ಡಾ.ಪಿ.ವಾಮನ್ ಶೆಣೈ ಭಾಗವಹಿಸಿದ್ದರು.

ಬಾಂಗ್ಲಾದ ಇಬ್ಬರು ಪರಾರಿ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ದಿಬ್ಬೂರು ಬಳಿಯ ವಿದೇಶಿ ಮಹಿಳೆಯರ ಬಂಧನ ಕೇಂದ್ರದಿಂದ ಶನಿವಾರ ರಾತ್ರಿ ಬಾಂಗ್ಲಾದೇಶದ ಇಬ್ಬರು ಮಹಿಳೆಯರು ತಪ್ಪಿಸಿಕೊಂಡಿದ್ದಾರೆ.

ರೇಷ್ಮಾ (45), ಲಿಜಾ ಶೈಕಾ (25) ಪರಾರಿಯಾದ ಮಹಿಳೆಯರು. ವೀಸಾ ಅವಧಿ ಮುಗಿದ ಕಾರಣ ಎರಡು ತಿಂಗಳ ಹಿಂದೆ ಇವರನ್ನು ಕೇಂದ್ರಕ್ಕೆ ಕರೆತರಲಾಗಿತ್ತು. ವೀಸಾ ಅವಧಿ ಮುಗಿದವರು ಮತ್ತು ಅಕ್ರಮವಾಗಿ ದೇಶದೊಳಗೆ ನುಸುಳಿದ 21 ವಿದೇಶಿ ಮಹಿಳೆಯರು ಸದ್ಯ ಈ ಕೇಂದ್ರದಲ್ಲಿದ್ದಾರೆ.

‘ಮಹಿಳೆಯರು ವಾಸವಿದ್ದ ಕೋಣೆಯಲ್ಲಿ ಪರಿಶೀಲನೆ ನಡೆಸಿದಾಗ ಅವರು ಚಾವಣಿಯಿಂದ ಹಾರಿ ತಪ್ಪಿಸಿಕೊಂಡು ಹೋಗಿರುವುದು ಗಮನಕ್ಕೆ ಬಂದಿದೆ’ ಎಂದು ಕೇಂದ್ರದ ಕಾರ್ಯದರ್ಶಿ ಜಿ.ಬಿ.ಮಾರೆಪ್ಪ ನಗರ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

‘ಕನ್ನಡಕ್ಕೆ ಅನ್ವಯಿಸುವ ನಿಯಮ ಹಿಂದಿಗೂ ಅನ್ವಯ ಆಗುತ್ತದೆ. ಯಾವುದೇ ಭಾಷೆ ಹೇರಲಾಗದು’

ಕನ್ನಡ ಕಲಿಯಿರಿ: ಹಿಂದಿ ಭಾಷಿಕರಿಗೆ ಭೈರಪ್ಪ ಸಲಹೆ

ಮೈಸೂರು: ‘ಕರ್ನಾಟಕದಲ್ಲಿ ಹಿಂದಿ ಭಾಷಿಕರ ಬಗ್ಗೆ ತಿರಸ್ಕಾರ ಮನೋಭಾವ ಇದೆ. ಅದು ಹೋಗಬೇಕಾದರೆ ಕನ್ನಡ ಕಲಿಯಿರಿ’ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಸಲಹೆ ನೀಡಿದರು.

ನಗರದ ಕೇಂದ್ರೀಯ ಹಿಂದಿ ಸಂಸ್ಥಾನದ ಆವರಣದಲ್ಲಿ ಭಾನುವಾರ ಸಂಜೆ ನಡೆದ ಗೋಸ್ವಾಮಿ ತುಳಸಿದಾಸ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

‘ಭಾರತದಲ್ಲಿ ಹಿಂದಿಯೂ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿಯೇ ಶಿಕ್ಷಣ ನೀಡಬೇಕು ಎಂಬ ಆಗ್ರಹವಿದೆ. ಆದರೆ, ಎಂಜಿನಿಯರ್, ಡಾಕ್ಟರ್ ಆಗಬೇಕು ಎಂದುಕೊಳ್ಳುವವರು ಮಾತೃ ಭಾಷೆಯಲ್ಲೇ ಓದಿದರೆ ಆಗುವುದಿಲ್ಲ. ಏಕೆಂದರೆ ನಮ್ಮ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನದ ಪಠ್ಯ ಲಭ್ಯವಿಲ್ಲ. ಸ್ಥಳೀಯ ಭಾಷೆಯಲ್ಲೇ ಜ್ಞಾನ ಸೃಷ್ಟಿಯಾದಾಗ ಮಾತ್ರ ಆ ಭಾಷೆ ಬೆಳೆಯಲು ಸಾಧ್ಯ. ಹಿಂದಿಯನ್ನು ಒಂದು ಭಾಷೆಯಾಗಿ ಕಲಿಸಿದರೆ ಅದು ಬೆಳೆಯುತ್ತದೆ’ ಎಂದರು.



ಎಸ್‌ಎಲ್ ಭೈರಪ್ಪ

ಹಿಂದಿ ಪ್ರಕಾಶಕರಿಂದ ವಂಚನೆ: ‘ಹಿಂದಿಯಲ್ಲಿನ ಕೆಲವು ಪ್ರಕಾಶಕರು ಲೇಖಕರಿಗೆ ಸೂಕ್ತ ಸಂಭಾವನೆ ನೀಡದೆ ವಂಚಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ನನ್ನ ಕೆಲವು ಕೃತಿಗಳು ಕನ್ನಡದಲ್ಲಿ 40 ಮುದ್ರಣ ಕಂಡಿವೆ. ಕೃತಿಯು ಪ್ರತಿ ಬಾರಿ ಮುದ್ರಣಗೊಂಡಾಗಲೂ ಪ್ರಕಾಶಕರು ಇಂತಿಷ್ಟು ಸಂಭಾವನೆ ಕೊಡುತ್ತಿದ್ದಾರೆ. ಪುಸ್ತಕ ಮಾರಾಟಕ್ಕಾಗಿ ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನೂ ಕಟ್ಟುತ್ತಿದ್ದಾರೆ. ಆದರೆ, ಹಿಂದಿಗೆ ಅನುವಾದವಾಗಿ ಪ್ರಕಟಗೊಂಡ ಕೃತಿಯೊಂದಕ್ಕೆ ಹಿಂದಿಯ ಪ್ರಕಾಶಕರು ಆರಂಭದಲ್ಲಿ ₹25 ಸಾವಿರ ಸಂಭಾವನೆ ಕೊಟ್ಟಿದ್ದು ಬಿಟ್ಟರೆ ಮತ್ತೆ ಕೊಡಲಿಲ್ಲ. ಸಾವಿರಾರು ಸಂಖ್ಯೆಯಲ್ಲಿ ಕೃತಿಗಳು ಮಾರಾಟ ಆಗಿದ್ದರೂ ಅದನ್ನು ಮರೆಮಾಚಿದ್ದಾರೆ. ಕೇಳಿದರೆ ಪುಸ್ತಕ ಮಾರಾಟವೇ ಆಗಿಲ್ಲ ಎಂದು ಸಬೂಬು ಹೇಳುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

599 ಎಕರೆ ಭೂಮಿ ಮರುವಶಕ್ಕೆ ಸೂಚನೆ

ಒಂದನೇ ಪುಟದಿಂದ...

ಮಧ್ಯಂತರ ಅರ್ಜಿ ಹಿಂಪಡೆಯಬೇಕು: ‘ಈ ಭೂಮಿಯನ್ನು ಸರ್ಕಾರಿ ಇಲಾಖೆ, ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳಿಗೆ ಎಚ್‌ಎಂಟಿ ಮಾರಾಟ ಮಾಡಿರುವುದು ಅಕ್ರಮ. ಈ ಸಂಬಂಧ ಸಂಪುಟ ಸಭೆಯ ಗಮನಕ್ಕೂ ತಾರದೆ 2020ರಲ್ಲಿ ಡಿನೋಟಿಫೈ ಮಾಡಲು ಅನುಮತಿ ಕೋರಿ ಅರಣ್ಯ ಇಲಾಖೆಯು ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ. ಇದು ಅನುಮಾನಗಳಿಗೆ ಕಾರಣವಾಗಿದೆ. ಹೀಗಾಗಿ, ಮಧ್ಯಂತರ ಅರ್ಜಿ ಹಿಂಪಡೆಯಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಕುರಿತು ತನಿಖೆ ನಡೆಸಬೇಕು’ ಎಂದೂ ಸೂಚಿಸಿದ್ದಾರೆ.

ಅರಣ್ಯ ಸಂರಕ್ಷಣಾ ಕಾಯ್ದೆ ಸೆಕ್ಷನ್ 64ಎ ಅಡಿಯಲ್ಲಿ ಈ ಹಿಂದೆ ಪ್ರಕ್ರಿಯೆ ನಡೆದು, ಭೂಮಿ ತೆರವಿಗೆ ಆದೇಶ ನೀಡಲಾಗಿತ್ತು. ಆದರೆ, ಈವರೆಗೂ ಕ್ರಮ ವಹಿಸದ ಅರಣ್ಯಾಧಿಕಾರಿಗಳ ನಡೆಯ ಬಗ್ಗೆಯೂ ತನಿಖೆ ನಡೆಸಬೇಕು ಎಂದಿದ್ದಾರೆ.

‘ಒಮ್ಮೆ ಅರಣ್ಯವಾಗಿದ್ದರೆ, ಯಾವಾಗಲೂ ಅರಣ್ಯವೇ. ನಾಗರಿಕ ಹಕ್ಕುಗಳಿಗಿಂತ ಪರಿಸರವು ಮುಖ್ಯ’ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ, ಎಚ್‌ಎಂಟಿ ವಶದಲ್ಲಿರುವ ಮತ್ತು ಎಚ್‌ಎಂಟಿ ವಿವಿಧ ಸಂಸ್ಥೆ, ಇಲಾಖೆ, ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವ ಭೂಮಿ ಅರಣ್ಯವೇ ಆಗಿದೆ. ಈ ಜಮೀನಿನ ಪೈಕಿ ಎಚ್‌ಎಂಟಿ ಮಾರಾಟ ಮಾಡಿರುವ 201 ಎಕರೆಗೆ ಸಂಬಂಧಿಸಿದಂತೆ 64ಎ ಪ್ರಕ್ರಿಯೆಯೂ ಆಗಿದ್ದು, ಆ ಆದೇಶದ ವಿರುದ್ಧ ಎಚ್‌ಎಂಟಿ ಈವರೆಗೆ ಮೇಲ್ಮನವಿ ಸಲ್ಲಿಸಿಲ್ಲ. ಹೀಗಾಗಿ, ಎಚ್‌ಎಂಟಿ ವಶದಲ್ಲಿರುವ ಮತ್ತು ಮಾರಾಟ ಮಾಡಿರುವ ಭೂಮಿ ಅರಣ್ಯವೇ ಆಗಿದೆ ಎಂದೂ ಸಚಿವರು ಅಭಿಪ್ರಾಯಪಟ್ಟಿದ್ದಾರೆ.

‘ದಾನ ನೀಡಲು ಅವಕಾಶ ಇಲ್ಲ’

ಒಂದನೇ ಪುಟದಿಂದ

ಆದರೆ, ಈ ಜಮೀನನ್ನು ಅಂದಿನ ಬೆಂಗಳೂರು ನಗರ ಜಿಲ್ಲಾಧಿಕಾರಿ ಹನುಮಾನ್ ಅವರು 1963ರಲ್ಲಿ ಎಚ್‌ಎಂಟಿಗೆ ದಾನಪತ್ರದ ಮೂಲಕ ವರ್ಗಾವಣೆ ಮಾಡಿದ್ದಾರೆ ಎನ್ನಲಾಗಿದೆ. ಈ ದಾನಪತ್ರದ ಕುರಿತಂತೆ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ. ಅಲ್ಲದೆ, ಅರಣ್ಯೇತರ ಉದ್ದೇಶಕ್ಕೆ ಡಿನೋಟಿಫೈ ಕೂಡ ಆಗಿಲ್ಲ’ ಎಂದು ಖಂಡ್ರೆ ತಿಳಿಸಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಲಘು ಭೂಕಂಪನ

ಬೀದರ್: ಜಿಲ್ಲೆಯಲ್ಲಿ ಶನಿವಾರ ಸಂಜೆ ಲಘು ಭೂಕಂಪನ ಸಂಭವಿಸಿದೆ. ಭೂಕಂಪನದ ತೀವ್ರತೆ 2.6ರಷ್ಟು ರಿಕ್ಟರ್ ಮಾಪಕದಲ್ಲಿ ದಾಖಲಾಗಿದ್ದು, ಜನರಿಗೆ ಅದರ ಅನುಭವ ಉಂಟಾಗಿಲ್ಲ. ಹುಮನಾಬಾದ್ ತಾಲ್ಲೂಕಿನ ಸೀತಾಳಗೇರಾ, ತಾಳಮಡಗಿ ಹಾಗೂ ಬೀದರ್ ತಾಲ್ಲೂಕಿನ ಸಿರಕಟನಳ್ಳಿ, ರಂಜೋಳಖೇಣಿ ಗ್ರಾಮದಲ್ಲಿ ಭೂಕಂಪನವಾಗಿದೆ. ಇದು ಲಘು ಭೂಕಂಪನವಾಗಿದ್ದು, ಯಾವುದೇ ಹಾನಿ ಉಂಟಾಗಿಲ್ಲ. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ತಿಳಿಸಿದ್ದಾರೆ.

ಸಂವಾದ ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದೇವೆ: ನರಹಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ವಿಶಿಷ್ಟ ಸಾಮಾಜಿಕ ಸಂದರ್ಭದಲ್ಲಿ ಬದುಕುತ್ತಿದ್ದೇವೆ. ಮಾತು ಸಂವಾದವಾಗುವ ಬದಲು ಜಗಳವಾಗಿ ಮಾರ್ಪಡುತ್ತಿದೆ’ ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಇಲ್ಲಿ ನಡೆದ ಬುಕ್ ಬ್ರಹ್ಮ ಸಾಹಿತ್ಯೋತ್ಸವದಲ್ಲಿ ತಮಿಳು ಹಾಗೂ ಮಲಯಾಳಂ ಬರಹಗಾರ ಬಿ.ಜಯಮೋಹನ್ ಅವರಿಗೆ ‘ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ’ ಪ್ರದಾನ ಮಾಡಲಾಯಿತು. ಈ ಪುರಸ್ಕಾರವು ₹2 ಲಕ್ಷ ನಗದು ಒಳಗೊಂಡಿದೆ.

ಈ ವೇಳೆ ಮಾತನಾಡಿದ ನರಹಳ್ಳಿ ಬಾಲಸುಬ್ರಹ್ಮಣ್ಯ, ‘ಪ್ರಜಾಪ್ರಭುತ್ವದ ಜೀವಾಳವೇ ಸಂವಾದ. ಆದರೆ, ಈಗ ಆ ಸಂವಾದಕ್ಕೆ ಅವಕಾಶ ಇಲ್ಲವಾಗಿದೆ. ಪ್ರಭುತ್ವವು ನಮ್ಮ ಸಾಮಾಜಿಕ ಬದುಕನ್ನು ಮಾತ್ರವಲ್ಲದೇ, ಬೌದ್ಧಿಕ ಸ್ವಾತಂತ್ರ್ಯವೂ ಇಲ್ಲದ ಸ್ಥಿತಿ ನಿರ್ಮಿಸಿದೆ. ಇಂತಹ ಸನ್ನಿವೇಶದಲ್ಲಿ ಸ್ವಾಯತ್ತ ಪ್ರಜ್ಞೆ ಉಳಿಸಿಕೊಳ್ಳುವುದು ಅಗತ್ಯ’ ಎಂದರು.

‘ಸಮುದಾಯದ ಒಗ್ಗಟ್ಟನ್ನು ಪ್ರದರ್ಶಿಸಬೇಕಾದ ಈ ಕಾಲದಲ್ಲಿ, ಸ್ವಾರ್ಥ ಕೇಂದ್ರಿತ ಜಗತ್ತಿನ ಕಡೆ ಹೆಜ್ಜೆ ಹಾಕಲಾಗುತ್ತಿದೆ. ಒಬ್ಬೊಬ್ಬ ವ್ಯಕ್ತಿಯೂ ತನ್ನದೆ ಆದ ಪ್ರಪಂಚವನ್ನು ಸೃಷ್ಟಿಸಿಕೊಂಡಿದ್ದಾನೆ. ಆದ್ದರಿಂದ ಎಲ್ಲರನ್ನೂ ಒಳಗೊಂಡು ಸಾಗುವ ಪ್ರಯತ್ನಗಳು ಹೆಚ್ಚಬೇಕು. ಆಧುನಿಕ ಜಗತ್ತಿನ ಸವಾಲು, ಸಂಕಟಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕು’ ಎಂದು ಹೇಳಿದರು.

ಸಮಾರಂಭದಲ್ಲಿ ಬಿ.ಜಯಮೋಹನ್ (ಎಡದಿಂದ ನಾಲ್ಕನೆಯವರು) ಅವರಿಗೆ ‘ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ’ ಪ್ರದಾನ ಮಾಡಲಾಯಿತು. (ಎಡದಿಂದ) ಬುಕ್ ಬ್ರಹ್ಮ ನಿರ್ದೇಶಕ ಸತೀಶ್ ಚಪ್ಪರಿಕೆ, ಮಲ್ಲೇಪುರಂ ಜಿ. ವೆಂಕಟೇಶ್, ಹಂ.ಪ. ನಾಗರಾಜಯ್ಯ, ನರಹಳ್ಳಿ ಬಾಲಸುಬ್ರಹ್ಮಣ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ’ಕ್ಕೆ ಆಯ್ಕೆಯಾದವರ ಹೆಸರು ಘೋಷಿಸಿದ ಸಾಹಿತಿ ಹಂ.ಪ. ನಾಗರಾಜಯ್ಯ, ‘ರಾಜಕಾರಣಿಗಳ ಅನುಪಸ್ಥಿತಿಯಲ್ಲಿ ಈ ಉತ್ಸವವು ಅರ್ಥಪೂರ್ಣವಾಗಿ ನಡೆದಿದೆ. ಬರಹಗಾರರು, ಪ್ರಕಾಶಕರು, ಪುಸ್ತಕ ಮಾರಾಟಗಾರರು ಹಾಗೂ ಓದುಗರಿಗೆ ಉತ್ತಮ ವೇದಿಕೆ ಕಲ್ಪಿಸಿತ್ತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ‘ನಮ್ಮಲ್ಲಿನ ಕಲೆಯನ್ನು ನಾವು ಮಾತ್ರ ನೋಡದೆ, ಹೊರಗಿನವರೂ ವೀಕ್ಷಿಸಬೇಕು. ಕೂಚಿಪುಡಿ, ಭರತನಾಟ್ಯ, ಕಥಕ್ ಸೇರಿ ವಿವಿಧ ನೃತ್ಯ ಪ್ರಕಾರ, ಕಲೆ, ಸಂಗೀತ, ಸಾಹಿತ್ಯದ ವೈವಿಧ್ಯ ಒಟ್ಟಿಗೆ ಸೇರಬೇಕು. ತಮಿಳುನಾಡು, ಆಂಧ್ರ ಪ್ರದೇಶ, ಕರ್ನಾಟಕ ಎಲ್ಲ ರಾಜ್ಯದವರೂ ಒಟ್ಟಾಗಿ ಸಾಗಬೇಕು’ ಎಂದು ಹೇಳಿದರು.

ಬಿಜೆಪಿಯ ‘ಅತೃಪ್ತ’ ನಾಯಕರ ಸಭೆ

ಒಂದನೇ ಪುಟದಿಂದ....

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನ ದುರ್ಬಳಕೆಗೆ ಸಂಬಂಧಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಿಂದ ಬಳ್ಳಾರಿಯವರೆಗೆ ಗಣೇಶ ಚತುರ್ಥಿ ನಂತರ ಪಾದಯಾತ್ರೆ ನಡೆಸಲು ನಿರ್ಧರಿಸಿದ್ದಾಗಿ ಸಭೆ ಬಳಿಕ ನಾಯಕರು ಸುದ್ದಿಗಾರರಿಗೆ ತಿಳಿಸಿದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಬಿ.ಎಸ್.ಯಡಿಯೂರಪ್ಪ ವಿರುದ್ಧ ಅಸಮಾಧಾನಗೊಂಡ ನಾಯಕರು ಈ ಸಭೆ ನಡೆಸಿದ್ದಾರೆ. ಇಬ್ಬರೂ ನಾಯಕರ ವಿರುದ್ಧ ಪಕ್ಷದ ಹೈಕಮಾಂಡ್‌ಗೆ ದೂರು ನೀಡಲು ಯೋಜಿಸಿದ್ದಾರೆ’ ಎಂಬ ಮಾತು ಕೇಳಿಬಂದಿತ್ತು. ಆದರೆ, ‘ಇದು ಪಕ್ಷದ ಭಿನ್ನಮತೀಯ ಚಟುವಟಿಕೆಯಲ್ಲ’ ಎಂದು ನಾಯಕರು ಸ್ಪಷ್ಟಪಡಿಸಿದರು.

‘ಪಾದಯಾತ್ರೆಗೂ ಮುನ್ನ, ಪಕ್ಷದ ಹೈಕಮಾಂಡ್ ಜತೆ ಒಂದು ಸುತ್ತಿನ ಮಾತುಕತೆ ನಡೆಸಲಿದ್ದೇವೆ. ಬೆಂಗಳೂರಿನಲ್ಲಿ ಇನ್ನಷ್ಟು ನಾಯಕರು ಸೇರಿಕೊಂಡು ಮತ್ತೊಂದು ಹಂತದ ಸಭೆ ಕೂಡ ಮಾಡಲಿದ್ದೇವೆ’ ಎಂದರು.

‘ಮುಡಾ’ ವಿರುದ್ಧ ನಡೆದ ಪಾದಯಾತ್ರೆ ಮೈಸೂರಿಗೆ ಮಾತ್ರ ಸೀಮಿತ. ಆದರೆ, ನಾವು ಮಾಡುತ್ತಿರುವ ಹೋರಾಟ ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು, ಇದಕ್ಕೆ ಕೇಂದ್ರದ ನಾಯಕರನ್ನು ಆಹ್ವಾನಿಸಲು ಚಿಂತನೆ ನಡೆಸಿದ್ದೇವೆ’ ಎಂದು ಹೇಳಿದರು.

‘ಇದು ಯಾರೋ ಒಬ್ಬರನ್ನು ಹೀರೋ ಮಾಡಲು ಮಾಡುತ್ತಿರುವ ಹೋರಾಟವಲ್ಲ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬೆಳಗಾವಿ ತಾಲ್ಲೂಕಿನ ಕಿಣಯೇ ಬಳಿಯ ರೆಸಾರ್ಟ್‌ನಲ್ಲಿ ಭಾನುವಾರ ಬಿಜೆಪಿ ನಾಯಕರು ಸಭೆ ನಡೆಸಿದರು —ಪ್ರಜಾವಾಣಿ ಚಿತ್ರ

ಅತೃಪ್ತರ ಸಭೆ ಅಲ್ಲ: ಲಿಂಬಾವಳಿ

ಒಂದನೇ ಪುಟದಿಂದ...

‘ವಾಲ್ಮೀಕಿ ನಿಗಮದ ಹಣ ದುರುಪಯೋಗವಾಗಿದೆ. ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಲಾಗುತ್ತಿದೆ. ಇದರ ವಿರುದ್ಧ ಪಾದಯಾತ್ರೆ ಮಾಡಲು ತೀರ್ಮಾನಿಸಿದ್ದೇವೆ’ ಎಂದರು.

‘ಮೈಸೂರು ಪಾದಯಾತ್ರೆಯಲ್ಲಿ ನೀವೇಕೆ ಪಾಲ್ಗೊಳ್ಳಲಿಲ್ಲ’ ಎನ್ನುವ ಮಾಧ್ಯಮದವರ ಪ್ರಶ್ನೆಗೆ, ‘ಬಳ್ಳಾರಿ ಪಾದಯಾತ್ರೆ ಮಾಡಲು ಶಕ್ತಿ ಬೇಕಲ್ಲವೆ? ಅದಕ್ಕಾಗಿ ಹೋಗಿಲ್ಲ’ ಎಂದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರು ಚರ್ಚೆ ಮಾಡಿಯೋ ಅಥವಾ ಮಾಡದೆಯೋ ಮೈಸೂರು ಪಾದಯಾತ್ರೆ ಘೋಷಿಸಿದ್ದರು. ಆದರೆ, ನಾವು ಸೂಕ್ತವಾಗಿ ಚರ್ಚಿಸಿ, ವ್ಯವಸ್ಥಿತವಾಗಿ ಹೋರಾಟ ಮಾಡಲು ಮುಂದಾಗಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಏಜೆನ್ಸಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಗರುಡಾಚಾರಹಳ್ಳಿ ಗ್ರಾಮಸ್ಥರ ಆಗ್ರಹ

ಅಂಗನವಾಡಿ: ಆಹಾರದಲ್ಲಿ ಸತ್ತ ಇಲಿ!

ಪ್ರಜಾವಾಣಿ ವಾರ್ತೆ

ಗುಡಿಬಂಡೆ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಹಂಪಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗರುಡಾಚಾರಹಳ್ಳಿ ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೀಡಲಾದ ಪೌಷ್ಟಿಕ ಆಹಾರದಲ್ಲಿ ಸತ್ತ ಇಲಿಯ ಅವಶೇಷ ಪತ್ತೆಯಾಗಿದೆ.

ಅಂಗನವಾಡಿ ಕೇಂದ್ರದ ನಂದೀಶ ಮತ್ತು ಲಕ್ಷ್ಮಿ ಎಂಬ ಮಕ್ಕಳಿಗೆ ನೀಡಲಾದ ಬೆಲ್ಲದ ಪುಡಿ ಪ್ಯಾಕೆಟ್ ತೆರೆದಾಗ ದುರ್ವಾಸನೆ ಬಂದಿದೆ. ಪೋಷಕರು ಅದನ್ನು ಪರೀಕ್ಷಿಸಿದಾಗ ಬೆಲ್ಲದ ಪುಡಿಯ ನಡುವೆ ಸತ್ತಿರುವ ಇಲಿಯ ರೋಮ ಮತ್ತು ಇತರ ಅವಶೇಷ ಸಿಕ್ಕಿವೆ.

ಬಾಗೇಪಲ್ಲಿ ತಾಲ್ಲೂಕಿನ ಯಲ್ಲಂಪಲ್ಲಿಯ ಎಂಎಸ್‌ಪಿಸಿ ಏಜೆನ್ಸಿ ಏಪ್ರಿಲ್‌ನಲ್ಲಿ ಅಂಗನವಾಡಿ ಕೇಂದ್ರಕ್ಕೆ ಸರಬರಾಜು ಮಾಡಿದ ಆಹಾರ ಪದಾರ್ಥ ಪೂರೈಕೆ ಮಾಡಿತ್ತು. ಆ ಪೈಕಿ ಬೆಲ್ಲದ ಪುಡಿ ಪಾಕೆಟ್‌ನಲ್ಲಿ ಸತ್ತಿರುವ ಇಲಿಯನ್ನು ಹೋಲುವ ವಸ್ತು, ರೋಮಗಳು ಕಾಣಿಸಿಕೊಂಡಿದೆ.



ಮಕ್ಕಳಿಗೆ ನೀಡಲಾದ ಬೆಲ್ಲದ ಪುಡಿ ಪಾಕೆಟ್‌ನಲ್ಲಿ ಕಂಡು ಬಂದ ಸತ್ತ ಇಲಿ ಹೋಲುವ ವಸ್ತು

ಮುಖ್ಯಾಂಶಗಳು

- ಗರುಡಾಚಾರಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ಪತ್ತೆ
- ಬೆಲ್ಲದ ಪುಡಿಯಲ್ಲಿ ಸಿಕ್ಕ ಇಲಿ ರೋಮ

ಪೋಷಕರು ತಕ್ಷಣ ಆಹಾರ ಸುರಕ್ಷತಾ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅಧಿಕಾರಿಗಳು ಪ್ಯಾಕೆಟ್ ಪಡೆದು ಪರೀಕ್ಷೆಗೆ ಕಳುಹಿಸಿದ್ದಾರೆ. ವರದಿ ಬಂದ ನಂತರ ಆಹಾರ ಭದ್ರತಾ ಕಾಯ್ದೆ ಅಡಿ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಇಬ್ಬರೂ ಮಕ್ಕಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಂಗನವಾಡಿ ಕೇಂದ್ರದಿಂದ ಆಹಾರ ಪದಾರ್ಥ ಪಡೆದಿಲ್ಲ ಎಂದು ಗುಡಿಬಂಡೆ ಸಿಡಿಪಿಒ ರಫೀಕ್ ತಿಳಿಸಿದ್ದಾರೆ.

ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲು ಸರ್ಕಾರ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆದರೆ ಆಹಾರ ಪದಾರ್ಥ ಪೂರೈಸುವ ಗುತ್ತಿಗೆ ಪಡೆದ ಏಜೆನ್ಸಿಗಳು ಇಷ್ಟು ನಿರ್ಲಕ್ಷ್ಯ ವಹಿಸಿದರೆ ಹೇಗೆ? ಅದನ್ನು ಸೇವಿಸಿ ಮಕ್ಕಳಿಗೆ ಆರೋಗ್ಯ ಏರುಪೇರಾದರೆ ಯಾರು ಹೊಣೆ? ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ಮಾಡಿ ಆಹಾರ ಪದಾರ್ಥ ಪೂರೈಸುತ್ತಿರುವ ಏಜೆನ್ಸಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಕ್ಕಳ ಪೋಷಕರು ಮತ್ತು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಟ ದರ್ಶನ್ ಚಿತ್ರಕ್ಕೆ ಪೂಜೆ: ಅರ್ಚಕ ಅಮಾನತು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಕುರುವತ್ತಿಯ ಐತಿಹಾಸಿಕ ಸುಕ್ಷೇತ್ರ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಟ ದರ್ಶನ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಆರೋಪದ ಹಿನ್ನೆಲೆಯಲ್ಲಿ ಅರ್ಚಕ ಬಸಪ್ಪ ಪೂಜಾರ್ ಅವರನ್ನು ದೇವಸ್ಥಾನ ಸಮಿತಿ ಕಾರ್ಯನಿರ್ವಾಹಕ ಅಧಿಕಾರಿ ಶಾಂತಮ್ಮ ಅಮಾನತುಗೊಳಿಸಿದ್ದಾರೆ.

ದರ್ಶನ್ ಬಂಧಮುಕ್ತಗೊಳ್ಳಲಿ ಎಂದು ಪ್ರಾರ್ಥಿಸಿ ಜು.26 ರಂದು ಅಭಿಮಾನಿಗಳು ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಿದ್ದರು. ಅಭಿಮಾನಿಗಳ ಕೋರಿಕೆ ಮೇರೆಗೆ ಅರ್ಚಕ ಬಸಪ್ಪ ಅವರು ಗರ್ಭಗುಡಿಯಲ್ಲಿರುವ ಪುರಾತನ ಬಸವಣ್ಣನ ವಿಗ್ರಹದ ಪಾದದಡಿ ದರ್ಶನ್ ಫೋಟೊ ಇರಿಸಿದ್ದರು. ಈ ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ದೇವಸ್ಥಾನ ಸಮಿತಿಯಿಂದ ಆ.7 ರಂದು ಅರ್ಚಕರಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

‘ಉಸಿರುಗಟ್ಟಿಸಿ ಕೊಲೆ, ಬಳಿಕ ಅತ್ಯಾಚಾರ’

ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಕೊಲೆ ಕೃತ್ಯ • ಕಣ್ಣು, ಬಾಯಿ, ಖಾಸಗಿ ಅಂಗದಲ್ಲಿ ರಕ್ತಸ್ರಾವದ ಗುರುತು

ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ, ಪ್ರತಿರೋಧ ತೋರಿದ್ದ ವಿದ್ಯಾರ್ಥಿನಿಯನ್ನು ಮೊದಲು ಕೊಲೆ ಮಾಡಿ, ಬಳಿಕ ಅತ್ಯಾಚಾರ ಎಸಗಿರುವ ಸಾಧ್ಯತೆಗಳಿವೆ.

ಕೃತ್ಯದ ಸ್ವರೂಪದ ಖಚಿತತೆಗೆ ಲೈಂಗಿಕ ದೌರ್ಜನ್ಯ ಮತ್ತು ಕೊಲೆ ಪ್ರಕರಣ ಕುರಿತ ಮರಣೋತ್ತರ ಪರೀಕ್ಷೆಯ ಅಂತಿಮ ವರದಿಯ ನಿರೀಕ್ಷೆಯಲ್ಲಿ ಪೊಲೀಸರಿದ್ದಾರೆ. ಇಲ್ಲಿನ ಸರ್ಕಾರಿ ಆರ್‌.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಸೆಮಿನಾರ್ ಸಭಾಂಗಣದಲ್ಲಿ ವಿದ್ಯಾರ್ಥಿನಿ ಕೊಲೆ ಆಗಿತ್ತು.

ಪ್ರಾಥಮಿಕ ಹಂತದ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಆಕೆ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದು ದೃಢವಾಗಿತ್ತು. ಇತ್ತ, ಕೃತ್ಯದ ಸಂಬಂಧ ಬಂಧಿಸಿರುವ ವ್ಯಕ್ತಿಯನ್ನು ಪೊಲೀಸರು ಸ್ಥಳೀಯ ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ಆ. 23 ರವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಪ್ರಾಥಮಿಕ ಹಂತದ ಮರಣೋತ್ತರ ಪರೀಕ್ಷೆ ವರದಿ ಪ್ರಕಾರ, ‘ಕೊಲೆಯಾದ ವಿದ್ಯಾರ್ಥಿನಿಯ ಎರಡೂ ಕಣ್ಣುಗಳು, ಬಾಯಿಯಲ್ಲಿ ರಕ್ತಸ್ರಾವವಾಗಿದೆ. ಸೊಂಟ, ಎಡಗಾಲು, ಕತ್ತು, ತುಟಿಯ ಮೇಲೂ ಗಾಯದ ಗುರುತುಗಳಿವೆ. ಖಾಸಗಿ ಅಂಗದಲ್ಲೂ ರಕ್ತಸ್ರಾವ ಕಂಡುಬಂದಿದೆ’.

ಸಾಂದರ್ಭಿಕ ಸಾಕ್ಷ್ಯಗಳನ್ನು ಉಲ್ಲೇಖಿಸಿ ಪೊಲೀಸ್ ಅಧಿಕಾರಿಯೊಬ್ಬರು ‘ಮೊದಲು ವಿದ್ಯಾರ್ಥಿನಿಯ ಕತ್ತುಹಿಸುಕಿ ಕೊಲೆ ಮಾಡಿ, ನಂತರ ಅತ್ಯಾಚಾರ ಎಸಗಿರುವ ಸಾಧ್ಯತೆಗಳಿವೆ’ ಎಂದು ಹೇಳಿದರು.

‘ವೈದ್ಯೆ ಏಕಾಂಗಿಯಾಗಿ ಸೆಮಿನಾರ್ ಸಭಾಂಗಣದಲ್ಲಿ ನಿದ್ರಿಸುತ್ತಿದ್ದರು ಎಂಬುದಕ್ಕೆ ಸಾಕ್ಷ್ಯಗಳಿವೆ. ಆಗ ಆರೋಪಿ ದಾಳಿ ನಡೆಸಿರಬಹುದು. ಪ್ರತಿರೋಧ ತೋರಿದ್ದ ವಿದ್ಯಾರ್ಥಿನಿಯನ್ನು ಕತ್ತುಹಿಸುಕಿ ಕೊಲೆ ಮಾಡಿರುವ ಸಾಧ್ಯತೆಗಳಿವೆ. ನಂತರವೇ ಅತ್ಯಾಚಾರ ಮಾಡಿರಬಹುದು’ ಎಂದು ಹೇಳಿದರು.

‘ಕೃತ್ಯದ ವೇಳೆ ಆರೋಪಿ ಧರಿಸಿದ್ದ ಶೂ, ಬಟ್ಟೆಗಳನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಇನ್ನೊಬ್ಬರ ಪಾತ್ರ ಕುರಿತು ಸದ್ಯ ಸಾಕ್ಷ್ಯ ಲಭ್ಯವಾಗಿಲ್ಲ. ಬಳಿಕ ಆರೋಪಿ ಮನೆಗೆ ತೆರಳಿ ಬಟ್ಟೆ ತೊಳೆದಿದ್ದಾನೆ. ಆತ ಧರಿಸಿದ್ದ ಶೂಗಳ ಮೇಲೆ ರಕ್ತದ ಕಲೆ ಇದ್ದುದು ತಪಾಸಣೆ ವೇಳೆ ಕಂಡುಬಂದಿತ್ತು. ಬಂಧಿತ ಆರೋಪಿ ಹೊರಗಿನವನು. ಆಗಾಗ್ಗೆ ಆಸ್ಪತ್ರೆಗೆ ಹೋಗುತ್ತಿದ್ದ’ ಎಂದು ತಿಳಿಸಿದರು.

ಈತನ ವಿರುದ್ಧ ಭಾರತ ನ್ಯಾಯ ಸಂಹಿತೆ ಅನ್ವಯ ಕೊಲೆ, ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ. ಭದ್ರತೆ ಭಾಗವಾಗಿ ಭಾನುವಾರ ಆಸ್ಪತ್ರೆಯಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

‘ಅಧಿಕೃತ ಗುರುತುಪತ್ರ ಇಲ್ಲದೆ ಯಾರನ್ನೂ ಬಿಡುತ್ತಿಲ್ಲ. ಆರೋಗ್ಯ ಸೇವೆಯ ಸಿಬ್ಬಂದಿಗೆ ಅಗತ್ಯ ಭದ್ರತೆ ಒದಗಿಸಲಿದ್ದೇವೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೊಲೆ ಕೃತ್ಯ ಕುರಿತು ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಕೋಲ್ಕತ್ತದ ಉತ್ತರ ಬಂಗಾಳ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕಿರಿಯ ವೈದ್ಯರು ಭಾನುವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

ಕೇರಳ, ದೆಹಲಿಯಲ್ಲಿ ಇಂದು ಪ್ರತಿಭಟನೆ

ಕೋಲ್ಕತ್ತ, ನವದೆಹಲಿ (ಪಿಟಿಐ): ವಿದ್ಯಾರ್ಥಿನಿ ಕೊಲೆ ಆರೋಪಿಗೆ ಕಠಿಣ ಸಜೆಗೆ ಒತ್ತಾಯಿಸಿ ವೈದ್ಯ ವಿದ್ಯಾರ್ಥಿಗಳು ಪಶ್ಚಿಮ ಬಂಗಾಳದಾದ್ಯಂತ ಮೂರನೇ ದಿನವಾದ ಭಾನುವಾರವೂ ಪ್ರತಿಭಟನೆ ನಡೆಸಿದರು.

ಕೋಲ್ಕತ್ತದ ವೈದ್ಯರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ, ನವದೆಹಲಿಯಲ್ಲಿನ ಸರ್ಕಾರಿ ವೈದ್ಯಕೀಯ ಆಸ್ಪತ್ರೆಗಳಲ್ಲಿ ಸೋಮವಾರ ಪ್ರತಿಭಟಿಸಲು ವೈದ್ಯರು ನಿರ್ಧರಿಸಿದ್ದಾರೆ.

ಹೊರರೋಗಿಗಳ ವಿಭಾಗ, ಶಸ್ತ್ರಚಿಕಿತ್ಸೆ, ವಾರ್ಡ್ ಕರ್ತವ್ಯದಿಂದ ದೂರ ಉಳಿಯುವುದಾಗಿ ದೆಹಲಿಯ ವಿವಿಧ ಸರ್ಕಾರಿ ಆಸ್ಪತ್ರೆಗಳ ವೈದ್ಯರ ಸಂಘಗಳು ತಿಳಿಸಿವೆ.

ತಿರುವನಂತಪುರ ವರದಿ: ಕೇರಳದ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಸೋಮವಾರ ಪ್ರತಿಭಟನೆ ನಡೆಯಲಿದೆ ಎಂದು ಸರ್ಕಾರಿ ವೈದ್ಯ ಕಾಲೇಜು ಬೋಧಕರ ಸಂಘ ಪ್ರಕಟಿಸಿದೆ. ರಾತ್ರಿ ಪಾಳಿಯಲ್ಲಿರುವ ವೈದ್ಯೆಯರು, ತುರ್ತುಚಿಕಿತ್ಸೆ ವಿಭಾಗದಲ್ಲಿರುವ ವೈದ್ಯರ ಸುರಕ್ಷತೆ ಹೊಣೆ ಆಯಾ ರಾಜ್ಯ ಸರ್ಕಾರಗಳದ್ದು ಎಂದು ಸಂಘ ಪ್ರತಿಪಾದಿಸಿದೆ.

ಮದರಸಾಗಳಿಗೆ ಮಾನ್ಯತೆ ಕುರಿತು ಸಚಿವರ ಹೇಳಿಕೆ

ಎರಡು ವಿ.ವಿ ಸ್ಥಾಪನೆಗೆ ಚಿಂತನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಪ್ರದೇಶ ಸರ್ಕಾರವು ಮದರಸಾಗಳಿಗೆ ಮಾನ್ಯತೆ ನೀಡಲು ಎರಡು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಚಿಂತನೆ ನಡೆಸಿದೆ.

ಮಾನ್ಯತೆ ಪಡೆಯದ ಮದರಸಾಗಳಲ್ಲಿನ (ಇಸ್ಲಾಮಿಕ್ ಶಾಲೆಗಳು) ವಿದ್ಯಾರ್ಥಿಗಳನ್ನು ರಾಜ್ಯ ಸರ್ಕಾರ ನಡೆಸುವ ಶಾಲೆಗಳಿಗೆ ಸ್ಥಳಾಂತರಿಸುವ ಕುರಿತ ವಿವಾದದ ಬೆನ್ನಲ್ಲೇ, ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ವಿಚಾರ ನಡೆಸಿದೆ.

ಈ ಕುರಿತು ಮಾಹಿತಿ ನೀಡಿದ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಓಂ ಪ್ರಕಾಶ್ ರಾಜ್‌ಭರ್ ಅವರು, ‘ಹೊಸದಾಗಿ ಸ್ಥಾಪಿಸುವ ಎರಡು ವಿಶ್ವವಿದ್ಯಾಲಯಗಳ ಜತೆಗೆ ಉತ್ತರ ಪ್ರದೇಶದ ಮದರಸಾ ಶಿಕ್ಷಣ ಮಂಡಳಿಯನ್ನು ಸಂಯೋಜಿಸಲಾಗುವುದು. ಈ ವಿ.ವಿಗಳಿಂದ ಎಲ್ಲ ಮದರಸಾಗಳು ಮಾನ್ಯತೆ ಪಡೆಯಬೇಕು. ಹೀಗಾದರೆ ಭವಿಷ್ಯದಲ್ಲಿ ಯಾವುದೇ ವಿವಾದಗಳು ಉಂಟಾಗದು’ ಎಂದು ಅವರು ತಿಳಿಸಿದರು.

ಲಖನೌ ಮತ್ತು ಇತರ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಕಾಲೇಜುಗಳು ಹೇಗೆ ಮಾನ್ಯತೆ ಪಡೆಯುತ್ತವೆಯೋ ಅದೇ ರೀತಿಯ ವ್ಯವಸ್ಥೆಯನ್ನು ಮದರಸಾಗಳಿಗೂ ತರಲಾಗುವುದು ಎಂದು ಅವರು ವಿವರಿಸಿದರು. ಪ್ರಸ್ತುತ ಮದರಾಸಗಳಿಗೆ ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಮಾನ್ಯತೆ ನೀಡುತ್ತಿದೆ.

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಯಾವುದೇ ಗಡುವನ್ನು ನೀಡಲಾಗಿಲ್ಲ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಈ ವಿವಾದವನ್ನು ಕೊನೆಗೊಳಿಸಲು ನಾವು ಬಯಸಿದ್ದೇವೆ. ಹಿಂದಿನ ಸಮಾಜವಾದಿ ಪಕ್ಷ ಮತ್ತು ಬಿಎಸ್‌ಪಿ ಸರ್ಕಾರಗಳು ಈ ಬಗ್ಗೆ ಯೋಚಿಸಿಯೇ ಇರಲಿಲ್ಲ’ ಎಂದು ರಾಜ್‌ಭರ್ ಅವರು ಪ್ರತಿಕ್ರಿಯಿಸಿದ್ದಾರೆ.

‘ರಾಜ್ಯ ಸರ್ಕಾರವು ಈ ಸಂಬಂಧ ಯಾವುದೇ ಕ್ರಮ ತೆಗೆದುಕೊಳ್ಳುವ ಮೊದಲು ಸಂಬಂಧಿಸಿದ ಮಧ್ಯಸ್ಥಗಾರರ ಜತೆ ಮಾತುಕತೆ ನಡೆಸಬೇಕು. ಸರ್ಕಾರದ ನಿರ್ಧಾರದಿಂದ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗದಂತೆ ಎಚ್ಚರವಹಿಸಬೇಕು’ ಎಂದು ಇಸ್ಲಾಮಿಕ್ ವಿದ್ವಾಂಸರೊಬ್ಬರು ಹೇಳಿದ್ದಾರೆ.

ಎನ್‌ಸಿಪಿಸಿಆರ್ ಪತ್ರ: ಮದರಸಾಗಳಲ್ಲಿ ಓದುತ್ತಿರುವ ಎಲ್ಲ ಮುಸ್ಲಿಮೇತರ ವಿದ್ಯಾರ್ಥಿಗಳನ್ನು ಹಾಗೂ ಮಾನ್ಯತೆ ಇಲ್ಲದ ಮದರಸಾಗಳಲ್ಲಿ ಓದುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳಿಗೆ ಸ್ಥಳಾಂತರಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ರಾಜ್ಯಕ್ಕೆ ಪತ್ರ ಬರೆದಿತ್ತು. ಅದರ ಬೆನ್ನಲ್ಲೇ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಮುಂದಾಗಿದೆ.

ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿಯವರು, ಎನ್‌ಸಿಪಿಸಿಆರ್ ನಿರ್ದೇಶನಗಳನ್ನು ಜಾರಿಗೊಳಿಸುವಂತೆ ಸೂಚಿಸಿದ್ದಾರೆ. ಮದರಸಾಗಳಲ್ಲಿನ ಮುಸ್ಲಿಮೇತರ ಮಕ್ಕಳ ಪ್ರವೇಶಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವಂತೆಯೂ ಪತ್ರದಲ್ಲಿ ಸೂಚಿಸಲಾಗಿದೆ.

ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಸುಮಾರು 25,000 ಮದರಸಾಗಳಿವೆ. ಇವುಗಳಲ್ಲಿ 560 ಸರ್ಕಾರಿ ಅನುದಾನಿತ ಮದರಸಾಗಳು ಸೇರಿದಂತೆ ಒಟ್ಟು 16,500 ಮದರಸಾಗಳು ಸರ್ಕಾರದಿಂದ ಮಾನ್ಯತೆ ಪಡೆದಿವೆ. ಸುಮಾರು 8,500 ಮದರಸಾಗಳು ಉತ್ತರ ಪ್ರದೇಶದ ಮದರಸಾ ಶಿಕ್ಷಣ ಮಂಡಳಿಯ ಮಾನ್ಯತೆ ಪಡೆದಿಲ್ಲ.

ರಾಜ್ಯಸಭೆಯಲ್ಲಿ ಬಹುಮತ: ಎನ್‌ಡಿಎ ನಿರೀಕ್ಷೆ

ನವದೆಹಲಿ(ಪಿಟಿಐ): ತೆರವಾಗಿರುವ 12 ಸ್ಥಾನಗಳಿಗೆ ಮುಂದಿನ ತಿಂಗಳು ಉಪಚುನಾವಣೆ ನಡೆದ ನಂತರ ರಾಜ್ಯಸಭೆಯಲ್ಲಿ ತನಗೆ ಸ್ಪಷ್ಟ ಬಹುಮತ ಸಿಗಲಿದೆ ಎಂಬ ನಿರೀಕ್ಷೆಯಲ್ಲಿ ಎನ್‌ಡಿಐ ಮೈತ್ರಿಕೂಟವಿದೆ.

ಮುಖ್ಯಾಂಶಗಳು

- ಉಪಚುನಾವಣೆ ನಡೆದ ನಂತರ ಸ್ಪಷ್ಟ ಬಹುಮತದ ನಿರೀಕ್ಷೆ
- ಸದ್ಯ ರಾಜ್ಯಸಭೆಯಲ್ಲಿರುವ ಬಿಜೆಪಿ ಸಂಸದರ ಸಂಖ್ಯೆ 87

ರಾಜ್ಯಸಭೆಯಲ್ಲಿಯೂ ಬಹುಮತ ಸಿಕ್ಕಲ್ಲಿ, ವಕ್ಫ್ ತಿದ್ದುಪಡಿ ಮಸೂದೆ ಸೇರಿದಂತೆ ಪ್ರಮುಖ ಮಸೂದೆಗಳನ್ನು ಅಂಗೀಕರಿಸಲು ದಾರಿ ಸುಗಮವಾಗಲಿದೆ ಎಂಬ ಲೆಕ್ಕಾಚಾರವನ್ನೂ ಎನ್‌ಡಿಎ ಹೊಂದಿದೆ.

ರಾಜ್ಯಸಭೆ ಸದಸ್ಯ ಬಲ ಸದ್ಯ 229 ಇದ್ದು, ಬಿಜೆಪಿಯ 87 ಸಂಸದರಿದ್ದಾರೆ. ಮಿತ್ರ ಪಕ್ಷಗಳ ಸಂಸದರ ಸಂಖ್ಯೆಯನ್ನೂ ಸೇರಿಸಿದಲ್ಲಿ ಎನ್‌ಡಿಎ ಸದಸ್ಯ ಸಂಖ್ಯೆ 105 ಆಗುತ್ತದೆ. 6 ಜನ ನಾಮ ನಿರ್ದೇಶನಗೊಂಡ ಸದಸ್ಯರಿದ್ದು, ಸಾಮಾನ್ಯವಾಗಿ, ಸರ್ಕಾರದ ನಿಲುವಿನ ಪರವಾಗಿಯೇ ಇವರು ಮತ ಚಲಾವಣೆ ಮಾಡುವರು. ಇದರೊಂದಿಗೆ, ಎನ್‌ಡಿಎ ಸದಸ್ಯ ಬಲ 111 ಆಗುವುದು. ಸರಳ ಬಹುಮತಕ್ಕೆ 115 ಸ್ಥಾನಗಳು ಅಗತ್ಯ. ಹೀಗಾಗಿ, ಎನ್‌ಡಿಎ ಒಕ್ಕೂಟಕ್ಕೆ ನಾಲ್ಕು ಸ್ಥಾನಗಳ ಕೊರತೆ ಎದುರಾಗಲಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್ 26 ಸದಸ್ಯರನ್ನು ಹೊಂದಿದೆ. ಮಿತ್ರ ಪಕ್ಷಗಳ 58 ಸದಸ್ಯರು ಸೇರಿ, ವಿಪಕ್ಷಗಳ ಸದಸ್ಯರ ಸಂಖ್ಯೆ 84 ಆಗುವುದು. ಇನ್ನು, 11 ಸಂಸದರನ್ನು ಹೊಂದಿರುವ ವೈಎಸ್‌ಆರ್ ಕಾಂಗ್ರೆಸ್, 8 ಸದಸ್ಯ ಬಲದ ಬಿಜೆಡಿ ಎರಡೂ ಒಕ್ಕೂಟಗಳಿಂದ ಅಂತರ ಕಾಯ್ದುಕೊಂಡಿವೆ.

ಎನ್‌ಡಿಎಗೆ ಅನುಕೂಲ?: 12 ಸ್ಥಾನಗಳಿಗೆ ಸೆಪ್ಟೆಂಬರ್ 3ರಂದು ಚುನಾವಣೆ ನಡೆಯಲಿದೆ. ಪ್ರತಿ ಸ್ಥಾನಕ್ಕೂ ಪ್ರತ್ಯೇಕವಾಗಿ ಚುನಾವಣೆ ನಡೆಸುವುದಾಗಿ ಚುನಾವಣೆ ಆಯೋಗ ಘೋಷಿಸಿದೆ. ಇದು, ಆಯಾ ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷಗಳಿಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

12ರಲ್ಲಿ ಎನ್‌ಡಿಎ ಮೈತ್ರಿಕೂಟ 11 ಸ್ಥಾನಗಳಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಆಗ, ಎನ್‌ಡಿಎ ಬಲ 122ಕ್ಕೆ ಏರಿಕೆಯಾಗುವುದು.

ಬಿಹಾರ: ಮತ್ತೊಂದು ಸಣ್ಣ ಸೇತುವೆ ಕುಸಿತ

ಹಾಜಿಪುರ (ಬಿಹಾರ) (ಪಿಟಿಐ): ವೈಶಾಲಿ ಜಿಲ್ಲೆಯ ರಾಘೋಪುರ ತಾಲ್ಲೂಕಿನ ಪಹಾರಪುರ ಗ್ರಾಮದಲ್ಲಿ ಚಿಕ್ಕ ಸೇತುವೆ ಕುಸಿದಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಸೇತುವೆ ಶನಿವಾರ ಸಂಪೂರ್ಣ ಕುಸಿದಿದ್ದು, ಯಾವುದೇ ಪ್ರಾಣಹಾನಿ ಆಗಿಲ್ಲ ಎಂದು ತಿಳಿಸಿದ್ದಾರೆ. ‘ಸೇತುವೆ 20 ವರ್ಷಗಳಷ್ಟು ಹಳೆಯದು. ಭಾರಿ ಪ್ರವಾಹದಿಂದ ಹಾನಿ ಆಗಿದ್ದರಿಂದ, 2021ರಲ್ಲಿಯೇ ಈ ಸೇತುವೆಯಲ್ಲಿ ಸಂಚಾರ ನಿರ್ಬಂಧಿಸಲಾಗಿತ್ತು’ ಎಂದರು.

ಭಕ್ತಿ...ಯಾತ್ರೆ

ಶ್ರಾವಣ ಮಾಸದ ಅಂಗವಾಗಿ ಮಧ್ಯಪ್ರದೇಶ ರಾಜಧಾನಿ ಭೋಪಾಲ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಕಾವಡ್ ಯಾತ್ರೆ’ಯಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಕೇಂದ್ರದ ಮಾಜಿ ಸಚಿವ ನಟವರ ಸಿಂಗ್ ನಿಧನ

ನಟವರ ಸಿಂಗ್

ನವದೆಹಲಿ (ಪಿಟಿಐ): ವಿದೇಶಾಂಗ ವ್ಯವಹಾರಗಳ ಮಾಜಿ ಸಚಿವ ಕೆ. ನಟವರ ಸಿಂಗ್ (93) ಅವರು ಶನಿವಾರ ರಾತ್ರಿ ಆಸ್ಪತ್ರೆಯಲ್ಲಿ ನಿಧನರಾದರು.

ದೀರ್ಘಕಾಲದಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು ಕೆಲ ವಾರಗಳಿಂದ ಗುರುಗ್ರಾಮದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

1931ರಲ್ಲಿ ರಾಜಸ್ಥಾನದ ಭರತ್‌ಪುರ ಜಿಲ್ಲೆಯಲ್ಲಿ ಅವರು ಜನಿಸಿದ್ದರು.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಮೊದಲ ಅವಧಿಯ 2004– 05ರಲ್ಲಿ ಅವರು ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದಾಗ 1966ರಿಂದ 1971ರವರೆಗೆ ನಟವರ ಅವರು ಪಾಕಿಸ್ತಾನದಲ್ಲಿ ಭಾರತದ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದರು.

ಜೀವನ ಚರಿತ್ರೆ ‘ವನ್ ಲೈಫ್ ಈಸ್ ನಾಟ್ ಇನಫ್’ ಸೇರಿ ಹಲವು ಪುಸ್ತಕಗಳನ್ನು ಬರೆದಿದ್ದ ಸಿಂಗ್ ಅವರು 1984ರಲ್ಲಿ ಪದ್ಮ ಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

ಇವರಿಗೆ ಪತ್ನಿ ಹೇಮಿಂದರ್ ಕುಮಾರಿ ಸಿಂಗ್, ಮಗ ಜಗತ್ ಸಿಂಗ್ ಇದ್ದಾರೆ.

‘ರೀಲ್ಸ್’ಗಾಗಿ ರೈಲಿನ ಎಂಜಿನ್ ಕ್ಯಾಬಿನ್ ಪ್ರವೇಶಿಸಿದ್ದ ಯುವಕರ ಬಂಧನ

ಪ್ರಜಾವಾಣಿ ವಾರ್ತೆ

ಠಾಣೆ: ರೀಲ್ಸ್ ಮಾಡುವ ಸಲುವಾಗಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಕಸಾರಾದಲ್ಲಿ ನಿಲುಗಡೆ ಆಗಿದ್ದ ಸ್ಥಳೀಯ ರೈಲಿನ ಮೋಟರ್‌ಮ್ಯಾನ್ (ಎಂಜಿನ್) ಕ್ಯಾಬಿನ್‌ಗೆ ಅನುಮತಿ ಇಲ್ಲದೇ ಪ್ರವೇಶಿಸಿದ್ದ ಇಬ್ಬರು ಯುವಕರನ್ನು ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಬಂಧಿಸಿದೆ.

ಆರೋಪಿಗಳನ್ನು ನಾಸಿಕ್ ನಿವಾಸಿಗಳಾದ ರಾಜಾ ಹಿಮ್ಮತ್ ಯೆರ್ವಾಲ್ (20) ಮತ್ತು ರಿತೇಶ್ ಹಿರಾಲಾಲ್ ಜಾಧವ್ (18) ಎಂದು ಗುರುತಿಸಲಾಗಿದೆ.

ನಿಲ್ದಾಣದ ಪ್ಲಾಟ್‌ಫಾರ್ಮ್ ಸಂಖ್ಯೆ 4ರಲ್ಲಿ ರೈಲನ್ನು ನಿಲುಗಡೆ ಮಾಡಲಾಗಿತ್ತು. ಆರೋಪಿಗಳಲ್ಲಿ ಒಬ್ಬ ಮೋಟರ್‌ಮ್ಯಾನ್ ಕ್ಯಾಬಿನ್ ಒಳಗೆ ಹೋಗಿದ್ದ. ಮತ್ತೊಬ್ಬ ಅದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ. ಬಳಿಕ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಇದನ್ನು ಗಮನಿಸಿದ ಕೇಂದ್ರ ವಿಭಾಗೀಯ ರೈಲ್ವೆಯ (ಸಿಆರ್) ಆರ್‌ಪಿಎಫ್ ಸೈಬರ್ ಸೆಲ್ ಸಹಯೋಗದೊಂದಿಗೆ ಆರೋಪಿಗಳನ್ನು ಬಂಧಿಸಿದೆ.

‘ರೀಲ್ಸ್ ಮಾಡುವ ಸಲುವಾಗಿಯೇ ಮೋಟರ್‌ಮ್ಯಾನ್ ಕ್ಯಾಬಿನ್ ಒಳಗೆ ಹೋಗಿದ್ದೆವು’ ಎಂದು ವಿಚಾರಣೆ ವೇಳೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಅವರ ವಿರುದ್ಧ ಸಿಆರ್ ನಂಬರ್ 1200/24, ರೈಲ್ವೆ ಕಾಯ್ದೆಯ ಸೆಕ್ಷನ್ 145(ಬಿ) ಮತ್ತು 147 ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೋಟರ್‌ಮ್ಯಾನ್ ಕ್ಯಾಬಿನ್ ಪ್ರವೇಶಿಸುವಂಥ ಅಕ್ರಮ ಎಸಗುವವರಿಗೆ ಇದು ಎಚ್ಚರಿಕೆಯ ಸಂದೇಶ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆಯ ಆವರಣದಲ್ಲಿ ಇಂಥ ಅಪಾಯಕಾರಿ ಕೃತ್ಯದಲ್ಲಿ ಯಾರಾದರೂ ತೊಡಗಿರುವುದು ಕಂಡುಬಂದರೆ ಕೂಡಲೇ 9004410735 ಅಥವಾ 139ಗೆ ಕರೆಮಾಡಿ ಮಾಹಿತಿ ನೀಡುವಂತೆ ಪ್ರಯಾಣಿಕರಿಗೆ ಸೂಚಿಸಿದ್ದಾರೆ.

ಉಗ್ರರ ನಿಗ್ರಹ ಕಾರ್ಯಾಚರಣೆ ಚುರುಕು

ಶ್ರೀನಗರ(ಪಿಟಿಐ): ಜಮ್ಮು–ಕಾಶ್ಮೀರದ ಅನಂತನಾಗ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಆರಂಭಿಸಿರುವ ಉಗ್ರರ ನಿಗ್ರಹ ಕಾರ್ಯಾಚರಣೆಯನ್ನು ಭಾನುವಾರ ಚುರುಕುಗೊಳಿಸಲಾಯಿತು.

‘ಗಾಗರ್‌ಮಂಡು ಪ್ರದೇಶದಲ್ಲಿ ಕಾರ್ಯಾಚರಣೆಯನ್ನು ಚುರುಕುಗೊಳಿಸಲಾಗಿದೆ. ಶನಿವಾರ ನಡೆದ ಕಾರ್ಯಾಚರಣೆ ವೇಳೆ ಮೂವರು ಯೋಧರು ಹಾಗೂ ಇಬ್ಬರು ನಾಗರಿಕರು ಗಾಯಗೊಂಡಿದ್ದರು. ಇಬ್ಬರು ಯೋಧರು ಹುತಾತ್ಮರಾಗಿದ್ದರೆ, ಒಬ್ಬ ನಾಗರಿಕ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಯೋಧ ಮತ್ತು ಮತ್ತೊಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಐಜಿಪಿ (ಕಾಶ್ಮೀರ ವಲಯ) ವಿ.ಕೆ. ಬಿರ್ಡಿ ಹೇಳಿದ್ದಾರೆ.

ಅನಂತನಾಗ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸುತ್ತಿರುವ ಕಾರ್ಯಾಚರಣೆ ಭಾನುವಾರವೂ ಮುಂದುವರಿಯಿತು —ಪಿಟಿಐ ಚಿತ್ರ

‘ಈ ಇಬ್ಬರು ನಾಗರಿಕರು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದರೆ’ ಎಂಬ ಪತ್ರಕರ್ತರ ಪ್ರಶ್ನೆಗೆ, ‘ಎನ್‌ಕೌಂಟರ್ ನಡೆಯುತ್ತಿರುವ ಸ್ಥಳದ ಸಮೀಪವೇ ಈ ಇಬ್ಬರು ಇದ್ದರು. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದರು.

‘ಪಾಕ್ ಕೈವಾಡ’: ವಿದೇಶಗಳಲ್ಲಿ ತರಬೇತಿ ಹೊಂದಿದ ಉಗ್ರರನ್ನು ಪಾಕಿಸ್ತಾನ ಜಮ್ಮು–ಕಾಶ್ಮೀರದೊಳಗೆ ಕಳುಹಿಸುತ್ತಿದ್ದು, ಆ ಮೂಲಕ ಕಣಿವೆಯಲ್ಲಿನ ಭದ್ರತಾ ವ್ಯವಸ್ಥೆಯನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಭಾನುವಾರ ಹೇಳಿದ್ದಾರೆ.

‘ನೆರೆ ರಾಷ್ಟ್ರದ ದುಷ್ಕೃತ್ಯಗಳನ್ನು ಮಟ್ಟಹಾಕುವುದಕ್ಕೆ ಕಾರ್ಯತಂತ್ರ ರೂಪಿಸಲಾಗಿದೆ’ ಎಂದೂ ಹೇಳಿದರು.

ರಷ್ಯಾ ಮೇಲೆ ಆಕ್ರಮಣ: ಪರೋಕ್ಷವಾಗಿ ಒಪ್ಪಿದ ಝೆಲೆನ್‌ಸ್ಕಿ

ಕೀವ್ (ಉಕ್ರೇನ್) (ಎಎಫ್‌ಪಿ/ಎಪಿ): ರಷ್ಯಾದ ಕುರ್ಸ್ಕ್ ಪ್ರದೇಶದ ಮೇಲೆ ಉಕ್ರೇನ್ ಸೇನೆ ಆಕ್ರಮಣ ಕೈಗೊಂಡ ಆರು ದಿನಗಳ ಬಳಿಕ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮೌನ ಮುರಿದಿದ್ದಾರೆ.

‘ಇದೀಗ ಯುದ್ಧವು ಆಕ್ರಮಣಕಾರರ ಪ್ರದೇಶಕ್ಕೆ ನುಗ್ಗಿದೆ’ ಎಂದು ಹೇಳುವ ಮೂಲಕ ಉಕ್ರೇನ್‌ನ ಸೇನಾ ಆಕ್ರಮಣವನ್ನು ಝೆಲೆನ್‌ಸ್ಕಿ, ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

ಉಕ್ರೇನ್ ಪಡೆಯ ಸೈನಿಕರು ರಷ್ಯಾದ ವಿರುದ್ಧದ ದಾಳಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಉಕ್ರೇನ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾದ ಕುರ್ಸ್ಕ್ ಪ್ರದೇಶದಲ್ಲಿ ಆರನೇ ದಿನವೂ ಉಕ್ರೇನ್‌ನಿಂದ ದಾಳಿ ಮುಂದುವರಿದ್ದು, ರಷ್ಯಾದ ದೌರ್ಬಲ್ಯವನ್ನು ತೋರಿಸುವುದು ಮತ್ತು ಅದನ್ನು ಅಸ್ಥಿರಗೊಳಿಸುವುದು ಉಕ್ರೇನ್‌ನ ಉದ್ದೇಶವಾಗಿದೆ ಎಂದು ಹೇಳಿದ್ದಾರೆ.

‘ನಾವು ಆಕ್ರಮಣಕಾರಿಯಾಗಿದ್ದು, ಶತ್ರುಗಳ ಸ್ಥಾನವನ್ನು ವಶಪಡಿಸಿಕೊಳ್ಳುತ್ತಿದ್ದೇವೆ. ಈ ಮೂಲಕ ರಷ್ಯಾಕ್ಕೆ ಗರಿಷ್ಠ ನಷ್ಟ ಉಂಟು ಮಾಡುವುದು ಹಾಗೂ ತನ್ನ ಗಡಿಯನ್ನೇ ರಕ್ಷಿಸಿಕೊಳ್ಳಲಾಗದ ರಷ್ಯಾದ ಪರಿಸ್ಥಿತಿಯನ್ನು ಇನ್ನಷ್ಟು ಅಸ್ಥಿರಗೊಳಿಸುವುದು ನಮ್ಮ ಗುರಿಯಾಗಿದೆ’ ಎಂದು ಅವರು ವಿವರಿಸಿದ್ದಾರೆ.

ಕಳೆದ ಮಂಗಳವಾರದಿಂದ ಪ್ರಾರಂಭವಾಗಿರುವ ಈ ಆಕ್ರಮಣದಲ್ಲಿ ಉಕ್ರೇನ್ ಸೈನಿಕರು ವೀರಾವೇಶದಿಂದ ಹೋರಾಡುತ್ತಿದ್ದಾರೆ ಎಂದಿದ್ದಾರೆ.

ರಷ್ಯಾ ಪ್ರತಿಕ್ರಿಯೆ: ‘ಉಕ್ರೇನ್ ಸೇನೆಯು ತನ್ನ ಗಡಿ ಪ್ರದೇಶಗಳ ಮೇಲೆ ನಡೆಸಿರುವ ದಾಳಿಯನ್ನು ರಷ್ಯಾದ ಪಡೆಗಳು ಸಮರ್ಥವಾಗಿ ಎದುರಿಸಲಿದ್ದು, ಕಠಿಣ ಪ್ರತಿಕ್ರಿಯೆ ನೀಡಲಿವೆ. ಇದಕ್ಕೆ ಹೆಚ್ಚು ಸಮಯ ಬೇಡ’ ಎಂದು ರಷ್ಯಾದ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ.

‘ಫಾರ್ಮುಲಾ 4’ ರೇಸ್‌ಗೆ ಎಐಎಡಿಎಂಕೆ ವಿರೋಧ

ಸೇಲಂ, ತಮಿಳುನಾಡು (ಪಿಟಿಐ): ಚೆನ್ನೈ ನಗರದಲ್ಲಿ ‘ಫಾರ್ಮುಲಾ 4 ನೈಟ್ ಸ್ಟ್ರೀಟ್ ರೇಸ್’ ಆಯೋಜಿಸುವ ಡಿಎಂಕೆ ಸರ್ಕಾರದ ನಿರ್ಧಾರಕ್ಕೆ ಎಐಎಡಿಎಂಕೆ ಆಕ್ರೋಶ ವ್ಯಕ್ತಪಡಿಸಿದೆ.

ಎಡಪ್ಪಾಡಿ ಕೆ.ಪಳನಿಸ್ವಾಮಿ

ಜನರು ಅಭಿವೃದ್ಧಿ ಕಾರ್ಯಗಳ ನಿರೀಕ್ಷೆಯಲ್ಲಿ ಇರುವಾಗ, ತೆರಿಗೆ ಹಣ ಬಳಸಿ ಸರ್ಕಾರ ಈ ಸ್ಪರ್ಧೆ ಆಯೋಜಿಸುತ್ತಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಟೀಕಿಸಿದ್ದಾರೆ.

ಸ್ಪರ್ಧೆಗೆ ವೆಚ್ಚ ಮಾಡುತ್ತಿರುವ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸುವುದು ಸೂಕ್ತ ಎಂದರು.

ವಿರೋಧಪಕ್ಷದ ನಾಯಕರೂ ಆದ ಪಳನಿಸ್ವಾಮಿ ಅವರು, ಇಂತಹ ಕಾರ್ಯಕ್ರಮ ಆಯೋಜಿಸುವುದೇ ಉದ್ದೇಶವಾಗಿದ್ದರೆ, ಮದ್ರಾಸ್ ಮೋಟಾರ್ ರೇಸ್ ಟ್ರ್ಯಾಕ್ ಅನ್ನು ಚೆನ್ನೈನ ಬದಲಿಗೆ ಇರುಂಗಟ್ಟುಕೊಟ್ಟೈನಲ್ಲಿ ಆಯೋಜಿಸಬಹುದು. ಎಐಎಡಿಎಂಕೆ ಸರ್ಕಾರ ಇದನ್ನು ಆಯೋಜಿಸಿತ್ತು. ಇದರಿಂದ ರೈಲ್ವೆ ನಿಲ್ದಾಣ, ಆಸ್ಪತ್ರೆಗಳಿರುವ ನಗರದಲ್ಲಿ ವಾಹನ ದಟ್ಟಣೆ ತಪ್ಪಲಿದೆ ಎಂದು ಹೇಳಿದರು.

‘ಕೆನೆಪದರ: ವಿಪಕ್ಷಗಳಿಂದ ಗೊಂದಲ ಸೃಷ್ಟಿ ಯತ್ನ’

ನವದೆಹಲಿ(ಪಿಟಿಐ): ಎಸ್‌ಸಿ, ಎಸ್‌ಟಿಗಳಿರುವ ಮೀಸಲಾತಿಯಲ್ಲಿ ಕೆನೆಪದರ ಕುರಿತು ಸುಪ್ರೀಂ ಕೋರ್ಟ್‌ನ ಟಿಪ್ಪಣಿಗೆ ಸಂಬಂಧಿಸಿ ವಿರೋಧ ಪಕ್ಷಗಳು ಜನರಲ್ಲಿ ಗೊಂದಲ ಸೃಷ್ಟಿಸುತ್ತಿವೆ ಎಂದು ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್ ಆರೋಪಿಸಿದ್ದಾರೆ.


ಅರ್ಜುನ್ ರಾಮ್ ಮೇಘವಾಲ್

‘ಪಿಟಿಐ ವಿಡಿಯೊಸ್’ಗೆ ಸಂದರ್ಶನ ನೀಡಿರುವ ಅವರು, ‘ಡಾ.ಬಿ.ಆರ್.ಅಂಬೇಡ್ಕರ್ ರಚಿಸಿರುವ ಸಂವಿಧಾನದಡಿ ನೀಡಲಾಗಿರುವ ಮೀಸಲಾತಿಯಲ್ಲಿ ಕೆನೆಪದರಕ್ಕೆ ಅವಕಾಶ ಇಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಕೆನೆಪದರ ಕುರಿತು ಸುಪ್ರೀಂ ಕೋರ್ಟ್ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಎಂಬುದು ವಿಪಕ್ಷಗಳಿಗೂ ಗೊತ್ತಿದೆ. ಆದಾಗ್ಯೂ ಅವು ಜನರಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸುತ್ತಿವೆ’ ಎಂದೂ ಅವರು ಹೇಳಿದ್ದಾರೆ.

ಐಸಿಎಆರ್‌ನಿಂದ ಅಭಿವೃದ್ಧಿ: ರೈತರ ಆದಾಯ ಹೆಚ್ಚಳ ಉದ್ದೇಶ

ಹವಾಗುಣ ಸಹಿಷ್ಣು ತಳಿಗಳ ಬಿಡುಗಡೆ

ನವದೆಹಲಿ (ಪಿಟಿಐ): ಹವಾಗುಣ ಸಹಿಷ್ಣು ಗುಣವಿರುವ ಹಾಗೂ ಪೌಷ್ಟಿಕಾಂಶ ಹೆಚ್ಚಿಸಲಾಗಿರುವ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ 109 ತಳಿಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಿಡುಗಡೆ ಮಾಡಿದರು.

ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಐಸಿಎಆರ್) ಈ ತಳಿಗಳನ್ನು ಅಭಿವೃದ್ಧಿಪಡಿಸಿದೆ. ಇಲ್ಲಿನ ಪೂಸಾದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (ಐಎಆರ್‌ಐ) ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಈ ತಳಿಗಳನ್ನು ಬಿಡುಗಡೆ ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.

34 ಕೃಷಿ ಬೆಳೆಗಳು ಹಾಗೂ 27 ತೋಟಗಾರಿಕೆ ಬೆಳೆಗಳು ಸೇರಿದಂತೆ ಒಟ್ಟು 61 ಬೆಳೆಗಳಿಗೆ ಸಂಬಂಧಿಸಿದ ತಳಿಗಳನ್ನು ಸಂಸ್ಥೆ ಅಭಿವೃದ್ಧಿಪಡಿಸಿದೆ. ಈ ತಳಿಗಳಿಂದ ಅಧಿಕ ಇಳುವರಿ ಸಾಧ್ಯವಾಗಲಿದೆ. ಆ ಮೂಲಕ ರೈತರ ಆದಾಯ ಹೆಚ್ಚಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿರಿಧಾನ್ಯಗಳು, ಎಣ್ಣೆಕಾಳುಗಳು, ಬೇಳೆಕಾಳುಗಳು, ಕಬ್ಬು, ಹತ್ತಿ, ಹಣ್ಣುಗಳು, ತರಕಾರಿಗಳು, ಪ್ಲಾಂಟೇಷನ್ ಬೆಳೆಗಳು, ಸಂಬಾರ್ ಪದಾರ್ಥಗಳು, ಹೂವು ಹಾಗೂ ಔಷಧೀಯ ಸಸ್ಯಗಳಿಗೆ ಸಂಬಂಧಿಸಿದ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಸಂವಾದ: ಇದೇ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ರೈತರು ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿದರು. ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿರುವ ವಿಜ್ಞಾನಿಗಳ ಕಾರ್ಯವನ್ನು ಶ್ಲಾಘಿಸಿದರು.

‘ನೈಸರ್ಗಿಕ ಕೃಷಿಯಿಂದ ಲಾಭ ಹೆಚ್ಚು. ಜನರಲ್ಲಿ ಕೂಡ ಸಾವಯವ ಕೃಷಿ ಮತ್ತು ಆಹಾರ ಕುರಿತು ಒಲವು ಹೆಚ್ಚುತ್ತಿದೆ ಎಂಬುದಾಗಿ ಮೋದಿ ಹೇಳಿದರು’ ಎಂದು ಪ್ರಕಟಣೆ ತಿಳಿಸಿದೆ.

‘ಈ ತಳಿಗಳು ಹಾಗೂ ನೈಸರ್ಗಿಕ ಕೃಷಿ ಕುರಿತು ರೈತರಲ್ಲಿ ಅರಿವು ಮೂಡಿಸುವಲ್ಲಿ ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ವಹಿಸುತ್ತಿರುವ ಪಾತ್ರವನ್ನು ಶ್ಲಾಘಿಸಿದರು’ ಎಂದೂ ಪ್ರಕಟಣೆ ತಿಳಿಸಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪಾಲ್ಗೊಂಡಿದ್ದರು.

ದೆಹಲಿಯ ಪೂಸಾದಲ್ಲಿರುವ ಐಎಆರ್‌ಐ ಕ್ಯಾಂಪಸ್‌ನಲ್ಲಿ ಭಾನುವಾರ ವಿವಿಧ ಬೆಳೆಗಳ ನೂತನ ತಳಿಗಳನ್ನು ಬಿಡುಗಡೆ ಮಾಡಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ರೈತರೊಂದಿಗೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಐಐಎಚ್‌ಆರ್‌ನ 13 ತಳಿಗಳು

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಿಡುಗಡೆ ಮಾಡಿರುವ 109 ಹವಾಗುಣ ಸಹಿಷ್ಣು ಗುಣವಿರುವ ತಳಿಗಳಲ್ಲಿ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಅಭಿವೃದ್ಧಿಪಡಿಸಿರುವ ಅರ್ಕ ಹೆಸರಿನ 13 ಹಣ್ಣು, ತರಕಾರಿ, ಹೂವು ಮತ್ತು ಔಷಧೀಯ ಬೆಳೆಗಳ ತಳಿಗಳು ಸೇರಿವೆ.

ತಳಿಗಳ ವಿವರ: ಅರ್ಕ ಉದಯ (ಮಾವು), ಅರ್ಕ ಕಿರಣ್ (ಪೇರಲ), ಅರ್ಕ ಚಂದ್ರ(ಚಕೋತ), ಅರ್ಕ ನಿಕಿತಾ(ಬೆಂಡೆ), ಅರ್ಕ ವಿಸ್ತಾರ (ಚಪ್ಪರದ ಅವರೆ), ಅರ್ಕ ವೈಭವ (ಸುಗಂದರಾಜ ಹೂವು), ಅರ್ಕ ಶ್ರೀಯಾ(ಕನಕಾಂಬರ), ಅರ್ಕ ಅಮರ್ ಮತ್ತು ಅರ್ಕ ಆಯುಷ್ ಪ್ಯುಸಾರಿಯಂ(ಗ್ಲಾಡಿಯೋಲಸ್), ಅರ್ಕಾ ಧ್ವನಂತರಿ ಮತ್ತು ಅರ್ಕಾ ದಕ್ಷ(ವೆಲ್ವೆಟ್ ಬೀನ್ಸ್), ಅರ್ಕಾ ಅಶ್ವಗಂಧ ಮತ್ತು ಅರ್ಕಾ ಪ್ರಭಾವಿ(ಒಂದೆಲಗ).

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029. ದೂ: 080–41106504 – 18
ಇ–ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ
(KPPP ಮೂಲಕ ಮಾತ್ರ)

1) ಸಂಖ್ಯೆ: KWB/TEC/CE(B)/CTD/AMRUT/432/2024-25 Dtd: 09.08.2024

1) ಕಾಮಗಾರಿಯ ಹೆಸರು ಮತ್ತು ವಿವರ: “ಅಮೃತ್–2 ಯೋಜನೆಯಡಿಯಲ್ಲಿ ಹೊಸದುರ್ಗ, ಹೊಳಲ್ಕೆರೆ ಮತ್ತು ಜಗಳೂರು ಸುಧಾರಿತ ನೀರು ಸರಬರಾಜು ಯೋಜನೆ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ದೋಷದ ಹೊಣೆಗಾರಿಕೆ 1 ವರ್ಷ ಅವಧಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ” ಯಾವುದೇ ವೇರಿಯೇಷನ್ ಇರುವುದಿಲ್ಲ.

ಇಂಡೆಂಟ್ ಸಂಖ್ಯೆ: KUWSDB/2024-25/WS/ WORK_INDENT235

2) ಸಂಖ್ಯೆ: KWB/TEC/CE(B)/SMG/AMRUT/433/2024-25 Dtd: 09.08.2024

ಕಾಮಗಾರಿಯ ಹೆಸರು : ಅಮೃತ್–2 ಯೋಜನೆಯ ಅಡಿಯಲ್ಲಿ ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರ, ಕಾರ್ಗಲ್, ಹೊಳೆಹೊನ್ನೂರು ಮತ್ತು ಅನವಟ್ಟಿ ಪಟ್ಟಣಗಳಿಗೆ ನೀರು ಸರಬರಾಜು ಸೌಲಭ್ಯ ವ್ಯವಸ್ಥೆ ಒದಗಿಸುವ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ದೋಷದ ಹೊಣೆಗಾರಿಕೆ 1 ವರ್ಷ ಅವಧಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT234

3) ಸಂಖ್ಯೆ: No.KWB/TEC/CE(B)/BNG/AMRUT-P-1/434/2024-25 Dt: 09.08.2024

ಕಾಮಗಾರಿಯ ಹೆಸರು : ಅಮೃತ 2.0 ಯೋಜನೆಯ ಅಡಿಯಲ್ಲಿ DBOT ಮಾದರಿಯ ಮೂಲಕ, ಜಿಗಣಿ, ಆನೇಕಲ್, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ನಗರ/ ಪಟ್ಟಣಗಳಿಗೆ ಸುಧಾರಿತ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ DLP) ಒಳಗೊಂಡಂತೆ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT236

4) ಸಂಖ್ಯೆ: KWB/TEC/CE(B)/BNG/AMRUT-P-2/435/2024-25 Dt: 09.08.2024

ಕಾಮಗಾರಿಯ ಹೆಸರು : ಅಮೃತ 2.0 ಯೋಜನೆಯಡಿಯಲ್ಲಿ, DBOT ಮಾದರಿಯ ಮೂಲಕ, ಮಾಗಡಿ, ಚನ್ನಪಟ್ಟಣ, ಕನಕಪುರ ಮತ್ತು ಹಾರೋಹಳ್ಳಿ ನಗರ/ ಪಟ್ಟಣಗಳಿಗೆ ಸುಧಾರಿತ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ DLP) ಒಳಗೊಂಡಂತೆ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT237.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/1392/ಆಕಾರ್/2024–25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029

IFT No: KMF/ENGG/MD/ETP_BIOGAS/2024-25 Date: 09-08-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳ, ಬೆಂಗಳೂರು, ವತಿಯಿಂದ ಬೆಂಗಳೂರು ಯಲಹಂಕದಲ್ಲಿರುವ ಮದರ್ ಡೇರಿ ಘಟಕದ Effluent Treatment Plant ಗೆ ಅವಶ್ಯಕವಿರುವ BIOGAS POWER GENERATOR ENGINE ಸರಬರಾಜು ಮತ್ತಿತ್ತರೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಇದೇ ಮಾದರಿಯ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical & Financial) ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: support@eprochelpdesk.com and helpline no. +91-8046010000, +91-8068948777, 080-22230960, 080-22234115

ಕ್ರಮ ಸಂಖ್ಯೆ	ಕೆಲಸದ ವಿವರ	ಇ. ಎಂ. ಡಿ. ರೂ. ಪೈ.
1	ಬೆಂಗಳೂರು ಯಲಹಂಕದಲ್ಲಿರುವ ಕಹಾಮದ ಮದರ್ ಡೇರಿ ಘಟಕದಲ್ಲಿರುವ ದಿನವಹಿ 1700 ಸಾವಿರ ಲೀಟರ್ ಸಾಮರ್ಥ್ಯದ Effluent Treatment Plant ಗೆ ಅವಶ್ಯಕವಿರುವ 125 ಕೆ.ವಿ.ಎ. ಸಾಮರ್ಥ್ಯದ BIOGAS POWER GENERATOR ENGINE ಸರಬರಾಜು, ಅಳವಡಿಕೆ ಹಾಗೂ ಮತ್ತಿತರೆ ಸಂಬಂಧಿಸಿದ ಕೆಲಸಗಳು	1,80,000/–

1) ಟೆಂಡರ್ ಷೆಡ್ಯೂಲ್ ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ **12–08–2024 ರಿಂದ 26–08–2024 ರ ಸಾಯಂಕಾಲ 4.00 ಗಂಟೆಯವರೆಗೆ.** 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ **26–08–2024 ರ ಸಾಯಂಕಾಲ 4.00 ಗಂಟೆಯವರೆಗೆ.** 3) ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ **28–08–2024 ರಂದು ಬೆಳಿಗ್ಗೆ 11.30 ಗಂಟೆಗೆ.**

ಇನ್ನಿತ್ತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್ ನ ತಿದ್ದುಪಡಿ / ಬದಲಾವಣೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–1)

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹480
12 ಕ್ಕೆ	₹68
ಮೈಸೂರು	
100ಕ್ಕೆ	₹485

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹123-483
ದ್ವಿತಳಿ (ಬಿ.ವಿ)
₹333-590

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಭಾಗ್ಯ ಚಂದ್ರಶೇಖರ್
ಇವರು ದಿನಾಂಕ: 11.08.2024 (ಭಾನುವಾರ) ದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇಂತಿ ದುಃಖತಪ್ತರು:
ಶ್ರೀ ಬನಶಂಕರಿ ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿವರ್ಗ.

NAME CHANGE ANNOUNCEMENT
Log on to : dhclassifieds.com

ಪುಣ್ಯಸ್ಮರಣೆ

ಶ್ರೀ ಎನ್.ಸಿ. ಬಸವರಾಜು
ನಿಧನ 12-8-2021
ಶ್ರೀಮತಿ ಸುಶೀಲಮ್ಮ
ನಿಧನ 7-3-2021
ನಾಗದಾಸನಹಳ್ಳಿ, ಬೆಂಗಳೂರು-64
ನೀವುಗಳು ನಮ್ಮನ್ನಗಲಿ 3 ವರ್ಷವಾಯಿತು.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಕುಟುಂಬ ವರ್ಗದವರು ಹಾಗೂ BSR Bricks ನಾಗದಾಸನಹಳ್ಳಿ.

ಈಕ್ವಿಟಿ: ₹1.30 ಲಕ್ಷ ಕೋಟಿ ಹೂಡಿಕೆಗೆ ಎಲ್‌ಐಸಿ ನಿರ್ಧಾರ

ನವದೆಹಲಿ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಈಕ್ವಿಟಿ ಮಾರುಕಟ್ಟೆಯಲ್ಲಿ ₹1.30 ಲಕ್ಷ ಕೋಟಿ ಹೂಡಿಕೆ ಮಾಡಲಿದೆ' ಎಂದು ಎಲ್‌ಐಸಿ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಸಿದ್ಧಾರ್ಥ ಮೊಹಂತಿ ತಿಳಿಸಿದ್ದಾರೆ.

ಈಗಾಗಲೇ, ಏಪ್ರಿಲ್-ಜೂನ್ ಅವಧಿಯಲ್ಲಿ ₹38 ಸಾವಿರ ಕೋಟಿ ಹೂಡಿಕೆ ಮಾಡಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹23,300 ಕೋಟಿ ಹೂಡಿಕೆ ಮಾಡಿತ್ತು.

ಜೂನ್ ತ್ರೈಮಾಸಿಕದಲ್ಲಿ ಈಕ್ವಿಟಿ ಮಾರುಕಟ್ಟೆಯಲ್ಲಿನ ಹೂಡಿಕೆಯಿಂದ ₹15,500 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 13.5ರಷ್ಟು ಏರಿಕೆಯಾಗಿದೆ.

'2023-24ರಲ್ಲಿ ₹1.32 ಲಕ್ಷ ಕೋಟಿ ಹೂಡಿಕೆ ಮಾಡಲಾಗಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೂಡಿಕೆ ಕುರಿತಂತೆ ಮಾರುಕಟ್ಟೆಯ ಸ್ಥಿತಿಗತಿ ಬಗ್ಗೆ ಅವಲೋಕನ ನಡೆಸುತ್ತಿದ್ದೇವೆ' ಎಂದು ಮೊಹಂತಿ ತಿಳಿಸಿದ್ದಾರೆ.

ಜೂನ್ ಅಂತ್ಯಕ್ಕೆ ಎಲ್‌ಐಸಿ ಹೂಡಿಕೆ ಮಾಡಿರುವ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹15 ಲಕ್ಷ ಕೋಟಿ ದಾಟಿದೆ ಎಂದು ಹೇಳಿದ್ದಾರೆ.

ಎಫ್‌ಪಿಐ: ₹13,431 ಕೋಟಿ ವಾಪಸ್

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಆಗಸ್ಟ್ 1ರಿಂದ 9ರ ವರೆಗೆ ದೇಶೀಯ ಷೇರು ಮಾರುಕಟ್ಟೆಯಿಂದ ₹13,431 ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

'ಬ್ಯಾಂಕ್ ಆಫ್ ಜಪಾನ್ ಬಡ್ಡಿದರ ಏರಿಕೆ ಮಾಡಿರುವುದರಿಂದ ಯೆನ್ ಕರೆನ್ಸಿ ಮೌಲ್ಯದಲ್ಲಿ ಹೆಚ್ಚಳವಾಗಿದೆ. ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಭೀತಿ ಸೃಷ್ಟಿಯಾಗಿದೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಬಂಡವಾಳದ ಹೊರಹರಿವು ಹೆಚ್ಚಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

ಷೇರು ವಂಚನೆ: ಪಾರಾಗುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ನೀವು ಹಣ ಕೊಟ್ಟರೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಭರ್ಜರಿ ಲಾಭ ಕೊಡುತ್ತೇವೆ. ಈ ಷೇರು ಖರೀದಿಸಿದರೆ ಕೆಲವೇ ದಿನಗಳಲ್ಲಿ ಡಬಲ್-ಟ್ರಿಪಲ್ ಆಗುತ್ತದೆ. ಹೀಗೆ ಜನಸಾಮಾನ್ಯರ ಮನವೊಲಿಸಿ ಅವರಿಂದ ಹಣ ಪಡೆದು ಷೇರು ಹೂಡಿಕೆಯ ಹೆಸರಲ್ಲಿ ವಂಚನೆ ಮಾಡುವ ಪ್ರಕರಣಗಳು ವ್ಯಾಪಕವಾಗಿವೆ.

ಈಗ ಷೇರು ಹೂಡಿಕೆ ಬಗ್ಗೆ ತಿಳಿದುಕೊಳ್ಳುವ ಅಗತ್ಯ ಎಷ್ಟಿದೆಯೋ, ಹೂಡಿಕೆ ಮೊತ್ತವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದು ಹೇಗೆ ಎಂದು ಅರಿತುಕೊಳ್ಳುವ ಜರೂರು ಇದೆ. ಬನ್ನಿ, ಷೇರು ಮಾರುಕಟ್ಟೆ ವಂಚನೆಗಳಿಂದ ಪಾರಾಗುವುದು ಹೇಗೆ ಎನ್ನುವುದನ್ನು ತಿಳಿಯೋಣ.

• **ಕೃತಕವಾಗಿ ಷೇರಿನ ಬೆಲೆ ಏರಿಕೆ (ಪಂಪ್ ಆ್ಯಂಡ್ ಡಂಪ್ ಸ್ಕ್ಯಾಮ್):** ಷೇರುಪೇಟೆಯಲ್ಲಿ ಕಡಿಮೆ ಮೌಲ್ಯ ಹೊಂದಿರುವ ಸಾಮಾನ್ಯವಾಗಿ ₹10ರ ಒಳಗೆ ಬೆಲೆ ಹೊಂದಿರುವ ಸಣ್ಣ ಕಂಪನಿಗಳ ಪೆನ್ನಿ ಷೇರುಗಳಿರುತ್ತವೆ. ಈ ಷೇರುಗಳನ್ನು ಮಾರ್ಕೆಟ್ ಆಪರೇಟರ್‌ಗಳು ಅತಿಯಾಗಿ ಖರೀದಿಸಿ ಕೃತಕವಾಗಿ ಸರ್ರನೆ ಬೆಲೆ ಹೆಚ್ಚಳವಾಗುವಂತೆ ಮಾಡುತ್ತಾರೆ.

ನಿರ್ದಿಷ್ಟ ಷೇರಿನ ಬೆಲೆ ಮೂರು ಪಟ್ಟು, ನಾಲ್ಕು ಪಟ್ಟು ಏರಲಿದೆ ಎಂಬ ಭರವಸೆ ಹುಟ್ಟಿಸುತ್ತಾರೆ. ಹೀಗಾದಾಗ ರಿಟೇಲ್ ಹೂಡಿಕೆದಾರರು ವ್ಯಾಪಕವಾಗಿ ಈ ಪೆನ್ನಿ ಷೇರುಗಳನ್ನು ಖರೀದಿಸುತ್ತಾರೆ. ರಿಟೇಲ್ ಹೂಡಿಕೆದಾರರು ಭಾರಿ ಪ್ರಮಾಣದಲ್ಲಿ ಈ ಷೇರುಗಳನ್ನು ಕೊಂಡಾಗ ಆ ಷೇರಿನ ಬೆಲೆ ಮತ್ತಷ್ಟು ಮೇಲೆ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಪೆನ್ನಿ ಷೇರುಗಳನ್ನು ಖರೀದಿಸಿರುವ ಮಾರ್ಕೆಟ್ ಆಪರೇಟರ್‌ಗಳು ದಿಢೀರ್ ಅಂತ ಆ ಷೇರುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಗಳಿಸಿಕೊಳ್ಳುತ್ತಾರೆ.

ಆಪರೇಟರ್‌ಗಳು ಲಾಭ ಗಳಿಸಿಕೊಂಡ ಮೇಲೆ ಕ್ರಮೇಣ ಷೇರಿನ ಬೆಲೆ ಕುಸಿತದತ್ತ ಸಾಗುತ್ತದೆ. ಆಗ ಪೆನ್ನಿ ಷೇರಿನ ಬೆಲೆ ಏರಿಕೆ ಆಗಬಹುದು ಎಂದು ಭಾವಿಸಿ ಷೇರು ಖರೀದಿಸಿದ ಸಾಮಾನ್ಯ ರಿಟೇಲ್ ಹೂಡಿಕೆದಾರ ನಷ್ಟಕ್ಕೆ ಒಳಗಾಗುತ್ತಾನೆ. ಕೆಲವು ಸಂದರ್ಭಗಳಲ್ಲಿ ಕಂಪನಿಯ ಪ್ರವರ್ತಕರು ಸೇರಿದಂತೆ ಮಾರ್ಕೆಟ್ ಆಪರೇಟರ್‌ಗಳು ಯೂಟ್ಯೂಬ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ವಾಟ್ಸ್‌ಆ್ಯಪ್, ಟೆಲಿಗ್ರಾಂ, ಎಸ್‌ಎಂಎಸ್ ಮುಂತಾದ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಹೂಡಿಕೆದಾರರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ.

₹20 ಬೆಲೆಯ ಷೇರು ₹200 ಆಗಲಿದೆ. ಹಣ ಡಬಲ್ ಆಗಲಿದೆ ಎಂಬ ಸಂದೇಶಗಳು ವಾಟ್ಸ್‌ಆ್ಯಪ್, ಎಸ್‌ಎಂಎಸ್ ಮುಂತಾದ ಕಡೆ ಹರಿದಾಡುತ್ತವೆ. ಈ ರೀತಿಯ ಮಾಹಿತಿ ನಂಬಿ ಹೂಡಿಕೆ ಮಾಡಿದರೆ ನೀವು ಪಂಪ್ ಆ್ಯಂಡ್ ಡಂಪ್ ಸ್ಕ್ಯಾಮ್‌ಗೆ ಸಿಲುಕುವ ಸಾಧ್ಯತೆ ಇರುತ್ತದೆ.

ಈ ಸ್ಕ್ಯಾಮ್‌ಗೆ ಸಿಲುಕಬಾರದು ಅಂದರೆ ಪೆನ್ನಿ ಸ್ಟಾಕ್‌ಗಳಿಂದ ದೂರ ಇರುವುದು ಒಳಿತು. ಯಾವುದಾದರು ಷೇರಿನ ಬೆಲೆ ದಿಢೀರ್ ಏರಿಳಿತ ಕಾಣುತ್ತಿದ್ದರೆ, ಕಾರಣವಿಲ್ಲದೆ ಷೇರಿನ ಅತಿಯಾದ ಖರೀದಿಯಾಗುತ್ತಿದ್ದರೆ ಅದು ಪಂಪ್ ಆ್ಯಂಡ್ ಡಂಪ್ ಸ್ಕ್ಯಾಮ್ ಆಗಿರಬಹುದು ಎಚ್ಚರ! ಯಾವುದೇ ಷೇರಿನಲ್ಲಿ ಹೂಡಿಕೆ ಮಾಡುವ ಮುನ್ನ ಸ್ವತಃ ಅಧ್ಯಯನಕ್ಕೆ ಮುಂದಾಗುವುದು ಒಳಿತು. ಷೇರುಗಳ ಅಧ್ಯಯನದ ಬಗ್ಗೆ ಸರಿಯಾದ ಅರಿವಿಲ್ಲ ಎಂತಾದರೆ ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವುದು ಸೂಕ್ತ.

• **ಷೇರು ಹೂಡಿಕೆ ಖಾತೆಗೆ ಕನ್ನ (ಫಿಶಿಂಗ್ ಲಿಂಕ್ ಸ್ಕ್ಯಾಮ್):** ನಿಮ್ಮ ಸ್ಟಾಕ್ ಬ್ರೋಕರ್ ಹೆಸರು ಹೇಳಿಕೊಂಡು ಗ್ರಾಹಕ ಮಾಹಿತಿ (ಕೆವೈಸಿ) ಅಪ್‌ಡೇಟ್ ಮಾಡುವಂತೆ ಕೇಳಿ ನಕಲಿ ಎಸ್‌ಎಂಎಸ್ ಸಂದೇಶವನ್ನು ಆನ್‌ಲೈನ್ ಖದೀಮರು ಕಳುಹಿಸುತ್ತಾರೆ. ಅಪ್ಪಿತಪ್ಪಿ ಈ ನಕಲಿ ಲಿಂಕ್ ಅನ್ನು ನೀವು ಕ್ಲಿಕ್ ಮಾಡಿದರೆ ನಿಮ್ಮ ಡಿಮ್ಯಾಟ್ ಅಕೌಂಟ್‌ನ ವಿವರ, ಹೂಡಿಕೆ ವಿವರ ಎಲ್ಲವೂ ಕಳ್ಳರಿಗೆ ಸಿಗುತ್ತದೆ. ಆ ಮಾಹಿತಿ ಬಳಸಿಕೊಂಡು ನಿಮ್ಮ ಡಿಮ್ಯಾಟ್ ಖಾತೆಯಲ್ಲಿರುವ ಎಲ್ಲ ಷೇರುಗಳನ್ನು ಮಾರಾಟ ಮಾಡಿ ಅವರು ಹಣ ಗಳಿಸಿಕೊಳ್ಳುತ್ತಾರೆ.

ಕೆಲ ನಕಲಿ ಮಂದಿ ನೋಂದಾಯಿತ ಹೂಡಿಕೆ ಸಲಹೆಗಾರರು ಎಂದು ಹೇಳಿಕೊಂಡು ಹೂಡಿಕೆ ಮಾಹಿತಿ ಕದಿಯಲು ಪ್ರಯತ್ನಿಸುತ್ತಾರೆ. ನೀವು ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಜಾರಿಯಲ್ಲಿಡದಿದ್ದರೆ ಕಳ್ಳರಿಗೆ ನಿಮ್ಮ ಇ- ಮೇಲ್ ಐಡಿ ಕದಿಯುವುದು ಸುಲಭವಾಗುತ್ತದೆ. ಇ-ಮೇಲ್ ಐಡಿ ಹ್ಯಾಕ್ ಮಾಡಿದರೆ ಷೇರು ಹೂಡಿಕೆ ಮೊತ್ತವನ್ನು ಕದಿಯಲು ಕಳ್ಳರಿಗೆ ಕಷ್ಟವಾಗುವುದಿಲ್ಲ.

ಈ ರೀತಿಯ ಸ್ಕ್ಯಾಮ್‌ಗಳಿಂದ ಪಾರಾಗಬೇಕಾದರೆ ಗೊತ್ತಿಲ್ಲದ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ. ಅಕೌಂಟ್ ಪಾಸ್‌ವರ್ಡ್ ಮುಂತಾದ ವಿವರವನ್ನು ಯಾರಿಗೂ ಕೊಡಬೇಡಿ. ಜೊತೆಗೆ ಮೊಬೈಲ್‌ನಲ್ಲಿ ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಚಾಲ್ತಿಯಲ್ಲಿ ಇಡಿ.

• **ಮನಿ ಡಬಲ್ ಹೆಸರಲ್ಲಿ ವಂಚನೆ:** ಷೇರುಪೇಟೆಯಲ್ಲಿ ನಿಮ್ಮ ಪರವಾಗಿ ನಾವೂ ಹೂಡಿಕೆ ಮಾಡುತ್ತೇವೆ. ಹೂಡಿಕೆ ಮೊತ್ತವನ್ನು ಡಬಲ್ ಮಾಡಿಕೊಡುತ್ತೇವೆ. ಹೀಗೆ ಪುಸಲಾಯಿಸಿ ದೊಡ್ಡ ಮೊತ್ತವನ್ನು ಜನಸಾಮಾನ್ಯರಿಂದ ಪಡೆದುಕೊಂಡು ವಂಚನೆ ಮಾಡುವ ಜಾಲ ವ್ಯಾಪಕವಾಗಿದೆ. ಕರ್ನಾಟಕ ಸೇರಿ ದೇಶದಾದ್ಯಂತ ಇಂತಹ ಪ್ರಕರಣಗಳು ವರದಿಯಾಗುತ್ತಿವೆ. ಅದರಲ್ಲೂ ಬ್ಯಾಂಕ್ ಖಾತೆಯಲ್ಲಿ ದೊಡ್ಡ ಮೊತ್ತವನ್ನು ಹೊಂದಿರುವವರು, ನಿವೃತ್ತಿ ವೇಳೆ ದೊಡ್ಡ ಮೊತ್ತ ಪಡೆದುಕೊಳ್ಳುವ ಹಿರಿಯ ನಾಗರಿಕರನ್ನು ಕೇಂದ್ರೀಕರಿಸಿ ವಂಚನೆ ಎಸಗಲಾಗುತ್ತಿದೆ.

ಇನ್ನು ಕೆಲವರು ನೋಂದಾಯಿತ ಹಣಕಾಸು ಸಲಹೆಗಾರರು ಬ್ಯಾಂಕ್‌ನ ಹೂಡಿಕೆ ಎಕ್ಸಿಕ್ಯೂಟಿವ್‌ಗಳು ಎಂದು ಹೇಳಿಕೊಂಡು ಮೋಸ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಇಂತಹ ನಯವಂಚಕರ ಜಾಲಕ್ಕೆ ಬೀಳಬೇಡಿ. ಅಧಿಕೃತ ಹೂಡಿಕೆ ಮಾರ್ಗಗಳ ಮೂಲಕ ಮಾತ್ರ ಷೇರು ವಹಿವಾಟು ನಡೆಸಿ.

ಮಧ್ಯವರ್ತಿಗಳ ಮೂಲಕ ಹೂಡಿಕೆ ಮಾಡುವುದಾದರೇ ಅವರ ನೋಂದಣಿ ವಿವರಗಳನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಹಣವನ್ನು ಸ್ಟಾಕ್‌ನಲ್ಲಿ ಬೇಗ ಡಬಲ್ ಮಾಡಿಕೊಡುತ್ತೇವೆ ಎಂದು ಯಾರಾದರೂ ಹೇಳಿದರೆ ಅವರನ್ನು ನಂಬಬೇಡಿ. ನಿಮ್ಮ ಪರಿಶ್ರಮದ ಹಣ ಕಳ್ಳರ ಪಾಲಾಗದಂತೆ ಎಚ್ಚರವಹಿಸಿ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಕುಸಿದ ಷೇರುಪೇಟೆ

ಷೇರುಪೇಟೆ

ಷೇರು ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. 79,705 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.58ರಷ್ಟು ಇಳಿಕೆ ಕಂಡಿದೆ. 24,367 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.42ರಷ್ಟು ತಗ್ಗಿದೆ.

ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಭೀತಿ, ಭಾರತ ಮತ್ತು ಜಾಗತಿಕವಾಗಿ ಸ್ಥೂಲ ಆರ್ಥಿಕತೆಯಲ್ಲಿನ ನಕಾರಾತ್ಮಕತೆ, ವಿದೇಶಿ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ, ಲಾಭ ಗಳಿಕೆಗಾಗಿ ಷೇರುಗಳ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ಶೇ 2.97, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.82, ಎನರ್ಜಿ ಶೇ 2.52, ಮಾಹಿತಿ ತಂತ್ರಜ್ಞಾನ ಶೇ 1.73, ನಿಫ್ಟಿ ಬ್ಯಾಂಕ್ ಶೇ 1.69, ನಿಫ್ಟಿ ಫೈನಾನ್ಸ್ ಶೇ 1.64, ರಿಯಲ್ ಎಸ್ಟೇಟ್ ಶೇ 1.44, ನಿಫ್ಟಿ ಆಟೊ ಶೇ 1.43 ಮತ್ತು ಅನಿಲ ಮತ್ತು ತೈಲ ಸೂಚ್ಯಂಕ ಶೇ 1.25ರಷ್ಟು ಕುಸಿದಿವೆ. ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 1.4, ಎಫ್‌ಎಂಸಿಜಿ ಶೇ 0.67 ಮತ್ತು ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 0.06ರಷ್ಟು ಗಳಿಸಿಕೊಂಡಿವೆ.

ಇಳಿಕೆ-ಏರಿಕೆ: ನಿಫ್ಟಿಯಲ್ಲಿ ಗ್ರಾಸಿಮ್ ಇಂಡಸ್ಟ್ರೀಸ್ ಶೇ 4.85, ಟಾಟಾ ಸ್ಟೀಲ್ ಶೇ 4.05, ಮಾರುತಿ ಸುಜುಕಿ ಶೇ 3.96, ಬಿಪಿಸಿಎಲ್ ಶೇ 3.95, ಇಂಡಸ್ ಇಂಡ್ ಬ್ಯಾಂಕ್ ಶೇ 3.87, ಅಲ್ಟ್ರಾ ಟೆಕ್ ಸಿಮೆಂಟ್ ಶೇ 3.85, ಟೈಟನ್ ಕಂಪನಿ ಶೇ 3.79, ಬಜಾಜ್ ಫಿನ್‌ಸರ್ವ್ ಶೇ 3.77, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 3.62, ಅದಾನಿ ಪೋರ್ಟ್ಸ್ ಶೇ 3.44ರಷ್ಟು ಮತ್ತು ಪವರ್ ಗ್ರಿಡ್ ಶೇ 3.32ರಷ್ಟು ಕುಸಿದಿವೆ.

ಸಿಪ್ಲಾ ಶೇ 3.11, ಐಷರ್ ಮೋಟರ್ಸ್ ಶೇ 2.3, ಎಚ್‌ಯುಎಲ್ ಶೇ 2.05, ಐಟಿಸಿ ಶೇ 1.32, ಬಜಾಜ್ ಆಟೊ ಶೇ 1.19, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 0.84, ಕೋಲ್ ಇಂಡಿಯಾ ಶೇ 0.83, ಅದಾನಿ ಎಂಟರ್ ಪ್ರೈಸಸ್ ಶೇ 0.77, ಒಎನ್‌ಜಿಸಿ ಶೇ 0.74 ಮತ್ತು ನೆಸ್ಲೆ ಇಂಡಿಯಾ ಶೇ 0.51ರಷ್ಟು ಹೆಚ್ಚಳ ಕಂಡಿವೆ.

ಮುನ್ನೋಟ: ಷೇರುಪೇಟೆಯಲ್ಲಿ ಅನಿಶ್ಚಿತ ವಾತಾವರಣ ಇರಲಿದ್ದು ಸೂಚ್ಯಂಕಗಳು ತ್ವರಿತ ಮತ್ತು ಹರಿತ ಏರಿಳಿತ ಕಾಣಲಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶೀಯ ಬೆಳವಣಿಗೆಗಳನ್ನು ಆಧರಿಸಿ ಮಾರುಕಟ್ಟೆ ಮತ್ತಷ್ಟು ಕುಸಿತ ಕಾಣುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಈ ವಾರ ಐಆರ್‌ಎಫ್‌ಸಿ, ಎನ್‌ಎಂಡಿಸಿ, ಎಂಟಾರ್ ಟೆಕ್ನಾಲಜೀಸ್, ಹಿಂಡಾಲ್ಕೋ ಇಂಡಸ್ಟ್ರೀಸ್, ಹೀರೊ ಮೋಟೊಕಾರ್ಪ್, ಐಆರ್‌ಸಿಟಿಸಿ, ಎಚ್‌ಎಎಲ್, ಎಂಡೂರೆನ್ಸ್ ಟೆಕ್ನಾಲಜೀಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಕ್ಕೆ ಅಧ್ಯಕ್ಷೆ ಮಾಧವಿ ಬುಚ್ ಪ್ರತಿಕ್ರಿಯೆ

'ಸೆಬಿ ವಿಶ್ವಾಸಾರ್ಹತೆ ಮೇಲೆ ದಾಳಿ'

ಮಾಧವಿ ಪುರಿ ಬುಚ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಹಾಗೂ ಅವರ ಪತಿ ಧವಲ್ ಬುಚ್ ಪಾಲುದಾರಿಕೆ ಹೊಂದಿದ್ದಾರೆ. ಹಾಗಾಗಿ, ಅದಾನಿ ಸಮೂಹ ವಿರುದ್ಧದ ಆರೋಪ ಕುರಿತಂತೆ ತನಿಖೆ ನಡೆಸಲು ಹಿಂದೇಟು ಹಾಕಲಾಗುತ್ತಿದೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿದೆ.

ಈ ಆರೋಪಕ್ಕೆ ಮಾಧವಿ ಹಾಗೂ ಅವರ ಪತಿ ಭಾನುವಾರ ಜಂಟಿಯಾಗಿ ಪ್ರತಿಕ್ರಿಯಿಸಿದ್ದು, 'ಹಿಂಡೆನ್‌ಬರ್ಗ್ ರಿಸರ್ಚ್ ಸೆಬಿಯ ವಿಶ್ವಾಸಾರ್ಹತೆ ಮೇಲೆ ದಾಳಿ ನಡೆಸಿದೆ. ಈ ಆರೋಪ ನಿರಾಧಾರವಾದುದು. ನಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಸುವ ಷಡ್ಯಂತ್ರ ಇದರ ಹಿಂದಿದೆ' ಎಂದು ದೂರಿದ್ದಾರೆ.

'ಹಿಂಡೆನ್‌ಬರ್ಗ್ ಆರೋಪವು ಪ್ರಚೋದನಕಾರಿಯಾಗಿದ್ದು, ಇದರಲ್ಲಿ ಸತ್ಯ ಅಡಗಿಲ್ಲ' ಎಂದು ಹೇಳಿದ್ದಾರೆ.

'ನಮ್ಮ ಜೀವನ ಮತ್ತು ವ್ಯವಹಾರವು ತೆರೆದ ಪುಸ್ತಕ ಇದ್ದಂತೆ. ಅದಾನಿ ಸಮೂಹದ ಬಗ್ಗೆ ಮಾಡಿದ ಆರೋಪದ ಬಗ್ಗೆ ಸೆಬಿಯಿಂದ ಹಿಂಡೆನ್‌ಬರ್ಗ್‌ಗೆ ಷೋಕಾಸ್ ನೋಟಿಸ್ ನೀಡಲಾಗಿದೆ. ಇದಕ್ಕೆ ಪ್ರತೀಕಾರವಾಗಿ ಈ ಹಾದಿ ತುಳಿದಿದೆ' ಎಂದು ಹೇಳಿದ್ದಾರೆ.

'ನಮ್ಮ ಆರ್ಥಿಕ ವಹಿವಾಟಿನ ದಾಖಲೆಗಳನ್ನು ಬಹಿರಂಗಪಡಿಸಲು ಯಾವುದೇ ಹಿಂಜರಿಕೆ ಇಲ್ಲ. ಸೆಬಿಯ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲಿನ ದಾಖಲೆಗಳನ್ನು ಯಾವುದೇ ಅಧಿಕಾರಯುತ ಸಂಸ್ಥೆಗಳು ಈಗಲೂ ಪರಿಶೀಲನೆ ನಡೆಸಬಹುದಾಗಿದೆ' ಎಂದು ಹೇಳಿದ್ದಾರೆ.

ಹಿಂಡೆನ್‌ಬರ್ಗ್ ಆರೋಪ ಏನು?: ಷೇರು ಮಾರುಕಟ್ಟೆಯ ವಾಸ್ತವಿಕ ಬೆಲೆಗಿಂತ ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು 2023ರ ಜನವರಿಯಲ್ಲಿ ಹಿಂಡೆನ್‌ಬರ್ಗ್ ವರದಿ ಪ್ರಕಟಿಸಿತ್ತು.

ವಾಸ್ತವಾಂಶ ತಿರುಚಿ ವರದಿ ಸಿದ್ಧಪಡಿಸಲಾಗಿದೆ ಎಂದು ಜುಲೈನಲ್ಲಿ ಸೆಬಿಯು, ಷೋಕಾಸ್ ನೋಟಿಸ್ ನೀಡಿತ್ತು. ಇದರ ಬೆನ್ನಲ್ಲೇ ಈ ಗಂಭೀರ ಆರೋಪ ಮಾಡಿದೆ.

ಬರ್ಮುಡಾ ಮತ್ತು ಮಾರಿಷಸ್‌ನಲ್ಲಿರುವ ಕಂಪನಿಗಳೊಂದಿಗೆ ಅದಾನಿ ಸಮೂಹವು ವ್ಯವಹಾರ ನಡೆಸುತ್ತಿದೆ. ಈ ಕಂಪನಿಗಳೊಟ್ಟಿಗೆ ಗೌತಮ್ ಅದಾನಿ ಅವರ ಹಿರಿಯ ಸಹೋದರ ವಿನೋದ್ ಅದಾನಿ ನಂಟು ಹೊಂದಿದ್ದಾರೆ. ಈ ಕಂಪನಿಗಳಲ್ಲಿ ಮಾಧವಿ ಮತ್ತು ಅವರ ಪತಿ ಸುಮಾರು ₹84 ಕೋಟಿ ಹೂಡಿಕೆ ಮಾಡಿದ್ದಾರೆ. ಅದನ್ನು ಬಹಿರಂಗಪಡಿಸಿಲ್ಲ ಎಂದು ದೂರಿದೆ.

ಕಳೆದ ಜನವರಿಯಲ್ಲಿ ಪ್ರಕಟಿಸಿದ್ದ ತನ್ನ ವರದಿಗೆ ಸಂಬಂಧಿಸಿದಂತೆ ಸಮರ್ಪಕವಾಗಿ ತನಿಖೆ ನಡೆಸಿಲ್ಲ. ಮಾಧವಿ ದಂಪತಿ, ಅದಾನಿ ಕಂಪನಿಗಳಲ್ಲಿ ಹೂಡಿಕೆ ಮಾಡಿರುವುದರಿಂದ ತನಿಖೆ ನಡೆಸುತ್ತಿಲ್ಲ ಎಂದು ದೂರಿದೆ.

ಷೇರು ಕುಸಿತ ಸಾಧ್ಯತೆ: ಹಿಂಡೆನ್‌ಬರ್ಗ್ ವರದಿ ಬಿಡುಗಡೆಯಾಗಿದ್ದ ವೇಳೆ ಅದಾನಿ ಸಮೂಹದ ಷೇರುಗಳ ಮೌಲ್ಯದಲ್ಲಿ ಭಾರಿ ಕುಸಿತ ಕಂಡಿತ್ತು. ಸೋಮವಾರದ ವಹಿವಾಟಿನಲ್ಲಿಯೂ ಅದಾನಿ ಕಂಪನಿಗಳ ಷೇರಿನ ಮೇಲೆ ಈ ಆರೋಪವು ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಹೂಡಿಕೆ ಮಾಡಿದ್ದು ಹೇಗೆ?

2017ರಲ್ಲಿ ಮಾಧವಿ ಅವರು ಸೆಬಿಯ ಪೂರ್ಣಕಾಲಿಕ ಸದಸ್ಯೆಯಾಗಿ ನೇಮಕವಾದರು. 2022ರ ಮಾರ್ಚ್‌ನಲ್ಲಿ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡರು.

ಬರ್ಮುಡಾ ಮೂಲದ ಗ್ಲೋಬಲ್ ಆಪರ್ಚುನಿಟೀಸ್ ಫಂಡ್, ಅದಾನಿ ಗ್ರೂಪ್‌ನ ಷೇರುಗಳ ವ್ಯವಹಾರ ನಡೆಸುತ್ತದೆ. ಇದರಲ್ಲಿ ಅವರು 2015ರಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಹಿಂಡೆನ್‌ಬರ್ಗ್ ಹೇಳಿದೆ.

ಆಸ್ತಿ ನಿರ್ವಹಣಾ ಸಂಸ್ಥೆಯಾದ ಇಂಡಿಯಾ ಇನ್ಫೊಲೈನ್ (ಐಐಎಫ್‌ಎಲ್) ನಿರ್ವಹಣೆ ಮಾಡುವ 'ಐಪಿಇ ಪ್ಲಸ್ ಫಂಡ್ 1'ರಲ್ಲಿ 2015ರ ಜೂನ್ 1ರಂದು ಮಾಧವಿ ಮತ್ತು ಅವರ ಪತಿ, ಸಿಂಗಪುರದಲ್ಲಿ ಖಾತೆ ತೆರೆದಿದ್ದಾರೆ. ಇದು ಮಾರಿಷಸ್‌ನಲ್ಲಿರುವ ಸಣ್ಣ ಫಂಡ್ ಆಗಿದೆ. ಇದರಲ್ಲಿ ವಿನೋದ್ ಅದಾನಿ ಕೂಡ ಹೂಡಿಕೆ ಮಾಡಿದ್ದಾರೆ ಎಂದು ಆರೋಪಿಸಿದೆ.

ಐಐಎಫ್‌ಎಲ್ ಸ್ಪಷ್ಟನೆ: 2013ರ ಅಕ್ಟೋಬರ್‌ನಿಂದ 2019ರ ಅಕ್ಟೋಬರ್‌ವರೆಗೆ ತನ್ನ ಒಡೆತನಕ್ಕೆ ಸೇರಿದ 'ಐಪಿಇ-ಪ್ಲಸ್ ಫಂಡ್ 1' ಕಾರ್ಯಾಚರಣೆ ನಡೆಸಿದೆ. ಇದರಲ್ಲಿ ಮಾಧವಿ ದಂಪತಿ ಹೂಡಿಕೆಯು ಶೇ 1.5ಕ್ಕಿಂತ ಕಡಿಮೆಯಿದೆ ಎಂದು ಐಐಎಫ್‌ಎಲ್ ಸ್ಪಷ್ಟನೆ ನೀಡಿದೆ. 'ಫಂಡ್ ಮೂಲಕ ಅದಾನಿ ಸಮೂಹದಲ್ಲಿ ನೇರ ಅಥವಾ ಪರೋಕ್ಷವಾಗಿ ಯಾವುದೇ ಹೂಡಿಕೆ ಮಾಡಿಲ್ಲ' ಎಂದು ಹೇಳಿದೆ.

ಆರೋಪ ನಿರಾಕರಿಸಿದ ಅದಾನಿ ಸಮೂಹ

'ಹಿಂಡೆನ್‌ಬರ್ಗ್ ಆರೋಪವು ದುರುದ್ದೇಶಪೂರಿತ ಹಾಗೂ ಹಾನಿಕರವಾಗಿದೆ. ಸಂಪೂರ್ಣವಾಗಿ ತಿರುಚಲಾಗಿದ್ದು, ಇದರ ಹಿಂದೆ ಲಾಭದ ಉದ್ದೇಶ ಅಡಗಿದೆ. ಕಾನೂನು ನಿರ್ಲಕ್ಷಿಸಿ ಸತ್ಯವನ್ನು ಮರೆ ಮಾಚಲಾಗಿದೆ' ಎಂದು ಅದಾನಿ ಸಮೂಹ ಪ್ರತಿಕ್ರಿಯಿಸಿದೆ.

'ಕಳೆದ ವರ್ಷದ ಜನವರಿಯಲ್ಲಿ ಹಿಂಡೆನ್‌ಬರ್ಗ್ ಮಾಡಿದ್ದ ಆರೋಪವನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಈಗ ಮಾಡಿರುವ ಆರೋಪವು ಆಧಾರರಹಿತವಾಗಿದೆ. ಅದರ ಆಪಾದನೆಗಳು ವಿಶ್ವಾಸಾರ್ಹವಾಗಿಲ್ಲ. ಮತ್ತೆ ಮರುಸೃಷ್ಟಿ ಮಾಡಿದೆ' ಎಂದು ಹೇಳಿದೆ. 'ಕಂಪನಿಯ ಸಾಗರೋತ್ತರ ವ್ಯವಹಾರವು ಪಾರದರ್ಶಕವಾಗಿದೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲಾಗಿದೆ' ಎಂದು ಹೇಳಿದೆ. ಭಾರತೀಯ ಕಾನೂನುಗಳನ್ನು ಉಲ್ಲಂಘಿಸಿರುವ ಸಂಸ್ಥೆಯೊಂದು ಹತಾಶೆಯಿಂದ ಆರೋಪ ಮಾಡುತ್ತಿದೆ ಎಂದು ದೂರಿದೆ.

ಜೆಪಿಸಿ ತನಿಖೆಗೆ ಒಪ್ಪಿಸಿ: ಖರ್ಗೆ

ನವದೆಹಲಿ (ಪಿಟಿಐ): 'ಮಾಧವಿ ಬುಚ್ ವಿರುದ್ಧ ದೊಡ್ಡ ಷೇರು ಹಗರಣದ ಆರೋಪ ಕೇಳಿಬಂದಿದೆ. ಇದನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ತನ್ನ ಮಿತ್ರನನ್ನು ರಕ್ಷಿಸಿಕೊಳ್ಳಲು ಏಳು ದಶಕದಿಂದ ಕಷ್ಟಪಟ್ಟು ನಿರ್ಮಿಸಿದ ಭಾರತದ ಸಾಂವಿಧಾನಿಕ ಸಂಸ್ಥೆಗಳೊಂದಿಗೆ ರಾಜಿ ಮಾಡಿಕೊಳ್ಳುವುದನ್ನು ಮುಂದುವರಿಸಿದ್ದಾರೆ' ಎಂದು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

ತನಿಖೆ ಪೂರ್ಣ ಸೆಬಿ ಹೇಳಿಕೆ

ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಆರೋಪಗಳಿಗೆ ಸಂಬಂಧಿಸಿದಂತೆ ಎಲ್ಲಾ ತನಿಖೆಗಳು ಪೂರ್ಣಗೊಂಡಿವೆ. ಹಿಂಡೆನ್‌ಬರ್ಗ್ ಆರೋಪಕ್ಕೆ ಸಂಬಂಧಿಸಿದ ಒಂದು ತನಿಖೆಯಷ್ಟೇ ಪ್ರಗತಿಯಲ್ಲಿದೆ ಎಂದು ಸೆಬಿ ತಿಳಿಸಿದೆ.

ಒಟ್ಟು 24 ತನಿಖೆಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. 100ಕ್ಕೂ ಸಮನ್ಸ್ ನೀಡಲಾಗಿತ್ತು. 300ಕ್ಕೂ ಹೆಚ್ಚು ದಾಖಲೆಗಳಿಗೆ ಸಂಬಂಧಿಸಿದ ಸುಮಾರು 12 ಸಾವಿರ ಪುಟಗಳನ್ನು ಪರಿಶೀಲಿಸಲಾಗಿದೆ ಎಂದು ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000 ಪಡೆಯಿರಿ, ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರ್ಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Post Graduation Diploma in Information Technology
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು.
(Qual : SSLC/ PUC) ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Email: info@thercss.com
Website: www.thercss.com
The RCSS
MOB.: 9008419955, 9901520055, 9449198555

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಪ್ರವಾಸ

Travel

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

25ನೇ ಮುಖ್ಯ ನ್ಯಾಯಮೂರ್ತಿಯಾಗಿ ಸೈಯದ್ ರೆಫಾತ್ ಅಹ್ಮದ್

ಬಾಂಗ್ಲಾ: ನೂತನ ಸಿಜೆ ಪ್ರಮಾಣ ಸ್ವೀಕಾರ

ಢಾಕಾ(ಎಎಫ್‌ಪಿ): ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಸೈಯದ್ ರೆಫಾತ್ ಅಹ್ಮದ್ ಅವರು ಬಾಂಗ್ಲಾದೇಶ ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಸೈಯದ್ ರೆಫಾತ್ ಅಹ್ಮದ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದ್ದಾರೆ ಎಂದು ಅಧ್ಯಕ್ಷರ ಪತ್ರಿಕಾ ಕಾರ್ಯದರ್ಶಿ ಶಿಪ್ಲು ಜಮಾನ್ ತಿಳಿಸಿದ್ದಾರೆ.

ಅಹ್ಮದ್ ಅವರು ಬಾಂಗ್ಲಾದೇಶದ 25ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ. ಢಾಕಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನದ ನಂತರ ಅವರು ಆಕ್ಸ್‌ಫರ್ಡ್ ವಿ.ವಿ ಹಾಗೂ ಅಮೆರಿಕದ ಟಫ್ಟ್ಸ್ ವಿ.ವಿಯಲ್ಲಿ ಉನ್ನತ ವ್ಯಾಸಂಗ ಪೂರೈಸಿದ್ದಾರೆ.

ವಿದ್ಯಾರ್ಥಿಗಳ ಪ್ರತಿಭಟನೆ ಹಾಗೂ ಎಚ್ಚರಿಕೆಗೆ ಮಣಿದು, ಒಬೇದುಲ್ಲಾ ಹಸನ್ ಅವರು ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಶನಿವಾರ ರಾಜೀನಾಮೆ ನೀಡಿದ್ದರು. ಅವರು ಮಾಜಿ ಪ್ರಧಾನಿ ಶೇಖ್ ಹಸೀನಾ ನಿಷ್ಠರಾಗಿದ್ದು, ಕೂಡಲೇ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನನಿರತ ವಿದ್ಯಾರ್ಥಿಗಳು ಆಗ್ರಹಿಸಿದ್ದರು.

ದೌರ್ಜನ್ಯ ತಡೆಗಟ್ಟುವಂತೆ ಆಗ್ರಹಿಸಿ ಬಾಂಗ್ಲಾದೇಶದ ಢಾಕಾದಲ್ಲಿ ಹಿಂದೂಗಳು ಭಾನುವಾರ ಪ್ರತಿಭಟನೆ ನಡೆಸಿದರು —ಎಪಿ ಚಿತ್ರ

11 ಬಾಂಗ್ಲಾದೇಶಿ ನುಸುಳುಕೋರರ ಬಂಧನ

ನವದೆಹಲಿ (ಪಿಟಿಐ): ಭಾರತಕ್ಕೆ ಅಕ್ರಮವಾಗಿ ನುಸುಳಲು ಯತ್ನಿಸಿದ ಬಾಂಗ್ಲಾದೇಶದ 11 ಮಂದಿಯನ್ನು ಬಂಧಿಸಲಾಗಿದೆ ಎಂದು ಬಿಎಸ್‌ಎಫ್ ಭಾನುವಾರ ತಿಳಿಸಿದೆ.

ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಮೇಘಾಲಯದ ಅಂತರರಾಷ್ಟ್ರೀಯ ಗಡಿ ಮೂಲಕ ಇವರು ಭಾರತದ ಒಳಗೆ ನುಸುಳಲು ಯತ್ನಿಸಿದ್ದರು.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ತಲಾ ಇಬ್ಬರು ಹಾಗೂ ಮೇಘಾಲಯದಲ್ಲಿ ಏಳು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರನ್ನು ವಿಚಾರಣೆ ನಡೆಸಿದ ಬಳಿಕ ಆಯಾ ರಾಜ್ಯಗಳ ಪೊಲೀಸರಿಗೆ ಹಸ್ತಾಂತರಿಸಲಾಗುವುದು ಎಂದು ವಕ್ತಾರರು ಮಾಹಿತಿ ನೀಡಿದ್ದಾರೆ.

'ಚುನಾವಣೆ ನಡೆಯದಿದ್ದರೆ ಮತ್ತೆ ಅರಾಜಕತೆ'

ನವದೆಹಲಿ(ಎಎಫ್‌ಪಿ): ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರ ರಚನೆಯಾಗಿದ್ದರೂ, ಶೀಘ್ರವೇ ಹೊಸದಾಗಿ ಚುನಾವಣೆ ನಡೆಯದಿದ್ದಲ್ಲಿ ಮತ್ತೆ ಅರಾಜಕತೆ ಸೃಷ್ಟಿಯಾಗಲಿದೆ ಎಂದು ಮಾಜಿ ಪ್ರಧಾನಿ ಶೇಖ್ ಹಸೀನಾ ಪುತ್ರ ಸಾಜೀಬ್ ವಾಜೆದ್ ಜಾಯ್ ಭಾನುವಾರ ಎಚ್ಚರಿಸಿದ್ದಾರೆ.

ವಾಷಿಂಗ್ಟನ್‌ನಲ್ಲಿರುವ ಅವರು ಎಎಫ್‌ಪಿಗೆ ನೀಡಿರುವ ಸಂದರ್ಶನದಲ್ಲಿ ಈ ಮಾತು ಹೇಳಿದ್ದಾರೆ. 'ಬಾಂಗ್ಲಾದೇಶದ ಮಧ್ಯಂತರ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲ. ಪ್ರತಿಭಟನನಿರತ ಗುಂಪು ಸೂಚಿಸಿದ ವ್ಯಕ್ತಿಯನ್ನು ಸರ್ಕಾರ ಕೈಬಿಡಬೇಕು ಎಂಬ ಸ್ಥಿತಿ ಇದೆ. ಹೀಗಾಗಿ ಶೀಘ್ರವೇ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರಬೇಕು' ಎಂದು ಹೇಳಿದ್ದಾರೆ.

ಸುಳ್ಳು ಸುದ್ದಿ ಪ್ರಸಾರ: ಮಾಧ್ಯಮ ಸಂಸ್ಥೆ ಬಂದ್- ಬಾಂಗ್ಲಾ ಸರ್ಕಾರ ಎಚ್ಚರಿಕೆ

ಢಾಕಾ(ಪಿಟಿಐ): 'ದಾರಿ ತಪ್ಪಿಸುವ ಇಲ್ಲವೇ ಸುಳ್ಳು ಸುದ್ದಿ'ಗಳನ್ನು ಪ್ರಕಟಿಸಿದಲ್ಲಿ ಅಥವಾ ಪ್ರಸಾರ ಮಾಡಿದಲ್ಲಿ, ಸಂಬಂಧಿಸಿದ ಮಾಧ್ಯಮ ಸಂಸ್ಥೆಗಳನ್ನು ಮುಚ್ಚಲಾಗುವುದು ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಭಾನುವಾರ ಕಠಿಣ ಎಚ್ಚರಿಕೆ ನೀಡಿದೆ.

'ಮಾಧ್ಯಮಗಳು ಸತ್ಯವನ್ನು ಎತ್ತಿ ಹಿಡಿಯದಿದ್ದರೆ ದೇಶ ಮುಗ್ಗರಿಸುತ್ತದೆ' ಎಂದು ಗೃಹ ಸಚಿವಾಲಯದ ಸಲಹೆಗಾರ ಬ್ರಿಗೇಡಿಯರ್ ಜನರಲ್ (ನಿವೃತ್ತ) ಎಂ.ಸಖಾವತ್ ಹುಸೇನ್ ಹೇಳಿದರು.

ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಗಾಯಗೊಂಡು, ರಾಜರ್‌ಬಾಗ್ ಸೆಂಟ್ರಲ್ ಪೊಲೀಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪೊಲೀಸರ ಆರೋಗ್ಯ ವಿಚಾರಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಇತ್ತೀಚೆಗೆ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು. ಇದರಲ್ಲಿ ಪಾತ್ರವಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಅಂಚೆ, ದೂರಸಂಪರ್ಕ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಲಹೆಗಾರ ನಹಿದ್ ಇಸ್ಲಾಂ ಹೇಳಿದರು.

ಲಾಸ್ ಏಂಜಲೀಸ್‌ನತ್ತ ಒಲಿಂಪಿಕ್ಸ್ ಪಯಣ

ಸಮಾರೋಪ ಸಮಾರಂಭದಲ್ಲಿ ಭಾರತ ಧ್ವಜ ಹಿಡಿದು ಸಾಗುತ್ತಿರುವ ಮನು ಭಾಕರ್ ಮತ್ತು ಪಿ.ಆರ್. ಶ್ರೀಜೇಶ್ –ಪಿಟಿಐ ಚಿತ್ರ

ಪ್ಯಾರಿಸ್ (ಪಿಟಿಐ): ಪ್ರೇಮನಗರಿ ಪ್ಯಾರಿಸ್‌ನಲ್ಲಿ ಭಾನುವಾರ ರಾತ್ರಿ ವಿಶ್ವದ ಮಹಾನ್ ಕ್ರೀಡಾಮೇಳ ಒಲಿಂಪಿಕ್ ಕೂಟಕ್ಕೆ ತೆರೆಬಿತ್ತು.

ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಪಿಯರೆ ಡಿ ಕೂಬರ್ತಿ ಅವರ ತವರೂರಿನಲ್ಲಿ ಕಳೆದ 19 ದಿನಗಳಿಂದ ನಡೆದ ಕೂಟದಲ್ಲಿ ಹಲವು ದಾಖಲೆಗಳು ನಿರ್ಮಾಣವಾದವು. ಹೊಸ ತಾರೆಗಳು ಉದಯಿಸಿದರು. ಹತ್ತಾರು ಅವಿಸ್ಮರಣೀಯ ಕ್ರೀಡಾಸ್ಫೂರ್ತಿಯ ಕ್ಷಣಗಳು ದಾಖಲಾದವು.

2028ರಲ್ಲಿ ಒಲಿಂಪಿಕ್ ಕೂಟಕ್ಕೆ ಆತಿಥ್ಯ ವಹಿಸಲಿರುವ 'ಮನರಂಜನೆ ನಗರಿ' ಲಾಸ್ ಏಂಜಲೀಸ್‌ಗೆ ಬಾವುಟವನ್ನು ಹಸ್ತಾಂತರಿಸಲಾಯಿತು. ಆತಿಥೇಯ ಫ್ರಾನ್ಸ್‌ನ ಈಜು ಚಾಂಪಿಯನ್ ಲಿಯೊ ಮಾರಷಾ ಕ್ರೀಡಾಜ್ಯೋತಿಯನ್ನು ಹಸ್ತಾಂತರಿಸಿದರು. ಒಟ್ಟು 126 ಪದಕಗಳನ್ನು ಜಯಿಸಿದ ಅಮೆರಿಕವು ತನ್ನ ದೇಶದ ಲಾಸ್ ಏಂಜಲೀಸ್‌ನಲ್ಲಿ ಮುಂದಿನ ಬಾರಿ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸುತ್ತಿರುವುದು ವಿಶೇಷ.

ಜುಲೈ 26ರಂದು ಸೆನ್ ನದಿಯಲ್ಲಿ ಸುಮಾರು 4 ತಾಸು ನಡೆದಿದ್ದ ಭವ್ಯ ಸಮಾರಂಭದಲ್ಲಿ ಕೂಟ ಉದ್ಘಾಟನೆಯಾಗಿತ್ತು. ಅದರ ನಂತರ 200ಕ್ಕೂ ಹೆಚ್ಚು ದೇಶಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ತಮ್ಮ ಸಾಮರ್ಥ್ಯ ಪಣಕ್ಕೊಡ್ಡಿದ್ದರು. ದೊಡ್ಡ, ಸಣ್ಣ ರಾಷ್ಟ್ರಗಳ ಎಲ್ಲ ಧರ್ಮ, ವರ್ಣಗಳ ಜನರು ಒಂದೇ ಸೂರಿನಡಿಯಲ್ಲಿ ಆಡಿ, ಓಡಿ, ಜಿಗಿದು, ನಲಿದರು. ಪದಕ ಗೆದ್ದವರು ಸಂಭ್ರಮಿಸಿದರು. ಸೋತವರು ಮುಂದಿನ ಬಾರಿ ಜಯಿಸುವ ಕನಸಿನೊಂದಿಗೆ ಮರಳಿದರು.

ಸಮಾರೋಪ ಸಮಾರಂಭದಲ್ಲಿ ಫ್ರಾನ್ಸ್ ದೇಶದ ಜನಪದ ಕಲೆಗಳ ಪ್ರದರ್ಶನ, ನೃತ್ಯ, ಸಂಗೀತದ ರಸದೌತಣ ನಡೆಯಿತು. ಕ್ರೀಡೆಗಳು ಮತ್ತು ಸಮಾರಂಭಗಳನ್ನು ಕಣ್ತುಂಬಿಕೊಂಡ ಲಕ್ಷಾಂತರ ಕ್ರೀಡಾಭಿಮಾನಿಗಳು ನೆನಪಿನ ಬುತ್ತಿಯೊಂದಿಗೆ ಮರಳಿದರು.


ಪ್ಯಾರಿಸ್‌ನ ಹೊರವಲಯದ ಸೇಂಟ್ ಡೆನಿಸ್‌ನ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ಒಲಿಂಪಿಕ್ಸ್ ಸಮಾರೋಪ ಸಮಾರಂಭದಲ್ಲಿ ಫ್ರೆಂಚ್ ಧ್ವಜ ಮತ್ತು ಒಲಿಂಪಿಕ್ ಧ್ವಜರೋಹಣ ನೆರವೇರಿಸಲಾಯಿತು –ಎಎಫ್‌ಪಿ ಚಿತ್ರ

ಪ್ಯಾರಿಸ್‌ನಲ್ಲಿ ಭಾರತಕ್ಕೆ ದಕ್ಕಿದ್ದು ಒಂದು ಬೆಳ್ಳಿ ಮತ್ತು ಐದು ಕಂಚಿನ ಪದಕ • ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಒಂದು ಚಿನ್ನ ಸೇರಿ ಏಳು ಪದಕ ಗೆದ್ದಿದ್ದ ಭಾರತ

ಪದಕಗಳು ಆರು; ಭವಿಷ್ಯದ ನಿರೀಕ್ಷೆಗಳು ಹತ್ತಾರು

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಏಳು ಪದಕ ಜಯಿಸಿದ್ದ ಭಾರತ ಅಮೋಘ ಸಾಧನೆ ಮಾಡಿತ್ತು. ಈ ಸಲ ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಕ್ರೀಡಾ ಇತಿಹಾಸದಲ್ಲಿಯೇ ಅತ್ಯಂತ ಬಲಿಷ್ಠ ಮತ್ತು ದೊಡ್ಡ ತಂಡವನ್ನು ಈ ಬಾರಿ ಭಾಗವಹಿಸಿತ್ತು. ಅದರಿಂದಾಗಿ ಸಹಜವಾಗಿಯೇ ಪದಕಗಳ ಸಂಖ್ಯೆ ಎರಡಂಕಿ ದಾಟುವ ಕನಸು ಗರಿಗೆದರಿತ್ತು.

ಆದರೆ ಅಂತಿಮವಾಗಿ ಭಾರತ ತಂಡವು ಆರು ಪದಕಗಳನ್ನು ಗೆದ್ದು ಅಭಿಯಾನ ಮುಗಿಸಿದೆ. ಅಪಾರ ನಿರೀಕ್ಷೆ ಮೂಡಿಸಿದ ಕೆಲವರು ನಿರಾಶೆ ಮೂಡಿಸಿದರು. ಇನ್ನು ಕೆಲವರು ಭರವಸೆ ಉಳಿಸಿಕೊಂಡರು.
ಕೆಲವು ಕ್ರೀಡೆಗಳಲ್ಲಿ 'ಕೈಗೆ ಬಂದ ಪದಕ ಕೊರಳು ಅಲಂಕರಿಲಿಲ್ಲ' ಎಂಬಂತಾಯಿತು. ಈ ಹಾದಿಯಲ್ಲಿ ಒಂದಿಷ್ಟು ವಿವಾದಗಳೂ ಸದ್ದು ಮಾಡಿದವು. ಅವುಗಳ ವಿವರ ಇಲ್ಲಿವೆ;

ನೀರಜ್ ಚೋಪ್ರಾ

ದಶಕಗಳ ಹಿಂದೆ ಒಲಿಂಪಿಕ್ಸ್‌ನಲ್ಲಿ ಭಾರತದ ಅಥ್ಲೀಟ್‌ಗಳು ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಗಮನ ಸೆಳೆದಿದ್ದು ಕಡಿಮೆ. ಆದರೆ ಈ ಬಾರಿ ಜಗದ ಕಣ್ಣು ಜಾವೆಲಿನ್ ಥ್ರೋ ಅಂಗಳದತ್ತ ನೆಟ್ಟಿತ್ತು. ಅದಕ್ಕೆ ಕಾರಣ ನೀರಜ್ ಚೋಪ್ರಾ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ಅವರ ಮೇಲೆ ಎಲ್ಲರ ನಿರೀಕ್ಷೆ ಇತ್ತು. ಇಲ್ಲಿಯೂ ಚಿನ್ನ ಗಳಿಸುವ ಭರವಸೆ ಮೂಡಿತ್ತು. ಕಳೆದ ಮೂರು ವರ್ಷಗಳಲ್ಲಿ ಹರಿಯಾಣದ ಹುಡುಗ ಏಷ್ಯನ್ ಗೇಮ್ಸ್, ವಿಶ್ವ ಚಾಂಪಿಯಷಿಪ್, ಡೈಮಂಡ್ ಲೀಗ್‌ಗಳಲ್ಲಿ ಪದಕ ಸಾಧನೆ ಮಾಡಿದ್ದರು. ತೊಡೆ ಸ್ನಾಯುವಿನ ನೋವಿನಲ್ಲಿಯೂ ಅವರು ಪ್ಯಾರಿಸ್‌ನಲ್ಲಿ ಕಣಕ್ಕಿಳಿದರು.

ಆದರೆ 89.45 ಮೀ ದೂರ ಥ್ರೋ ದಾಖಲಿಸಿದ ಅವರು ಬೆಳ್ಳಿ ಜಯಿಸಿದರು. ಅವರ ಸ್ನೇಹಿತ, ಪಾಕಿಸ್ತಾನದ ಅರ್ಷದ್ ನದೀಂ (92.97ಮಿ) ಚಿನ್ನ ಜಯಿಸಿದರು. ಪಾಕ್ ಅಥ್ಲೀಟ್ ಟೋಕಿಯೊದಲ್ಲಿ ಪದಕ ಜಯಿಸಿರಲಿಲ್ಲ.

ಅಭಿಮಾನಿಗಳ ಜೊತೆ ಸೆಲ್ಫಿ ಕ್ಲಿಕ್ಕಿಸಿದ ನೀರಜ್ ಚೋಪ್ರಾ –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

ಮನು ಭಾಕರ್

ಟೋಕಿಯೊದಲ್ಲಿ ನಿರಾಶೆ ಅನುಭವಿಸಿದ್ದ ಶೂಟರ್ ಮನು ಭಾಕರ್ ಪ್ಯಾರಿಸ್‌ನಲ್ಲಿ ಗುರಿ ತಪ್ಪಲಿಲ್ಲ. 10 ಮೀ ಏರ್ ಪಿಸ್ತೂಲ್ ಮಹಿಳೆಯರ ವೈಯಕ್ತಿಕ ಮತ್ತು ಮಿಶ್ರ ತಂಡ ವಿಭಾಗಗಳಲ್ಲಿ ಕಂಚಿನ ಪದಕಗಳನ್ನು ಗೆದ್ದರು. ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ ಭಾರತೀಯ ಕ್ರೀಡಾಪಟುವೆಂಬ ದಾಖಲೆ ಮಾಡಿದರು. 25 ಮೀ. ಸ್ಪೋರ್ಟ್ಸ್ ಪಿಸ್ತೂಲ್ ವಿಭಾಗದಲ್ಲಿ ಅತ್ಯಲ್ಪ ಅಂತರದಲ್ಲಿ ಪದಕವು ಅವರ ಕೈತಪ್ಪಿತು. ಇಲ್ಲದಿದ್ದರೆ 'ಹ್ಯಾಟ್ರಿಕ್' ಸಾಧನೆ ಅವರ ಸನಿಹದಲ್ಲಿಯೇ ಇತ್ತು.


ಎರಡು ಪದಕಗಳನ್ನು ಗೆದ್ದ ಶೂಟರ್ ಮನು ಭಾಕರ್ –ಪ್ರಜಾವಾಣಿ ಚಿತ್ರ

ಕೈತಪ್ಪಿದ ಪದಕಗಳು

ಲಕ್ಷ್ಯ ಸೇನ್

ಶೂಟಿಂಗ್‌ನಲ್ಲಿ ಮನು ಭಾಕರ್ 25 ಮೀಟರ್ಸ್ ಸ್ಪೋರ್ಟ್ಸ್ ಪಿಸ್ತೂಲ್ ಸ್ಪರ್ಧೆಯಲ್ಲಿ ಗೆದ್ದು ಹ್ಯಾಟ್ರಿಕ್ ಸಾಧಿಸುವ ಅವರ ಗುರಿ ಈಡೇರಲಿಲ್ಲ. ಶೂಟಿಂಗ್ ಕ್ರೀಡೆಯಲ್ಲಿಯೇ ಮಹೇಶ್ವರಿ ಚೌಹಾಣ್–ಅನಂತ್‌ಜೀತ್ ನರೂಕಾ (ಸ್ಕೀಟ್ ಮಿಶ್ರ ತಂಡ), ಅರ್ಜುನ್ ಬಬುತಾ (ಪುರುಷರ 10 ಮೀ. ರೈಫಲ್ ಶೂಟಿಂಗ್), ಲಕ್ಷ್ಯ ಸೇನ್ (ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್), ಅಂಕಿತಾ ಭಕತ್– ಧೀರಜ್ ಬೊಮ್ಮದೇವರ (ಆರ್ಚರಿ) ಹಾಗೂ ಮೀರಾಬಾಯಿ ಚಾನು (ಮಹಿಳೆಯರ ವೇಟ್‌ಲಿಫ್ಟಿಂಗ್) ಅವರು ನಾಲ್ಕನೇ ಸ್ಥಾನ ಪಡೆದರು.

ಸ್ವಪ್ನಿಲ್ ಕುಸಾಳೆ

ಭಾರತಕ್ಕೆ ಈ ಸಲ ಒಲಿದ ಆರು ಪದಕಗಳ ಪೈಕಿ ಅಚ್ಚರಿ ಮೂಡಿಸಿದ್ದು ಸ್ವಪ್ನಿಲ್ ಕುಸಳೆ ಅವರು ಕಂಚು ಜಯಿಸಿತ್ತು. 50 ಮೀ ತ್ರೀ ಪೊಸಿಷನ್ ರೈಫಲ್ ವಿಭಾಗದಲ್ಲಿ ಅವರು ಗೆದ್ದರು. ಇದೇ ವಿಭಾಗದಲ್ಲಿದ್ದ ಐಶ್ವರಿ ಪ್ರತಾಪ್ ತೋಮರ್ ಅವರು ಪದಕ ಜಯಿಸುವ ಭರವಸೆ ಮೂಡಿಸಿತ್ತು. ಅವರು ವಿಫಲರಾದರು. ಆದರೆ ಮಹಾರಾಷ್ಟ್ರದ ಸ್ವಪ್ನಿಲ್ ಪದಕ ಜಯಿಸಿದರು.

ಅಮನ್ ಸೆಹ್ರಾವತ್

ಕುಸ್ತಿ ಕಣದಲ್ಲಿ ಸಂತಸದ ತಂಗಾಳಿ ಬೀಸುವಂತೆ ಮಾಡಿದ್ದು ಅಮನ್ ಸೆಹ್ರಾವತ್. ಪುರುಷರ ವಿಭಾಗದಿಂದ ಭಾರತವನ್ನು ಪ್ರತಿನಿಧಿಸಿದ ಏಕೈಕ ಕುಸ್ತಿಪಟು ಅಮನ್. 21 ವರ್ಷದ ಯುವ ಪೈಲ್ವಾನ ತಮ್ಮ ಚೊಚ್ಚಲ ಒಲಿಂಪಿಕ್ಸ್‌ನಲ್ಲಿಯೇ ಕಂಚು ಗೆದ್ದರು. 11ನೇ ವಯಸ್ಸಿನಲ್ಲಿಯೇ ಅಪ್ಪ, ಅಮ್ಮನನ್ನು ಕಳೆದುಕೊಂಡು ಅನಾಥನಾಗಿದ್ದ ಹುಡುಗ ದೆಹಲಿಯ ಛತ್ರಸಾಲ ಅಖಾಡದಲ್ಲಿ ಕುಸ್ತಿಪಟುವಾಗಿ ಬೆಳೆದರು. ಕಂಚಿನ ಪದಕದ ಪ್ಲೇಆಫ್‌ನಲ್ಲಿ ಅವರು ಪೋರ್ಟೊರಿಕೊದ ಡೇರಿಯನ್ ಟಾಯ್ ಕ್ರೂಜ್ ವಿರುದ್ಧ ಗೆದ್ದರು.


ಅಮನ್ ಸೆಹ್ರಾವತ್ – ಎಪಿ/ಪಿಟಿಐ ಚಿತ್ರ

ಹಾಕಿ ಕಂಚು

ಭಾರತದ ಹಾಕಿ ತಂಡವು ಈ ಬಾರಿಯೂ ನಿರೀಕ್ಷೆ ಹುಸಿಗೊಳಿಸಲಿಲ್ಲ. ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು. 1980ರ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ನಂತರ 40 ವರ್ಷಗಳವರೆಗೆ ಭಾರತವು ಹಾಕಿಯಲ್ಲಿ ಒಂದೂ ಪದಕ ಜಯಿಸಿರಲಿಲ್ಲ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮನಪ್ರೀತ್ ಸಿಂಗ್ ಬಳಗವು ಕಂಚು ಗೆದ್ದಿತ್ತು. ಈ ಬಾರಿ ಹರ್ಮನ್‌ಪ್ರೀತ್ ಸಿಂಗ್ ಬಳಗವು ಟೂರ್ನಿಯುದ್ದಕ್ಕೂ ಉತ್ತಮವಾಗಿ ಆಡಿತು. ಅದರಲ್ಲೂ ಕ್ವಾರ್ಟರ್‌ಫೈನಲ್‌ನಲ್ಲಿ ಗ್ರೇಟ್ ಬ್ರಿಟನ್ ವಿರುದ್ಧ ಪಂದ್ಯದ ಬಹುತೇಕ ಭಾಗದಲ್ಲಿ 10 ಆಟಗಾರರೊಂದಿಗೆ (ಅಮಿತ್ ರೋಹಿದಾಸ್‌ಗೆ ರೆಡ್ ಕಾರ್ಡ್) ತಂಡವು ಆಡಿತ್ತು. ಆದರೆ ಸೆಮಿಫೈನಲ್‌ನಲ್ಲಿ ಮುಗ್ಗರಿಸಿತು. ಇದರಿಂದಾಗಿ ಚಿನ್ನ ಅಥವಾ ಬೆಳ್ಳಿ ಪದಕ ಜಯಿಸುವ ಅವಕಾಶ ಕೈಜಾರಿತು. ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರ ಆಟವು ಅಮೋಘವಾಗಿತ್ತು. ಅವರು ಹಾಕಿ ಕ್ರೀಡೆಗೆ ವಿದಾಯ ಹೇಳಿದರು.

ಪಿ.ಆರ್. ಶ್ರೀಜೇಶ್

ವಿವಾದಗಳ ಸದ್ದು

- **ಭಾರತದ ಅಭಿಯಾನವು ವಿವಾದಗಳಿಲ್ಲದೇ ಅಂತ್ಯವಾಗಲು ಸಾಧ್ಯವೇ?**

ಪ್ರಮುಖವಾಗಿ ಈ ಬಾರಿ ಕುಸ್ತಿಪಟು ವಿನೇಶ್ ಫೋಗಟ್ ಅವರ ಅನರ್ಹತೆಯು ದೊಡ್ಡ ವಿವಾದಕ್ಕೆ ಕಾರಣವಾಯಿತು. ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಕುಸ್ತಿಯಲ್ಲಿ ವಿನೇಶ್ ಫೈನಲ್ ಪ್ರವೇಶಿಸಿದ್ದರು. ಇದರಿಂದಾಗಿ ದೇಶಕ್ಕೆ ಚಿನ್ನ ಲಭಿಸುವ ಭರವಸೆ ಮೂಡಿತ್ತು. ಆದರೆ ಪಂದ್ಯಪೂರ್ವ ತೂಕಪರೀಕ್ಷೆಯಲ್ಲಿ ಅವರು 100 ಗ್ರಾಂ ಹೆಚ್ಚು ತೂಗಿದ್ದರಿಂದ ಅನರ್ಹಗೊಳಿಸಲಾಯಿತು. ಇದರಿಂದಾಗಿ ಭಾರತಕ್ಕೆ ಪದಕ ಕೈತಪ್ಪಿತು. ವಿನೇಶ್ ತಮ್ಮ ಕ್ರೀಡಾಜೀವನಕ್ಕೆ ನಿವೃತ್ತಿ ಘೋಷಿಸಿದರು. ಸೆಮಿಫೈನಲ್ ಜಯಿಸುವವರೆಗೂ ತಾವು ಅರ್ಹರಾಗಿದ್ದ ಕಾರಣ ಬೆಳ್ಳಿ ಪದಕವನ್ನಾದರೂ ನೀಡಬೇಕು ಎಂದು ಅವರು ಕ್ರೀಡಾ ನ್ಯಾಯಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ.

ವಿನೇಶ್ ಫೋಗಟ್

53 ಕೆ.ಜಿ. ವಿಭಾಗದ ಕುಸ್ತಿಪಟು ಅಂತಿಮ ಪಂಘಲ್ ಅವರು ಕ್ರೀಡಾಗ್ರಾಮ ಪ್ರವೇಶಕ್ಕೆ ತಮಗೆ ನೀಡಲಾಗಿದ್ದ ಮಾನ್ಯತೆಪತ್ರವನ್ನು ಸಹೋದರಿಗೆ ಕೊಟ್ಟಿದ್ದರು. ತಮ್ಮ ಕೋಣೆಯಲ್ಲಿದ್ದ ಕೆಲವು ಸಾಮಗ್ರಿಗಳನ್ನು ತಂದುಕೊಡಲು ಹೇಳಿದ್ದರು. ಈ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿತು. 24 ಗಂಟೆಯೊಳಗೆ ದೇಶ ತೊರೆಯುವಂತೆ ಸೂಚಿಸಲಾಯಿತು. ಅಂತಿಮ್ ತವರಿಗೆ ಮರಳಿದರು. ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

ಬಿಂದ್ರಾಗೆ ಗೌರವ

ಒಲಿಂಪಿಕ್ ಆಂದೋಲನಕ್ಕೆ ನೀಡಿದ ಗಣನೀಯ ಕೊಡುಗೆಗಾಗಿ ಶೂಟಿಂಗ್ ಕ್ಷೇತ್ರದ ದಿಗ್ಗಜ, ಐಒಸಿ ಅಥ್ಲೀಟ್‌ಗಳ ಆಯೋಗದ ಉಪಾಧ್ಯಕ್ಷ ಅಭಿನವ್ ಬಿಂದ್ರಾ ಅವರಿಗೆ ಶನಿವಾರ ರಾತ್ರಿ ಪ್ಯಾರಿಸ್‌ನಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ 'ಒಲಿಂಪಿಕ್ ಆರ್ಡರ್' ಪದಕವನ್ನು ಪ್ರದಾನ ಮಾಡಿದರು –ಎಕ್ಸ್ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕಾ	40	44	42	126
ಚೀನಾ	40	27	24	91
ಜಪಾನ್	20	12	13	45
ಆಸ್ಟ್ರೇಲಿಯಾ	18	19	16	53
ಫ್ರಾನ್ಸ್	16	26	22	64
ನೆದರ್ಲೆಂಡ್ಸ್	15	7	12	34
ಬ್ರಿಟನ್	14	22	29	65
ದ.ಕೊರಿಯಾ	13	9	10	32
ಇಟಲಿ	12	13	15	40
ಜರ್ಮನಿ	12	13	8	33
ನ್ಯೂಜಿಲೆಂಡ್	10	7	3	20
ಕೆನಡಾ	9	7	11	27
ಉಜ್ಬೇಕಿಸ್ತಾನ	8	2	3	13
ಹಂಗೇರಿ	6	7	6	19
ಸ್ಪೇನ್	5	4	9	18
ಸ್ವೀಡನ್	4	4	3	11
ಕೆನ್ಯಾ	4	2	5	11
ನಾರ್ವೆ	4	1	3	8
ಐರ್ಲೆಂಡ್	4	0	3	7
ಭಾರತ	0	1	5	6

ಪಟ್ಟಿಯಲ್ಲಿ ಭಾರತ 71ನೇ ಸ್ಥಾನದಲ್ಲಿದೆ

ಮಹಿಳೆಯರ ಮ್ಯಾರಥಾನ್ ಚಿನ್ನ ಗೆದ್ದ ಸಿಫಾನ್

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್): ಸುದೀರ್ಘ ಅಂತರದ ಓಟದಲ್ಲಿ ಅವಕಾಶ ನೋಡುವ ಸಿಫಾನ್ ಹಸನ್ ಅವರ ನಿರ್ಧಾರ ಫಲನೀಡಿತು. ಹಾಲೆಂಡ್‌ನ ಓಟಗಾರ್ತಿ ಸಿಫಾನ್ ಅವರು ಭಾನುವಾರ ನಡೆದ ಒಲಿಂಪಿಕ್ಸ್ ಮಹಿಳೆಯರ ಮ್ಯಾರಥಾನ್ ಓಟದಲ್ಲಿ ದಾಖಲೆಯೊಡನೆ ಚಿನ್ನದ ಪದಕ ಗೆದ್ದುಕೊಂಡರು.

ಇಥಿಯೋಪಿಯಾ ಸಂಜಾತೆಯಾದ ಡಚ್ ಓಟಗಾರ್ತಿ ಸಿಫಾನ್ ಹಾಲಿ ಒಲಿಂಪಿಕ್ಸ್‌ನಲ್ಲಿ 5,000 ಮತ್ತು 10,000 ಮೀಟರ್ ಓಟದಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದು, ಮೂರನೇ ಪದಕದ ನಿರೀಕ್ಷೆಯಲ್ಲಿ ಮ್ಯಾರಥಾನ್ ಓಟ ಓಡಿದ್ದರು.

ಈ ಪ್ರಯತ್ನ ಸಿಫಾನ್ ಅವರ ಛಲಕ್ಕೆ ನಿದರ್ಶನವಾಯಿತು. ಕೋವಿಡ್ ಸಮಯದಲ್ಲಿ ನಡೆದ ಟೋಕಿಯೊ ಕ್ರೀಡೆಗಳಲ್ಲಿ ಇದೇ ಓಟಗಾರ್ತಿ ಎರಡು ಚಿನ್ನ (5,000 ಮತ್ತು 10,000 ಮೀ. ಓಟ) ಮತ್ತು ಒಂದು ಕಂಚು (1,500 ಮೀ. ಓಟ) ಗೆದ್ದುಕೊಂಡಿದ್ದರು.

ಸಿಫಾನ್ 2 ಗಂಟೆ 22.55 ಸೆ.ಗಳಲ್ಲಿ ಮುಕ್ತಾಯದ ರೇಖೆ ದಾಟಿದರು. ಇದು ಒಲಿಂಪಿಕ್ ದಾಖಲೆ. ಅವರಿಗೆ ತೀವ್ರ ಪೈಪೋಟಿ ನೀಡಿದ ಇಥಿಯೋಪಿಯಾದ ಟಿಗ್ಸ್ಟ್ ಅಸೀಫಾ (2:22.58) ಮೂರು ಸೆಕೆಂಡುಗಳ ಅಂತರದಲ್ಲಿ ಬೆಳ್ಳಿಗೆ ಸಮಾಧಾನಪಡಬೇಕಾಯಿತು. ಕೆನ್ಯಾದ ಹೆಲೆನ್ ಒಬಿರಿ (2:23.10) ಕಂಚಿನ ಪದಕ ಗೆದ್ದುಕೊಂಡರು.

ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ 81 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ 309 (136+173) ಕೆಜಿ ಭಾರವನ್ನು ಎತ್ತಿ ಚಿನ್ನದ ಪದಕ ಗೆದ್ದ ವಿಶ್ವ ಚಾಂಪಿಯನ್ ಚೀನಾದ ವೆನ್ವೆನ್ ಲಿ, ತನ್ನ ಕೋಚ್ ವು ಮೇ ಜೆನ್ ಅವರೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ನಿಯಮಕ್ಕೆ ಬದ್ಧರಾಗಬೇಕಾಗುತ್ತದೆ ವಿಶ್ವ ಕುಸ್ತಿ ಸಂಸ್ಥೆ ಮುಖ್ಯಸ್ಥ ನೆನಾದ್

ನವದೆಹಲಿ: ತಮಗೆ ಬೆಳ್ಳಿ ಪದಕ ನೀಡುವಂತೆ ಅನರ್ಹ ಗೊಂಡಿರುವ ಕುಸ್ತಿಪಟು ವಿನೇಶ್ ಫೋಗಟ್ ಅವರ ಮನವಿಗೆ ಸಂಬಂಧಿಸಿ ಕ್ರೀಡಾ ನ್ಯಾಯಮಂಡಳಿ (ಸಿಎಎಸ್) ನಿರ್ಧಾರಕ್ಕೆ ಇಡೀ ದೇಶ ಕಾತರದಿಂದ ಕಾಯುತ್ತಿದೆ. ಈ ಮಧ್ಯೆ ವಿಶ್ವ ಕುಸ್ತಿ ಆಡಳಿತ ನಿರ್ವಹಿಸುವ ಯುನೈಟೆಡ್ ರೆಸ್ಲಿಂಗ್ ಫೆಡರೇಷನ್ (ಯುಡಬ್ಲ್ಯುಡಬ್ಲ್ಯು) ಅಧ್ಯಕ್ಷ ನೆನಾದ್ ಲಾಲೊವಿಕ್ ಅವರು ದೇಹತೂಕ ವಿವಾದಕ್ಕೆ ಸಂಬಂಧಿಸಿ ಮಾತನಾಡಿದ್ದು, ವಿನೇಶ್ ಬಗ್ಗೆ ಅನುಕಂಪವನ್ನೂ ವ್ಯಕ್ತಪಡಿಸಿದ್ದಾರೆ.

ಆದರೆ ಫಲಿತಾಂಶ ಬದಲಾಗುವ ಸಾಧ್ಯತೆ ಕಡಿಮೆ. ಏನು ನಿಯಮಗಳಿವೆಯೊ ಅದನ್ನಷ್ಟೇ ಯುಡಬ್ಲ್ಯುಡಬ್ಲ್ಯು ಪಾಲಿಸುತ್ತದೆ ಎಂದಿದ್ದಾರೆ.

50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ವಿನೇಶ್, ಫೈನಲ್ (ಆಗಸ್ಟ್ 7) ದಿನ ಬೆಳಿಗ್ಗೆ ತೂಕ ನೋಡುವ ವೇಳೆ ನಿಗದಿ (50ಕೆ.ಜಿ)ಗಿಂತ 100 ಗ್ರಾಂ ಅಧಿಕ ತೂಕ ಹೊಂದಿದ್ದ ಕಾರಣ ಸ್ಪರ್ಧೆಯಿಂದ ಅನರ್ಹಗೊಂಡಿದ್ದರು. ಇದರ ವಿರುದ್ಧ ಅವರು ಸಿಎಎಸ್ ಮೊರೆಹೋಗಿದ್ದಾರೆ.

'ನಡೆದುಹೋಗಿರುವ ಪ್ರಕರಣದ ಬಗ್ಗೆ ನನಗೆ ವಿಷಾದವಿದೆ. ಇಲ್ಲಿ ದೇಶದ ಗಾತ್ರ ಲೆಕ್ಕಕ್ಕೆ ಬರುವುದಿಲ್ಲ. ಕ್ರೀಡಾಪಟುಗಳು ಕ್ರೀಡಾಪಟುಗಳಷ್ಟೇ. ತೂಕ ನೋಡುವುದು ಬಹಿರಂಗವಾಗಿ. ಏನಾಯಿತು ಎಂಬುದನ್ನು ಎಲ್ಲರೂ ನೋಡಿದ್ದಾರೆ. ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಾದ ಮೇಲೆ ಅಂಥವರಿಗೆ ನಾವು ಸ್ಪರ್ಧೆಗೆ ಅವಕಾಶ ನೀಡುವುದಾದರೂ ಹೇಗೆ? ನಮ್ಮ ಮುಂದೆ ನಿಯಮ ಪಾಲಿಸದೇ ಬೇರೇನೂ ಆಯ್ಕೆಗಳು ಇರಲಿಲ್ಲ' ಎಂದು ಲಾಲೊವಿಕ್ ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

50 ಕೆ.ಜಿ. ವಿಭಾಗದಲ್ಲಿ ಮೂರು ದಿನಗಳ ಹಿಂದೆಯೇ ಚಿನ್ನ, ಬೆಳ್ಳಿ, ಕಂಚಿನ ಪದಕಗಳ ಪ್ರದಾನವಾಗಿದೆ. ಕುಸ್ತಿಯಲ್ಲಿ ಎರಡನೇ ಬೆಳ್ಳಿ ಪದಕ ನೀಡಲು ಅವಕಾಶವಿಲ್ಲ. ಆದರೆ ವಿನೇಶ್ ಮತ್ತು ಅವರ ಪರ ಹೋರಾಟ ಮಾಡುವವರು ಇನ್ನೂ ವಿಶ್ವಾಸ ಹೊಂದಿದ್ದಾರೆ. ಆಗಸ್ಟ್ 13ರಂದು ಈ ಬಗ್ಗೆ ನಿರ್ಧಾರ ಆಗಲಿದೆ.

ಪ್ಯಾರಿಸ್ ಒಲಿಂಪಿಕ್ಸ್ ಮಹಿಳೆಯರ 4x400 ಮೀ. ರಿಲೆ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಅಮೆರಿಕ ತಂಡದ ಅಲೆಕ್ಸಿಸ್ ಹೋಲ್ಮೆಸ್, ಗೇಬ್ರಿಯಲ್ ಥಾಮಸ್, ಶೆಮಿಯರ್ ಲಿಟಲ್, ಸಿಡ್ನಿ ಮೆಕ್‌ಲಾಗ್ಲಿನ್ ಲೆವ್ರೋನ್ (ಎಡಚಿತ್ರ). ಪುರುಷರ 4x400 ಮೀ. ರಿಲೆ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಅಮೆರಿಕ ತಂಡದ ಕ್ರಿಸ್ಟೋಫರ್ ಬೈಲಿ, ವೆರ್ನಾನ್ ನಾರ್ವುಡ್, ಬೆಂಜಮಿನ್ ರೆ, ಬ್ರೈಸ್ ಡೆಡ್ಮನ್ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರಗಳು: ಕೆ.ಎನ್. ಶಾಂತಕುಮಾರ್

ರಿಲೆ: ಅಮೆರಿಕ ತಂಡಗಳಿಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಅಮೆರಿಕವು ಸತತ ಎಂಟನೇ ಬಾರಿ ಒಲಿಂಪಿಕ್ಸ್ ಮಹಿಳೆಯರ 4x400 ರಿಲೆ ಓಟದ ಸ್ಪರ್ಧೆಯಲ್ಲಿ ಚಿನ್ನವನ್ನು ಗೆದ್ದುಕೊಂಡಿತು. ಪ್ಯಾರಿಸ್ ಒಲಿಂಪಿಕ್ಸ್ ಟ್ರ್ಯಾಕ್ ಮತ್ತು ಫಿಲ್ಡ್ ಸ್ಪರ್ಧೆಗಳಲ್ಲಿ ಅಮೆರಿಕವು 14 ಚಿನ್ನದ ಪದಕ ತನ್ನದಾಗಿಸಿಕೊಂಡಿತು.

ಒಲಿಂಪಿಕ್ಸ್‌ನಲ್ಲಿ ಎರಡು ಬಾರಿಯ 400 ಮೀ. ಹರ್ಡಲ್ಸ್ ಚಾಂಪಿಯನ್ ಸಿಡ್ನಿ ಮೆಕ್‌ಲಾಗ್ಲಿನ್ ಲೆವ್ರೊನ್ ಮತ್ತು 200 ಮೀ. ಚಿನ್ನದ ಪದಕ ವಿಜೇತ ಗ್ಯಾಬಿ ಥಾಮಸ್ ಅವರನ್ನೊಳಗೊಂಡ ಅಮೆರಿಕದ ತಾರಾ ಓಟಗಾರ್ತಿಯರ ತಂಡವು 3 ನಿಮಿಷ 15.27 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಬಾಚಿಕೊಂಡಿತು.

3 ನಿಮಿಷ 19.50 ನಿಮಿಷಗಳಲ್ಲಿ ಗುರಿ ತಲುಪಿದ ನೆದರ್ಲೆಂಡ್ಸ್ ತಂಡ ಬೆಳ್ಳಿ ಮತ್ತು ಗುರಿ ತಲುಪಲು 2 ನಿಮಿಷ 19.72 ಸೆಕೆಂಡು ಸಮಯ ತೆಗೆದುಕೊಂಡ ಬ್ರಿಟನ್ ತಂಡ ಕಂಚಿನ ಪದಕ ಬಾಚಿಕೊಂಡವು.

ಪುರುಷರ 4x400 ಮೀ. ರಿಲೆ ಸ್ಪರ್ಧೆಯಲ್ಲಿ ಅಮೆರಿಕ ತಂಡ ಚಿನ್ನದ ಪದಕಕ್ಕೆ ಕೊರಳೊಡ್ಡಿತು.

ಬೆಂಜಮಿನ್ ರೆ, ಕ್ರಿಸ್ಟೋಫರ್ ಬೈಲಿ, ವೆರ್ನಾನ್ ನಾರ್ವುಡ್ ಮತ್ತು ಬ್ರೈಸ್ ಡೆಡ್ಮನ್ ಅವರನ್ನೊಳಗೊಂಡ ತಂಡ 2 ನಿಮಿಷ 54.43 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಬೋಟ್ಸ್‌ವಾನಾ ತಂಡ ಬೆಳ್ಳಿ ಮತ್ತು ಬ್ರಿಟನ್ ತಂಡ ಕಂಚಿನ ಪದಕ ಪಡೆದುಕೊಂಡವು

ಹೈಜಂಪ್: ನ್ಯೂಜಿಲೆಂಡ್‌ನ ಕೆರ್‌ಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ನ್ಯೂಜಿಲೆಂಡ್‌ನ ಹಮಿಶ್ ಕೆರ್ ಅವರು ಅಮೆರಿಕದ ಸೆಲ್ಬಿ ಮೆಕ್‌ಇವೆನ್ ಅವರ ತೀವ್ರ ಪೈಪೋಟಿಯನ್ನು ಯಶಸ್ವಿಯಾಗಿ ಎದುರಿಸಿ ಹೈಜಂಪ್‌ನಲ್ಲಿ ಚಿನ್ನ ತಮ್ಮದಾಗಿಸಿಕೊಂಡರು.

ಕೆರ್ ಮತ್ತು ಮೆಕ್‌ಇವೆನ್ 2.36 ಮೀ. ಎತ್ತರ ಜಿಗಿಯುವಲ್ಲಿ ಯಶಸ್ವಿಯಾದರು. ಆದರೆ, ಕೌಂಟ್‌ಬ್ಯಾಕ್ ಆಧಾರದಲ್ಲಿ ಜಯವನ್ನು ನಿರ್ಧರಿಸಲಾಗಲಿಲ್ಲ. ನಂತರ ಚಿನ್ನದ ಪದಕಕ್ಕಾಗಿ ಜಂಪ್‌ಆಫ್ ಮೊರೆ ಹೋಗಲಾಯಿತು. ಅಲ್ಲಿ 2.34 ಮೀ. ಎತ್ತರವನ್ನು ಯಶಸ್ವಿಯಾಗಿ ಜಿಗಿದ ಹಮಿಶ್ ಕೆರ್ ಚಿನ್ನ ಪದಕಕ್ಕೆ ಕೊರಳೊಡಿದ್ದರು. ಸೆಲ್ಬಿ ಮೆಕ್‌ಇವೆನ್ ಬೆಳ್ಳಿಗೆ ತೃಪ್ತರಾದರು. ಕತಾರ್‌ನ ಮುತಾಜ್ ಇಸ್ಸಾ ಬಾರ್ಶಿಮ್ ಕಂಚು ಗೆದ್ದರು.

ಐಫೆಲ್ ಗೋಪುರ ಏರಿದ ಅಪರಿಚಿತ

ಪ್ಯಾರಿಸ್ (ಎಪಿ): ಆಗಂತುಕನೊಬ್ಬ, ಇಲ್ಲಿನ ಹೆಗ್ಗುರುತಾದ ಐಫೆಲ್ ಟವರ್ ಏರುತ್ತಿರುವುದು ಕಂಡುಬಂದ ಕಾರಣ ಪೊಲೀಸರು ಈ ಸ್ಮಾರಕದ ಸುತ್ತಮುತ್ತಲಿನ ಜನರನ್ನು ತೆರವುಗೊಳಿಸಿದ್ದಾರೆ. ಭಾನುವಾರ ಸಂಜೆ ಉದ್ಘಾಟನಾ ಸಮಾರಂಭಕ್ಕೆ ಕೆಲವು ಗಂಟೆಗಳಿರುವಂತೆ ಶರ್ಟು ಹಾಕಿಲ್ಲದೇ ಇರುವ ವ್ಯಕ್ತಿ ಕಾಣಿಸಿಕೊಂಡಿದ್ದಾನೆ.

330 ಮೀ. ಎತ್ತರದ ಈ ಗೋಪುರವನ್ನು ವ್ಯಕ್ತಿ ಹತ್ತುತ್ತಿರುವುದು ಮಧ್ಯಾಹ್ನ ಗೋಚರವಾಗಿದೆ. ಈ ಸ್ಮಾರಕದ ಎರಡನೇ ಹಂತದಲ್ಲಿ (ಸೆಕ್ಷನ್‌ನಲ್ಲಿ) ಒಲಿಂಪಿಕ್ ಬಳೆಗಳನ್ನು ಜೋಡಿಸಲಾಗಿದ್ದು, ಅದಕ್ಕಿಂತ ಸ್ವಲ್ಪ ಮೇಲೆ ಕಾಣಿಸಿದ್ದಾನೆ.

ಮಧ್ಯಾಹ್ನ 3 ಗಂಟೆ ಸುಮಾರಿಗೆ ವ್ಯಕ್ತಿ ಕಾಣಿಸಿಕೊಂಡಾಗ ಪೊಲೀಸರು ಜನರನ್ನು ಅಲ್ಲಿಂದ ಖಾಲಿ ಮಾಡಿಸಿದ್ದಾರೆ. ಗೊಂದಲ ತಪ್ಪಿಸಲು 30 ನಿಮಿಷ ನಂತರ ಟವರ್‌ನ ಎರಡನೇ ಫ್ಲೋರ್‌ನಲ್ಲಿದ್ದ ಜನರಿಗೆ ಕೆಳಗಿಳಿಯಲು ಅವಕಾಶ ನೀಡಲಾಯಿತು.



ಈಜು: ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡ ಒಡಿಶಾದ ಭುವನೇಶ್ವರದಲ್ಲಿ ಮುಕ್ತಾಯವಾದ 40ನೇ ಸಬ್ ಜೂನಿಯರ್ ಮತ್ತು 50ನೇ ಜೂನಿಯರ್ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿತು. ರಾಜ್ಯ ತಂಡ ಒಟ್ಟಾರೆ 799 ಅಂಕ ಕಲೆ ಹಾಕಿತು.

ಬಾಲಕಿಯರ ಗುಂಪು -2ರಲ್ಲಿ 5 ಪದಕಗಳನ್ನು ಜಯಿಸಿದ ರಾಜ್ಯದ ಧೀನಿಧಿ ದೇಸಿಂಗು ಅತ್ಯುತ್ತಮ ಈಜುಗಾರ್ತಿ ಪ್ರಶಸ್ತಿ ಪಡೆದುಕೊಂಡರು.

ಜೂನಿಯರ್ ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿಯೊಂದಿಗೆ ಕರ್ನಾಟಕ ಈಜು ತಂಡ

ಕರ್ನಾಟಕದ ಸ್ಪರ್ಧಿಗಳ ಫಲಿತಾಂಶಗಳು: ಬಾಲಕರ ಗುಂಪು-1: 100 ಮೀ. ಫ್ರೀಸ್ಟೈಲ್: ಚಿಂತನ್ ಎಸ್.ಶೆಟ್ಟಿ (52.87ಸೆ)-2, ಆರ್ಯನ್ ಕೈಲಾಸ್ (53.08)-3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಸೂರ್ಯ ಜ್ಯೋಯಪ್ಪ (1ನಿ 07.57ಸೆ)-2, ಕ್ರಿಷ್ ಸುಕುಮಾರ್ (1ನಿ 07.64ಸೆ)-3. ಗುಂಪು-2: 400 ಮೀ. ಮೆಡ್ಲೆ:ದ್ರುಪದ್ ರಾಮಕೃಷ್ಣ (4ನಿ 57.12ಸೆ)-3. 100 ಮೀ. ಫ್ರೀ ಸ್ಟೈಲ್: ಅಕ್ಷಜ್ ಠಾಕೂರಿಯಾ (55.40ಸೆ)-1, ರಿಷಿತ್ ರಂಗನ್ (56.41)-3. **ಬಾಲಕಿಯರ ಗುಂಪು-1:** 200 ಮೀ.ಮೆಡ್ಲೆ: ಮಾನವಿ ವರ್ಮಾ (2ನಿ 25.83ಸೆ)-1, ತಾನ್ಯಾ ಷಡಕ್ಷರಿ (2ನಿ 28.38ಸೆ)-2.100 ಮೀ.ಫ್ರೀಸ್ಟೈಲ್: ಖುಜುಲಾ ಎಸ್. (58.76)-1. ಗುಂಪು-2: 200 ಮೀ. ಮೆಡ್ಲೆ: ಧೀನಿಧಿ ದೇಸಿಂಗು (2ನಿ 26.97)-1. 100 ಮೀ ಫ್ರೀಸ್ಟೈಲ್: ಧೀನಿಧಿ ದೇಸಿಂಗು (57.75ಸೆ)-1. ಗುಂಪು-3: 50 ಮೀ ಬ್ರೆಸ್ಟ್‌ಸ್ಟ್ರೋಕ್: ಶ್ರೇಯಾ ಸುರೇಶ್ ಪೂಜಾರ್ (39.62ಸೆ)-3.

ಅಮೆರಿಕ ಬ್ಯಾಸ್ಕೆಟ್‌ಬಾಲ್ ತಂಡಗಳಿಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಅಮೆರಿಕ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡವು ಫೈನಲ್‌ನಲ್ಲಿ 98–87ರಿಂದ ಆತಿಥೇಯ ಫ್ರಾನ್ಸ್ ತಂಡವನ್ನು ಮಣಿಸಿ, ಸತತ ಐದನೇ ಬಾರಿ ಒಲಿಂಪಿಕ್ಸ್ ಚಿನ್ನದ ಪದಕವನ್ನು ಗೆದ್ದುಕೊಂಡಿತು.

ಇದು ಪುರುಷರ ಬ್ಯಾಸ್ಕೆಟ್‌ಬಾಲ್‌ನಲ್ಲಿ ಅಮೆರಿಕಕ್ಕೆ 17ನೇ ಒಲಿಂಪಿಕ್ ಚಿನ್ನದ ಪದಕವಾಗಿದೆ.

ಮಹಿಳೆಯರ ಬ್ಯಾಸ್ಕೆಟ್‌ಬಾಲ್‌ನಲ್ಲೂ ಅಮೆರಿಕ ಚಿನ್ನ ಗೆದ್ದುಕೊಂಡಿತು. ಈ ಮೂಲಕ ಸತತ ಎಂಟನೇ ಬಾರಿ ಚಾಂಪಿಯನ್ ಆಯಿತು.

ಭಾನುವಾರ ನಡೆದ ಫೈನಲ್‌ನ ರೋಚಕ ಹಣಾಹಣಿಯಲ್ಲಿ 67–66ರಿಂದ ಫ್ರಾನ್ಸ್ ತಂಡವನ್ನು ಮಣಿಸಿತು.

ಪ್ಯಾರಿಸ್‌ನಿಂದ ತಮ್ಮ ತವರೂರು ಮಿಯಾ ಚಾನ್ನು ಪಟ್ಟಣಕ್ಕೆ ಮರಳಿದ ಒಲಿಂಪಿಕ್ಸ್ ಜಾವೆಲಿನ್ ಚಾಂಪಿಯನ್ ಅರ್ಷದ್ ನದೀಂ ಅವರು ತಮ್ಮ ತಾಯಿ ರಝಿಯಾ ಪರವೀನ್ ಅವರನ್ನು ಆಲಂಗಿಸಿಕೊಂಡರು –ಎಎಫ್‌ಪಿ ಚಿತ್ರ

ಅರ್ಷದ್‌ಗೆ ಮಾವನಿಂದ ಎಮ್ಮೆ ಉಡುಗೊರೆ

ಕರಾಚಿ (ಪಿಟಿಐ): ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸಿದ ನದೀಂ ಅರ್ಷದ್ ಅವರಿಗೆ ಪಾಕಿಸ್ತಾನದಲ್ಲಿ ಮೆಚ್ಚುಗೆಯ ಸುರಿಮಳೆಯಾಗುತ್ತಿದೆ.

ನದೀಂ ಅವರಿಗೆ ತಮ್ಮ ಮಾವನಿಂದ ವಿಶೇಷ ಉಡುಗೊರೆಯೂ ಲಭಿಸಿದೆ. ತಮ್ಮ ಪ್ರೀತಿಯ ಅಳಿಯನಿಗೆ ಅವರು ಎಮ್ಮೆಯನ್ನು ಕಾಣಿಕೆ ನೀಡಿದ್ದಾರೆ.

‘ನಮ್ಮ ಸಂಪ್ರದಾಯದಲ್ಲಿ ಎಮ್ಮೆ ಕಾಣಿಕೆ ನೀಡುವುದು ಅಮೂಲ್ಯವಾದುದು. ದೊಡ್ಡ ಗೌರವವೂ ಹೌದು’ ಎಂದು ನದೀಂ ಅವರ ಮಾವ ಮೊಹಮ್ಮದ್ ನವಾಜ್ ಸ್ಥಳೀಯ ಮಾಧ್ಯಮಗಳಿಗೆ ಹೇಳಿದ್ದಾರೆ.

‘ನದೀಂ ತಮ್ಮ ಬೇರುಗಳನ್ನು ಎಂದಿಗೂ ಮರೆತಿಲ್ಲ. ದೊಡ್ಡ ಸಾಧನೆ ಮಾಡಿದರೂ ತಮ್ಮ ಗ್ರಾಮದಲ್ಲಿರುವ ಮನೆಯಲ್ಲಿ ಪಾಲಕರು ಮತ್ತು ಸಹೋದರರೊಂದಿಗೆ ವಾಸಿಸುತ್ತಾರೆ’ ಎಂದು ನವಾಜ್ ಹೇಳಿದರು.

‘ನನಗೆ ನಾಲ್ವರು ಗಂಡುಮಕ್ಕಳು ಮತ್ತು ಮೂವರು ಹೆಣ್ಣುಮಕ್ಕಳಿದ್ದಾರೆ. ಕಿರಿಯ ಪುತ್ರಿ ಅಯೇಷಾ ಅವರನ್ನು ನದೀಂ ಮದುವೆಯಾಗಿದ್ದಾರೆ’ ಎಂದು ನವಾಜ್ ತಿಳಿಸಿದರು. ‘ದಂಪತಿಗೆ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ’ ಎಂದೂ ತಿಳಿಸಿದರು.

‘ಮೈಸೂರು ಓಪನ್–2024’ ಗಾಲ್ಫ್ ಟೂರ್ನಿಯ ಚಾಂಪಿಯನ್ ಶೌರ್ಯ ಬಿನು (ಬಲ) ಅವರೊಂದಿಗೆ ‘ಉತ್ತಮ ಹವ್ಯಾಸಿ ಗಾಲ್ಫರ್’ ವೀರ್ ಗಣಪತಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

ಗಾಲ್ಫ್: ಶೌರ್ಯ ಬಿನು ಚಾಂಪಿಯನ್

ಮೈಸೂರು: ಬೆಂಗಳೂರಿನ ಯುವ ಗಾಲ್ಫರ್ ಶೌರ್ಯ ಬಿನು ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ‘ಮೈಸೂರು ಓಪನ್-2024’ ಗಾಲ್ಫ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಹಾಗೂ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಸಹಯೋಗ ದಲ್ಲಿ ನಡೆದ ಟೂರ್ನಿಯ ಕಡೆಯ ಎರಡು ದಿನಗಳಲ್ಲಿ ಉತ್ತಮ ಪ್ರದರ್ಶನದೊಂದಿಗೆ (ಸ್ಕೋರ್: 23 ಅಂಡರ್ 257) ಶೌರ್ಯ ₹15 ಲಕ್ಷ ನಗದು ಬಹುಮಾನ ತಮ್ಮದಾಗಿಸಿಕೊಂಡರು. ಅವರು ಈ ವರ್ಷ ಜಯಿಸಿದ ಎರಡನೇ ಪ್ರಶಸ್ತಿ ಇದಾಗಿದೆ. ಫೆಬ್ರುವರಿಯಲ್ಲಿ ಊಟಿಯಲ್ಲಿ ನಡೆದ ಪಿಜಿಟಿಐ ಟೂರ್ನಿಯಲ್ಲೂ ಅವರು ಪ್ರಶಸ್ತಿ ಪಡೆದಿದ್ದರು.

ಪಟ್ನಾದ ಗಾಲ್ಫರ್ ಅಮನ್ ರಾಜ್ ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನ ಆಗಿ ₹10 ಲಕ್ಷ ಬಹುಮಾನ ಗಳಿಸಿದರು. ಮೊದಲ ಎರಡು ದಿನ ಮುನ್ನಡೆಯಲ್ಲಿದ್ದ ಈ ಆಟಗಾರ ಕಡೆಯ ದಿನ ಮುನ್ನಡೆ ಕೈಚೆಲ್ಲಿ ನಿರಾಸೆ ಅನುಭವಿಸಿದರು. ಮೈಸೂರಿನ ಗಾಲ್ಫರ್ ವೀರ್ ಗಣಪತಿ ಚೇತೋಹಾರಿ ಪ್ರದರ್ಶನದ ಮೂಲಕ ‘ಉತ್ತಮ ಹವ್ಯಾಸಿ ಗಾಲ್ಫರ್’ ಗೌರವಕ್ಕೂ ಪಾತ್ರರಾದರು.